ಕಲ್ಯಾಣ ಭಾರತಿ

ಮಲ್ಲಿಕಾ

ಕಲ್ಯಾಣ ಭಾರತಿ

ಮಲ್ಲಿಕಾ

ಮಧುರಂ ರಸವದ್ವಾಚಿ
ವಸ್ತುನ್ಯಪಿ ರಸಸ್ಥಿತಿಃ ||
ಏನಮಾದ್ಯಂತಿ ಧೀಮಂತೋ
ಮಧುನೇನ ಮಧುವ್ರತಾಃ ||

Kalyana Bharathi in Kannada by 'Mallika'
Published by Lakshmi Prakashana,
170, Langford Road, Bangalore-560 025.

ಪ್ರಥಮ ಮುದ್ರಣ : ೧೯೯೦

ಬೆಲೆ : ಇಪ್ಪತ್ನಾಲ್ಕು ರೂಪಾಯಿಗಳು

ಮುದ್ರಕರು :
ನ್ಯೂ ಐಡಿಯಾಸ್
ನಂ. 30, 15ನೇ ಮುಖ್ಯ ರಸ್ತೆ
ಮೂರನೆಯ ವಿಭಾಗ, ಜಯನಗರ
ಬೆಂಗಳೂರು–560 011

ಕಲ್ಯಾಣ ಭಾರತಿ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–870 025

ಪರಿವಿಡಿ

ನಿವೇದನೆ

ಭಾರತ ರಾಷ್ಟ್ರೀಯ ಪ್ರಖ್ಯಾತ ವ್ಯಕ್ತಿಗಳ ಹಾಗೂ ಪೌರಾಣಿಕ ವ್ಯಕ್ತಿಶ್ರೀಗಳ ಸಂಜೀವನ ಚಿತ್ರಗಳನ್ನು ಪದ್ಯ ಕಥನಾವಳಿಗಳನ್ನಾಗಿ ಚಿತ್ರಿಸುವುದು ಎದೆಯ ಹಾರೈಕೆ. ಉಪಮಾರೂಪಕಾದ್ಯಲಂಕಾರಗಳನ್ನೂ, ತತ್ತ್ವದರ್ಶನಗಳನ್ನು ಪದ್ಯಶೈಲಿಗೆ ಅಳವಡಿಸುವ ಪ್ರಯತ್ನದಲ್ಲಿ ಆಧುನಿಕ ಪದ್ಯ ಕಥನ ನಿಷ್ಠೆಯನ್ನು ಸರಳ ರಗಳೆಯಲ್ಲಿ ಆದಷ್ಟು ಸರಳರೂಪವಾಗಿ ಹರಿಸಿರುವೆ. ಇದು ಎಷ್ಟರ ಮಟ್ಟಿಗೆ ವಿಜಯ ಸಾಧಿಸಿದೆ ಎಂಬುದರ ವಿಮರ್ಶೆಯು ಬುದ್ಧಿವಾನ್ಯರಿಗೆ ಸೇರಿದ್ದು. ಸರಾಗವಾಗಿ ಓದಿಸಿಕೊಳ್ಳುವಂತೆ ಹರಿದ ಕಾವ್ಯರಸಧಾರೆಯ ನಿರೂಪಣೆಯು ಬಾಲರಿಂದ ಪ್ರೌಢರವರೆಗೆ ಸಾಹಿತ್ಯಾರ್ಥ ಎಟುಕುವಷ್ಟು ಸುಲಭ ಎನ್ನಬಹುದು. ವಿನೂತನ ಛಂದಸ್ಸಿನ ವಿಶಿಷ್ಟಶೈಲಿಯ ದರ್ಶನ ತತ್ತ್ವಾಲೋಚನೆಗಳ ಭಾವಲಹರಿಯನ್ನು ಮನಸ್ಸಿಟ್ಟು ಸವಿಯ ಬಲ್ಲವರಿಗೆ ಸವಿಬೆಲ್ಲ. ಪದ್ಯಗಳು ಅರ್ಥಾತ್ ಕಬ್ಬಿಣದ ಕಡಲೆ ಎಂಬ ಉದಾಸೀನ ಮನೋಭಾವಕ್ಕೆ ಬೇವಿನ ಕಹಿ ಗುಳಿಗೆ.

ಮಂಗಳ ಭಾರತಿ ಎಂಬ ನನ್ನ ಹಿಂದಿನ ಕಾವ್ಯಗುಚ್ಛದ ಅವಳಿಕೃತಿ ಈ ಕಲ್ಯಾಣ ಭಾರತಿ. ನನ್ನ ಬಹುತೇಕ ಕೃತಿಗಳು ಅವಳಿಗಳಾಗಿಯೇ ಜನಿಸಿವೆ. ಏಕಾಗ್ರಚಿತ್ತದಿಂದ ಕಾವ್ಯಕಾಮಿನಿಯು ವಿಶ್ವರೂಪದರ್ಶನ ಮಾಡಿದಾಗ ಹೃನ್ಮನಗಳು ಸಾಗರದ ಹೆದ್ದೆರೆಗಳಂತೆ ಉಕ್ಕೇರುವುದು ಸಹಜ. ಚಿಂತನ ಮಂಥನಗಳ ಹದನಿಕೆಯಲ್ಲಿ ರಸದೂಟ ಚಿಮ್ಮಿ ರಸಾನುಭವದ ಆವೇಶದಿಂದ ಹೊಮ್ಮಿದ ಕಾವ್ಯಲಕ್ಷ್ಮಿ ಬಹುಕಾಲ ನಿಲ್ಲಬಲ್ಲಳು. ಕವಯಿತ್ರಿಯ ಮನೋಗತಿಗೆ ಹಿಡಿದ ದರ್ಪಣದಲ್ಲಿ ಹೊಮ್ಮಿದ ಕೃತಿ ಆತ್ಮ ದರ್ಶಕವಾಗಿ ಜನಮನವನ್ನು ಆಕರ್ಷಿಸುವಂತಾದರೆ ಕೃತಿಕರ್ತೆಯ ಶ್ರಮ ಸಾಧನೆ ಸಾರ್ಥಕ. ಗಂಭೀರ ಸಾಹಿತ್ಯವನ್ನು ಸವಿಯುವ ಪುಣ್ಯಭಾವದೊಂದಿಗೆ ಸ್ವಸಾಮರ್ಥ್ಯವೂ ಇದ್ದುದಾದರೆ ಅದೊಂದು ವಿಶೇಷವೇ ಸರಿ. ಅಲ್ಲದೆ ಹೋದರೆ ಆಸೆ ಆಕಾಶದಷ್ಟು ಸಾಧನೆ ಸಾಸುವೆಯಷ್ಟು ಎಂಬಂತಾಗುತ್ತದೆ.

ದಿನದಿನವೂ ವೈಭವೋಪೇತವಾದ ನಿಸರ್ಗ ಸೌಂದರ್ಯವನ್ನು ಕಣ್ತುಂಬ ನೋಡಿಯೂ ಮನದುಂಬಿಕೊಳ್ಳಲಾಗದ ರಸಹೀನದೃಷ್ಟಿಯು ನಿರಾಶಾಭಾವಕ್ಕೆ ಮನ ಮರುಗಿ ಕರಗುವೆ. ಅನುದಿನ ಸಂಭವಿಸುವ ಮಹೋನ್ನತವಾದ ಉದಯಾಸ್ತಮಾನಗಳ ದಿವ್ಯಾರಾಧನೆ ಎಷ್ಟು ಮಂದಿಗೆ ಸಾಧ್ಯ ? ವರ್ಷಾಕಾಲದ ದ್ರೋಣಕುಂಭಮಳೆ, ವಸಂತ ಪ್ರಭುವಿನ ಒಡ್ಡೋಲಗದ ಪುಷ್ಪರಾಜಿ, ಸಮುದ್ರರಾಜನ ಅಗಾಧವಾದ ಜಲರಾಶಿಯು ಬೃಹದ್ ಅಲೆಗಳ ರುದ್ರರಮಣೀಯ ಸೌಂದರ್ಯ, ಮಾಗಿಯ ಮುಗಿಲ್ಮಂಜು, ವಿಶ್ವವಿರಾಟ್ ಪರ್ವತಗಳ ರಚನಾಶೈಲಿ, ಬ್ರಹ್ಮಾಂಡದ ವೈಜ್ಞಾನಿಕಸತ್ಯಾತ್ಮಕ ತತ್ತ್ವ ಮುಂತಾದುವುಗಳನ್ನೂ, ಗದ್ದೆ ತೋಟ ಪೈರು ಪಚ್ಚೆ ಮನೆಗಳ ಸುರಮ್ಯ ಸೌಂದರ್ಯವನ್ನೂ ಕಂಡು ಮನದಣಿಯೆ ಆನಂದಿಸುವ ಸುಹೃದಯವಂತಿಕೆಯು ಎಷ್ಟು ಮಂದಿ ವಿದ್ಯಾವಂತರಿಗಿದೆ ? ಎಲ್ಲವೂ ದಿನನಿತ್ಯ ಕಣ್ಗೆಸೆಯುವ ಸರ್ವೇ ಸಾಮಾನ್ಯತೆ ಎಂಬೊಂದು ಉದಾಸೀನ ಮನೋಭಾವವನ್ನು ಎಲ್ಲೆಡೆಯೂ, ಯಾವಾಗಲೂ ಕಾಣುವುದು ಸತ್ಯಸ್ಯಸತ್ಯ. ಆದರೆ, ಈ ಎಲ್ಲವನ್ನೂ ಮನಗೊಂಡು ಹೃದಯ ತುಂಬಿ ಒಕ್ಕಣಿಸಲು ಶ್ರಮವಹಿಸುವ ಕವಿ ಹೃದಯದ ಪರಿಕಲ್ಪನೆಯೇ ಬೇರೆ. ಪರಮೋದ್ದೇಶವೇ ಬೇರೆ. ತಾನರಿದುದನ್ನು ಇತರ ಜನ ಸಾಮಾನ್ಯರಿಗೂ ಹಂಚುವ ಪರಿತೋಷ ಆತ್ಮಪೂರ್ವಕವಾದುದು ; ಮನೋಜನ್ಯವಾದುದು ; ಹಾಗೂ ಸಾಹಿತ್ಯಾಸಕ್ತಿಯ ಪ್ರಮಾಣವಾದುದು. ಅಂತಲೇ ಸರ್ವತ್ರ ಸದಾ ಸಾಹಿತ್ಯಾರಾಧನೆ ಶ್ರದ್ಧೆಯಿಂದಲೇ ನಡೆಯುತ್ತದೆ. ಹೃತ್ ರಸವಂತಿಕೆಯ ದೃಷ್ಟಿ ಸಾಹಿತ್ಯ ಸೃಷ್ಟಿಗೆ ಪೂರಕ.

ಪ್ರಮೋದನಾಮ ಸಂವತ್ಸರ ಚೈತ್ರ ಶುಕ್ಲ ಪೌರ್ಣಮಿ, ಸೋಮವಾರ

ಮಲ್ಲಿಕಾ
೯–೪–೧೯೯೦

ಪರಾಶಕ್ತಿ

ಹಿರಣ್ಮಯೇಣ ಪಾತ್ರೇಣ
ಸತ್ಯಸ್ಯಾ ವಿಹಿತಂ ಮುಖಂ ।
ತತ್ ತತ್ವಂ ಪೂಷನ್ನ ಪಾವೃಣೇ
ಸತ್ಯ ಧರ್ಮಾಯ ದೃಷ್ಟಯೇ ।

ಓ, ತಾಯೆ ! ಚಂಡ ಪ್ರಚಂಡ ಬ್ರಹ್ಮಾಂಡದ
ಚೆಲ್ವಾಂತ ಸುರಸೃಷ್ಟಿಯಲಿ ನೀನಲ್ತೇ ಮಾಯೆ
ನಿಯತಿಲೋಲೆ ? ನಿಚ್ಚ ಋತ-ಚಿತ್ ಕಲಾಕಲೇ ?
ಭವ್ಯ ಜಗತ್ತಿನ ಸೃಷ್ಟಿ ಶಕ್ತಿಯನರಳಿಸಿದ
ವಿಶ್ವ ಮೋಹಿನಿ ! ಪರಮ ಶಕ್ತಿ ಸ್ವರೂಪಿಣಿ !
ಉಜ್ವಲೋಜ್ವಲ ಸೂರ್ಯ ಚಂದ್ರ ತಾರಾಳಿಗಳ
ಸರಮಾಲೆ ಸೂಡಿ ಮೆರೆವ ನೀನೇ ನೀಲಿಮಾ ;
ನೀನೇ ಕಡಲು ; ನೀನೇ ತಡಿ ; ನೀನೇ ಪರಾಶಕ್ತಿ !
ಹಿರಣ್ಯವರ್ಣಾಂ ಜನನೀಂ ಜಗತ್ತಾರಿಣಿ !
ನಿನ್ನ ಬ್ರಹ್ಮಾಂಡ ಸೂತ್ರ ಸಾರದಲಿ ಅನುಕ್ಷಣಂ
ನಡೆದಿವೆ ಸಕಲ ಗ್ರಹ ಕೋಟಿಗಳ್ ಕಿಂಚಿತ್
ಸಡಿಲ್ಕದ ಮಾಳ್ಕಿಯಲಿ, ಓ ಎನ್ನಯ ತಾಯೇ !
ನೀನೇ ಗುರು; ನೀನೇ ದೈವ; ನೀನೇ ತಾಯ್ತಂದೆ !
ನೀನೆಲ್ಲಮಿರುತಿರಲ್ ನಿನ್ನ ತಿಳಿಯಲಾಗದೆಯೆ
ಅರಸೀಅರಸಿ ತೊಳಲಿ ಬಳಲುತಿಹೆ ದಿನದಿನಂ;
ಪರ್ಣಾರ್ಣವದಲಿ ಸೌಂದರ್ಯ ಶಾಲೀನ್ಯದಿಂ
ಸರ್ವದಾ ಅರಳರಳಿ ನಳನಳಿಸುತ ಸುಗಂಧ
ಗಂಧಿತ ಕುಸುಮ ವೇಶವಾವೇಶದಲಿ, ನಿಚ್ಚ
ಮನುಷ್ಯ ಶರೀರಗಳ ನಾಡಿ ನಾಡಿಯಲಿ, ಖಗ

→

ಮೃಗಗಳ ಪ್ರಾಣವಾಹಿಯಲಿ, ಅಣುತೃಣಗಳ
ಜೀವನಾಲವಾಲದಲಿ ಜಡಿ ತುಂಬಿ ಪ್ರವಹಿಪ
ಶಾಂತ ಶಕ್ತಿಯೇ ! ಸಂಭವಿಸು ಎನ್ನಯ ಚಿತ್ತ
ರಂಗದಲಿ ಕಮನೀಯ ಕಾವ್ಯ ಸ್ಫೂರ್ತಿರಸವಾಗಿ !

ನಿನ್ನ ಪ್ರಥಮ ಪೃಥುಲ ಬಸುಕೆಯೊಗೆದ ಭವ್ಯ
ಕಿಡಿ, ಪ್ರಥಮಗಾನ ಹರಿಸಿದ ನುಡಿ, ಪ್ರಪಂಚ
ಭಾಷೆ ಭಾಷೆಗಳ್ ಮೂಡಿಸಿದ ಚಿನ್ನುಡಿ ಅಮಿತ
ರುಕ್ಮರಾಗಾತಪಸ್ನಾತ ಛಂದ : ಶರೀರಿಣಿ,
ನೀನೇ ಲೋಕೋತ್ತರ ಮೈಸಿದ ಪರಾಶಕ್ತಿ !
ನೀನಡೆಯೆ ಧೀರ ಚರಣ ಭಂಗಿಯಿಂದೆ ವಿರಾಟ್
ವಿಶ್ವ ಚಕ್ರ ನಿತ್ಯನಿರುತಲೀಲೆ. ಹೇ ಜಗತ್
ಕಾರ್ಯಕಾರಿಣೀ! ಜಗದನಂತ ಯಾತ್ರೆಯಲಿ
ಶೋಕ ಹರುಷ ರೋಗ ರುಜಿನ ತುಂಬಿ ಸೃಜಿಸುವೆ
ನಾಕ ನರಕಮಂ, ಹೇ ಕಷ್ಟಸುಖರಸ ಭಂಜಿನಿ !
ಸರ್ವದಾ ಜನನಮರಣ ಕಾಲದೇಶ ತವ
ರುದ್ರ ಚರಣ ನ್ಯಾಸ ತ್ರಿಭುವನದೇಕ ಮಾತ್ರ ಜನನಿ !
ಅಶರೀರೆ, ಭುವನ ಮೋಹನ ಮಧುರ ವಾಗ್ದೇವಿ !
ವಿದ್ಯಾಧರೆ ಪರಮ ಸಾಹಿತ್ಯಕಲಾ ಕಲ್ಯಾಣಿ,
ಭಾವ ಚಿಂತಾಖನಿಯೇ, ಭವ್ಯಾನಂದ ಮೋದಿನೀ
ಸರ್ವೇಶ್ವರಿ ಶಾರದೀಯ ಶಾರದೆ ನಮಿಸುವೆನು
ನಿನ್ನಮಲ ಪಾದಪಂಕೇಜದಲಿ ತಲೆಬಾಗಿ !
ಕೈ ಮುಗಿದು ಭಕ್ತಿರಸದಶ್ರು ಜಲಧಿಯಲಿ ಮಿಂದು
ನಿನ್ನ ಪದಧೂಳಿಯಲಿ ಹೊರಳಾಡಿ ಧರಿಸುವೆನು
ಸಿರಿಗಂಧವ ; ನಿನ್ನಯ ಪದಸೇವೆಯ ಸಂಬಲಂ

→

ಎದೆತುಂಬಿ ಕೋಡಿವರಿದಿರೆ ಇನ್ನೇಂ ಬೇಡುವೆ
ನಿನ್ನಂ ಕವಿ ಕಾವ್ಯರಸ ಸ್ಫೂರ್ತಿಯೊಂದಲ್ಲದೆ
ಹೇ, ದೇವಿ ! ಪರಾತ್ಪರೆ ! ಅಖಿಲ ಬ್ರಹ್ಮಾಂಡ ಧರೆ !
ನಿನ್ನ ಕೃಪೆಯುಮಿಲ್ಲದೆ ನುಡಿಗಟ್ಟು ಚೆಲ್ವಂ
ಚೆಲ್ಲುವುದೇ ? ದಿವ್ಯಜ್ಞಾನ ಸಿರಿಯಂ ಈಯೆನಗೆ
ಹೇ ಮಮ ಜನನೀ ! ನೀ ಕಂಡು ಕಾಣುತಿರೆ
ಚಿಂತನಾ ವೇಶದೀ ಸುಜ್ಞಾನದೀ ದಿವ್ಯ
ಭಾವನಾ ಧಾರೆಯೀ ಸಮಯ ಸ್ಫೂರ್ತಿಯೀ ವರ
ಭಕ್ತಿ ಧ್ಯಾನದೀ ಪರಮ ಕೃತಿಯೀ ಕರ್ತವ್ಯ
ಜ್ಞಾನದೀ ಮನೋ ಸಂಕಲ್ಪದೀ ಚೈತನ್ಯ
ರಾಗಧುನಿಯೀ ನಿನ್ನ ವರ ಪಾದ ಸೇವೆಯೆನ್ನ
ಅನವರತ ಸಲಿಸುವ್ರೊಲ್ ಕರುಣಿಸೈ ಮಮತಾಯೆ !
ನಿನ್ನ ದಯಾರ್ಣ್ಮೀದುರ ಕರುಣ ಛವಿಯುಮಿಲ್ಲದಿರೆ
ಗೈವೆನೆಂತು ನಿಮ್ಮಯ ನುಡಿ ಸೇವೆಯಂ ತಾಯೆ ?
ಅಕ್ಕರವರಿಯದಾನು ಅಕ್ಕರೆಯಲಿ ನಿಮ್ಮಯ
ನಾಮಾವಳಿಯಂ ಪಾಡಿ ಪೊಗಳುವೆನೆಂತು ಪೇಳ್ ?
ಅಸತೋ ಮಾ ಸದ್ಗಮಯ ತಮಸೋ ಮಾ
ಜ್ಯೋತಿರ್ಗಮಯ ಎಂದು ಕಣ್ಮುಗಿದು ಕೈ ಮುಗಿದು
ಬೇಡುವೆನ್ ದಯೆದೋರು ಹೇ ದೇವ ಮನೋಹರಿ !
ಈ ಬದುಕಿನ ಕರ್ಮಕಾಂಡದಲಿ ಸಂಕಟದ
ಸಂಗಮಲ್ಲದೆ ಬೇರಿಲ್ಲವೆನಲೆನ್ನ ಹೃದಯ
ಧರಿತ್ರಿ ಬಿರಿವುದು ಚಿಂತಾದ್ರವ್ಯಮಂ ತುಂಬಿ.

ಹೇ, ಜನನಿ ನಿನ್ನ ಕರುಣಾರಸ ಭರಿತ ದೃಷ್ಟಿ
ಹರಿಯಲಿತ್ತ ತೊದಲುವ ಜಿಹ್ವೆ ಗೀತ ಗಾನನ

→

ಗೈಯದೇಂ ರಾಗಾನುರಾಗದಲಿ ? ಅನುಲಿವ
ಗೀತಗಾನದಲಿ ಭಕ್ತಿರಸ ಉಕ್ಕಿ ಹರಿಯದೆ
ಸ್ವಾತಂತ್ರ್ಯ ಸ್ವಚ್ಛಂದವಾನಂದದಿಂ ಎನ್ನ
ಕನ್ನಾಡಿನೆರ್ದೆಯಲಿ ಪೂವರಳ್ವವೊಲ್ !

ಓ ಕಲ್ಪನಾ ಸುಂದರಿ ! ಪರಮ ಪರಾಶಕ್ತಿಯೇ !
ನಿನ್ನೊಂದು ಮಹಿಮಾಮಯ ಸಂಯೋಜನೆಯಿಂದೆ
ವಿರಾಟ್ ವಿಶ್ವತಂತ್ರಜ್ಞಾನಯೋಜನಾವೈಖರಿ
ಸಾಮಾನ್ಯಮಲ್ಲಂ ತವ ಕೃಪಾ ಯೋಗದಿಂ
ಅಜ್ಞಾನಿಗಳ್ಮೈದರ್ ವಿಜ್ಞಾನಿಗಳ್ ! ಬುದ್ಧಿ
ಹೀನರೆಸೆದರ್ ಬುದ್ಧಿಮಾನ್ಯರ್ರೈಸಿ ! ನಿನ್ನಯ
ಕೃಪಾಕಟಾಕ್ಷದೊರ್ ಕಿರಣ ದ್ಯುತಿ ಹರಿದಿತ್ತ
ರಸ ರುಚಿಯ ತನಿ ಮುತ್ತನೊತ್ತಿ ಎಲೆ ಮರೆಯ ನುಡಿ
ಕೋಗಿಲೆಯ ಕಂಠ ಸ್ವನದೊಡನೆ ಬೆರೆತೆನ್ನ
ಸ್ವರಂ ಹರಿಯದೇಂ ಅನಿಲನ ಬೆನ್ನೇರಿ ತವ
ಪಾದ ಸನ್ನಿಧಿಗೆ ಹೇ, ಪ್ರತಿಭಾ ಸುಂದರಿಯೆ !
ಪಸುಳೆಯಾಂ, ಕಾವ್ಯ ಕಾನನ ಕುಸುಮಗಳೆನಿಪ್ಪ
ತಾಳಲಯಗಳನರಿಯೆ, ನಿನ್ನ ಪುಣ್ಯನಾಮದ
ಧ್ಯಾನವೊಂದೆ ಗುರಿಯಿರೆ ತಾಳಲಯ ಇದ್ದರೇಂ
ಇಲ್ಲದೊಡೇಂ ಪೇಳ್ ಜನನೀ ಪರಾಶಕ್ತಿಯೆ !
ಕಸ್ತೂರಿ ಮೊಲ್ಲೆ ಬನದೊಳರಳಿದ ಧವಳಿಮಾ
ಕೀರುತಿಯ ಮಲ್ಲಿಕಾ ಪೂವಳಿಯಂ ತವ ಪಾದ
ಪಂಕೇಜಗಳಿಗರ್ಪಿಸಿ ತಲೆ ಮಣಿವೆಂ ತಾಯೇ
ಜಗದೇಕ ಪರಾಶಕ್ತಿಯೇ !

→

— ೦ —

ಮಾತಾಮಯಿ ಕಸ್ತೂರಿ ಬಾ

ಜೀವೇಮ ಶರದಃ ಶ್ಯತಂ
ಪಶ್ಯೇಮ ಶರದ ಃ ಶ್ಯತಂ
ಶೃಣುವಾಸು ಶರದ ಃ ಶ್ಯತಂ
ಭೂಯಶ್ಚ ಶರದ ಃ ಶ್ಯತಂ

ಪೇಳು, ಹೇಳೆನ್ನ ಹೃನ್ಮಂದಿರದ ಶ್ರೀಗಿಳಿಯೆ,
ಸರ್ವೋದಯ ರಾಗಮಾಲೆಯನನುನಯದಿಂದಲಿ,
ಉಕ್ಕಿ ಹರಿಯಲೀ ರಾಗರಸ ಪರವು ಸುಮನಸ
ಸಂಗಿಸಿ ಸಮಾವೇಶದಲಿ. ಅಂದಿಂದಿಗುಂ ಹೃತ್
ಕಲಶದಲಿ ಭಕ್ತಿರಸನೆಯು ತುಂಬಿ ಧುಮುಧುಮಿಸಿ
ಕೋಡಿವರಿಯಲಣಿಯಾದ ಸಂಜೀವನ ಯೋಗವಂ,
ಮಾನಸ ರಸಚಿಂತನೆಯಲಿ ಬಿಂದುವೆನೆ ಮೂಡಿ
ಮನ ಮೋಹಿಪ ಸಂಜೀವನೋಜ್ವಲಿತ ವರ
ಉರಿಕಿಡಿಗಳ ರೂಪಕದಲೊಂದೊಂದು ಕಣಮಂ
ಬಿತ್ತರಿಸು ಮುದದಿಂ ಮಧುರ ಭಾವದಿಂ ಮೇಣ್
ಸಡ್ಡೆಯಿಂ ಹೇ ವಾಙ್ಮಯ ರೂಪಿಣಿ ಶ್ರೀಗಿಳಿಯೆ !
ಇನಿದಿನಿದಾಗಿ ಬಿಡಿಬಿಡಿಯಾಗಿ ಮಧುರ ರಸಾಲ
ರುಚಿರಮಯ ಚೇತನದುಲಿಯಂ ನೀ ಬಿತ್ತರಿಸು
ಹೇ ಎನ್ನಯ ಪ್ರಾಣಮಯ ಯೋಗಿನಿಯೆ! ಎನಿತೋ
ಕಾಲಮಾನಂ ಸಂದುದು ಕಾವ್ಯಕಲಾಕಲೆಯ
ಯೋಗದಲಿ ಮಣಿಮಾಲೆಯೊಲ್ ಕೋದು ಎನ್ನೆರ್ದೆ
ಗುಡಿಯಲಿರ್‍ಕಿದೀ ಕಾವ್ಯರಸವಾಹಿನಿಯಂ ನಿಜ
ಆರ್ತೆಯೊಲ್ ಜಗದ ಬೆಳಕಿಗೆ ಬಿಡುವೆ ಎದೆಯುಳ್ಕಿ,
ಇಂ ರೆಕ್ಕೆ ಪುಕ್ಕಗಳ್ ಬಲಿಯುದಿರ್ದ ಕಪೋತ

→

ಮರಿಗಳಂ ಹೋಲಿ !

ಈ ಬೃಹದ್ ಬ್ರಹ್ಮ ಸೃಷ್ಟಿಯ
ವಿರಾಟ್ ಸಿರಿ ಸಂಪದದಲಿ ತಾಪಸರೆರೆಯ
ಪಿಂಗಲ ಜಟಾಜೂಟ ನಿಟಿಲಾಕ್ಷನೋಜೆಯಲಿ
ಸಿಡಿದೊಗೆದ ಕಿಡಿಗಳಲಿ ಒಡಮೂಡಿದುದೊ ಎನಲ್
ಸಂಜೀವನ ಯಾತ್ರಿಗಳ ಸವಿನೆನಪಿಗೆ ಮಣಿದು
ಎದೆಸೋಲ್ದು ಮನಸೋಲ್ದು ರಚಿಸಿಹೆನಿದಂ ಮನದ
ಕಾನನೋದ್ಯಾನದಾ ಪುಷ್ಪಂಗಳಂ ಕೋದು.
ಭಾರತಿಯ ಪರಮ ಉಡಿಯಲಿ ಸಂಜನಿಸಿ ಬದುಕಿ
ಬಾಳ್ದ ಸಜ್ಜನರ ಸುಂದರ ಕಥೆಯು ; ತಾಪಸೀ
ಜೀವನದ ಅಮೋಘ ಕಮನೀಯ ಕಠೋರಮಯ
ಕಥೆಯು. ಬ್ರಹ್ಮನ ರಾಣಿಯಂ ನೆನೆದು ಮುಂಬರಿಸು
ಮನವೇ, ಮಧುರ ಧ್ಯಾನ ಭಕ್ತಿಯಲಿ ನೆರೆ ಮುಳುಗಿ.

ಎಳಮುಗುವಿನೆಳತಾಯಿ ಕಸ್ತೂರಿ ಬಾ ಮನೆಯ
ಅಂಗಣದ ಅಂಚಿನಲಿ ಸಂಧ್ಯಾರುಣನ ಅಸ್ತ
ಮಾನ ಶೋಭೆಯಂ ಕಣ್ತುಂಬ ನೋನೋಡುತ್ತೆ
ಮುಳುಗಿದಳ್ ಭಾವನಾಲೋಕದಲಿ. ರಾತ್ರಿಯುಂ
ಉರುಳಿದೊಡೆ ಪತಿ ಮೋಹನ್ ದಾಸ್ ಕರಮ ಚಂದ್
ಗಾಂಧಿಯುಂ ಸಾಗರೀ ಯಾನಮಂ ಕೈಕೊಂಡು
ಪೊರಡುವನ್ ದೂರದೂರದ ವಿಲಾಯಿತಿ ನಗರ-
ದ್ವೀಶಕೆ ಸುವಿದ್ಯಾರ್ಜನೆಯ ಗುರಿಯೊಳ್. ಸಾಗರ
ಯಾನ ಶಾಸ್ತ್ರನಿಶಿದ್ಧಮೆಂದೆನುತೆ ಸಾಮಾಜಿಕ
ಪಿತೃವರ್ಗಂ ಬೊಬ್ಬೆಯೆಬ್ಬಿಸಿ ವಾಗ್ಬಾಣಮಂ
ಎಸೆಯುತಿರೆ ಎಣೆಯಿಲ್ಲದೊಲ್ ಕೋಪ ಶಾಪಗಳ

→

ಕಿಡಿ ಸಿಡಿದು ಹಾರುತಿರ್ದುವು ಮನಂ ಚುಚ್ಚುವೊಲ್ !
ಗಾಂಧೀಜಿ ಸಾಮಾಜಿಕ ಕೀಟಲೆಯು ಕೋಟಲೆಗೆ
ನೊಂದು ಮಣಿದರೇಂ ? ಕೊರಗಿ ಕೋಡಿದರೇಂ ? ಪೋಣ
ಎದೆಯುಳ್ಳಿದರೇಂ ? ಅರ್ಥಹೀನ ಕಂದಾಚಾರ
ದೋಜೆಯು ಕೊರಳ್ ಮುರಿಯೆ ಅನುಗಾಲ ಹೋರಾಡಿ
ನಿಕೃಷ್ಟ ಭಾವದಿಂದಲದ ಜಾಲಾಡಿ ಕಿತ್ತು
ಒಗೆದರ್ ದಿಶೆದಿಶೆಗೆ ಚದರಿ ಹೋಹ ಪಾಂಗಿನಲಿ !
ಸತೀಮಣಿಯು ಒಡಲ್ ಕುದಿಗೊಳೆ ಕಳವಳ ತುಂಬಿ
ಶೋಕಾಶ್ರು ಹರಿಮುದು ಬಳಬಳನೆ ನಿಡುಮೈಯೊಳ್
ಕೆನ್ನೆತ್ತರ್ ಹೆಪ್ಪುಗುಡುವಂತೆ ಆರೆ ಚಣದೊಳ್ !

ಸಾಸಿರದೆಂಟನೂರೆಂಬತ್ತೆಂಟರ ಕಾಲ
ಮಾಸಂ ದಾರಣಗತಿಯಲಿ ವಿಜೃಂಭಿಸುತಿರ್ದುದು
ಬ್ರಿಟಿಷ್ ಪ್ರಭುತ್ವದ ನಿರಾತಂಕ ನಿರಂಕುಶ
ಅಧಿಕಾರ ದರ್ಪದಲಿ ! ಭಾರತೀಯರ್ ವೇದ
ವೇದಾಂತ ಪರಿಪಾಳಿಸ ಮನಮೋಹನೀಯಮಾದ
ಸ್ವರಾಜ್ಯದಲಿ ಗುಲಾಮರೆನೆ ತತ್ತಳ ತುಳಿದು
ದಲಿತರ್ಗೈಸಿರೆ ಪೇಳಲೇನಾ ರಣಗೋಳಂ ?
ತನ್ನತನಮಂ ಮರೆತು ಪಶು ಜೀವನಕೆ ನಿತ್ಯ
ಪಕ್ಕಾಗಿ ಬಾಳ್ದಪರ್ ಪ್ರಜೆಗಳ್ ನಡೆವಣದ
ಮಾಳ್ಕೆಯಲಿ ! ಇಂತೊಂದು ದುರ್ಗತಿಯ ಬಾಳ್ಗಡಲ
ಜ್ಯೋತಿಯುಂ ಉಜ್ವಲಿಸಲೆನೆ ಪೊರವಂಟ ರಮಣಿಸ
ಪಜ್ಜೆ ಪಜ್ಜೆಯುಂ ಪೂರ್ಣದೆಡೆಗಿರೆ ತನ್ನತಾಂ
ಬಲಮಂದು ಸೈಪಿದಳ್ ಶುಭಾಂಗಿ ; ಒಳಗುದಿಯುಂ
ಬದಿಗೊತ್ತಿ ನಗುಮೊಗದ ಮುಖವಾಡಮಂ ತೊಟ್ಟು ! →

ಪಿರಿಯರ್ಕಳ ಮುಂತೆ ಲಜ್ಜೆಯ ಭಾರದಲಿ ಮೂಕ
ಮೌನವಾಂತ ಕಸ್ತೂರಿ ಬಾ ಕೊನೆಯಗಳಿಗೆಯಲಿ ನಸು
ನಾಣ್ಚಿ ಕೆನ್ಮೊಗವನೆತ್ತಿ ಕೇಳಿಸಿದರ್ ಪತಿಗೆ
"ನೀವಲ್ಲಿಂದ ಪಿಂದಿರುಗಿ ಬಪ್ಪುದು ಆವಾಗ"?
ಅದಕ್ಕಾ ಗಾಂಧೀಜಿ "ಕೇಳ್, ರಮಣಿ! ಮನೆಯೊಳ್
ನಿನ್ನಯ ಹೊಣೆಗಾರಿಕೆಯೇಂ ಕಡಿಮೆಯದಲ್ಲಂ.
ಓಡೋಡುತ ಪೋದಪುದಿಂದಿನ ಕಾಲವಾಹಿ;
ಚಿಂತೆಯಂ ಬಿಟ್ಟು ಕರ್ತವ್ಯಂ ಪರಾಮರಿಸು."
ಎಂದರ್ ನಲ್ ನುಡಿ ಮುತ್ತುಗಳ ಚೆಲ್ಲಿದ ತೆರಂ.

ಪೊರಡುವ ಗಳಿಗೆಯದು ಬಳಿಸಾರಿ ಬರೆ ಮಡದಿಯ
ಹೃತ್‌ಕಲಶ ಸುಖ ದುಃಖಗಳ ಬೀಡಾಯ್ತು; ತನ್ನ
ಹೊಣೆಗಾರಿಕೆಯ ಪೂಣ್ಕೆ ಘನವಾಯ್ತು; ತನುಮನಂ
ಘನಿಸಿ ಘನ ಶಿಲಾಮೂರ್ತಿಯಾಗಿಸುವನ್ನ. ಪತಿ
ಗಾಂಧೀಜಿ ಸುತ್ತಮುತ್ತಲ್ ನೆರೆದ ಮಿತ್ರಜನ
ಮೇಣ್ ಬಂಧು ಜನಗಳ ಮಧ್ಯೆ ಕಣ್ಮರೆಯಾಗಿ
ಪೋದರ್ ಸತಿ ಸುತರಂ ಪಿಂತಿರ್ಕಿ. ಹರಿದ್ರಾ
ಕುಂಕುಮ ಸುಶೋಭಿತ ಮಹಿಳಾ ಮಣಿಯ ಹನಿಗಣ್
ರಂಗು ತಳೆಯುತಿರೆ ಪಿಂಜರಿದರ್ ಮೆಲುಮೆಲ್ಲನೆ
ದುಃಖದಿಂ ಅವನತ ಮುಖಿಯಾಗಿ, ಮುಖದ ಬಣ್ಣ
ಮಾಸಿದುದು ತೊಟ್ಟು ಕಳೆದ ಸುಂದರ ಹೂವಿನೊಲ್.
ಗಾಂಧೀಜಿ ಮುಂಬರಿದು ಬೃಹದ್ ಛೈತ್ರವನೇರಿ
ಸಹ ಪಯಣಿಗರ ಮಧ್ಯೆ ರಾರಾಜಿಸಿದರ್ ನಗೆ
ಮುಗುಳಂ ಅರಳಿಸಿ. ನಸುವೊಳ್ತಿನೊಳ್ ಛೈತ್ರವದು
ಲಂಗರು ತೆಗೆದು ಸಂಚಲಿಸಿದುದು ಮೆಲುಮೆಲ್ಲನೆ.

→

ಅಗಾಧ ಜಲರಾಶಿಯ ಬೃಹದ್ ಅಲೆಗಳೋಳಿ
ಭೋರ್ ಜೋರನೆ ನುರ್ಗಿ ಮೇಲಾಯ್ದು ಬರುತಿರಲ್
ಅತ್ತಿತ್ತ ತುಯ್ಯಲಾಡುತ ಜರ್ರನೆ ಜಲಧಿಯ
ಕೊರೆಕೊರೆದು ಮುಂಪಯಣಿಸಿದುದು ಬೃಹದ್ ಭೈತ್ರ.
ಸುತ್ತಮುತ್ತಲ್ ಅಲೆಗಳ್ ರಪ್‌ರಪ್ಪನೆ ತಟ್ಟಿ
ಅಪ್ಪಳಿಸುತಿರೆ ನೋಳ್ಪ ಕಣ್ ಮುಗ್ಧಮಪ್ಪಂತೆ
ಸುಸುಂದರ ಪರಿವೇಶಿ. ಮೇಲೆ ನೀಲಿಯ ಗಗನ;
ಕೆಳಗಡೆ ಸುನೀಲ ಜಲರಾಶಿ. ಮುಲುಮುಲುಗುಡುವ
ಜಲಚರಂಗಳ್ ಎಲ್ಲೆಡೆಯುಂ ಸಂಚಲಿಪ ಮನ
ಮೋಹನಕರ ಚಿತ್ರಣಂ. ಮತ್ಸ್ಯ ಗಂಧ, ವಿಧವಿಧ
ಖನಿಜಗಂಧ, ಲವಣಗಂಧ, ಪಾಚಿಯ ಗಂಧಗಳ್
ಒಗ್ಗೂಡಿ ಮುತ್ತಿದುವು ಘ್ರಾಣೇಂದ್ರಿಯಮಂ.

ಆಃ,

ಸಂಧ್ಯಾ ಸುಶಾಂತಿಯಲಿ ಅಸ್ತಮಾನ ಸೌಂದರ್ಯ
ಧಾರೆಯುಂ ಸೋದರ್ಯ ಚಂದನ ಕಾಂತಿಯುಂ ಚೆಲ್ಲಿ
ರವಿ ಅಸ್ತಮಿಸೆ ಸುರ ಸೌಂದರ್ಯವೆ ಧರೆಗಿಳಿದೊಲ್
ಸಾಯಂ ಚೆಲುವು ವಿಜೃಂಭಿಸುತಲಿರ್ದುದು ಚಂದನ
ಕಾಂತಿಯ ಸಿರಿ ಹೊನಲ್ ಹರಿಸಿ. ಗಿಡುಮರಂಗಳಲಿ
ಸುಖಾಶ್ರಯ ಪಡೆದ ಪಕ್ಷಿ ಸಂಕುಲ ವಿವಿಧರಾಗ
ಮಾಲೆಯುಂ ಹರಿಸಿರ್ದುವು ಕೊರಳೆತ್ತಿ ಸಂಧ್ಯಾ
ಪ್ರಾರ್ಥನೆಯ ಗೀತಾಂಜಲಿಯನರ್ಪಿಸುವ ನಿತ್ಯ
ನೇಮದಲಿ. ಪಕ್ಷಿಗಳ ಕೊರಳಿಂಪು, ಸಾಯಂಸೊಂಪು
ತಂಗಾಳಿಯ ತನಿಯಿಂಪುಗಳ್ ಕೂಡಿದಲಂಪು
ಮನೋಜ್ಞಂ. ಹೃದಯಾನಂದ ಮೋದಕಂ ಮೇಣ್

→

ದಿವ್ಯ ಚಿತ್ರಕಾರನ ಕುಂಚಕ್ಕೆ ಮೈಯೊಡ್ಡಿತು
ಪೊದಳ್ದವೊಲ್ ಸುಸುಂದರ ಪರಿವೇಶಂ. ಸಾಯಂ
ಶಾಂತಪ್ರಶಾಂತನಾಶಾಂತಸುಶಾಂತತೆಯು
ಆನಂದರಸವೂಡುತಲಿರ್ದುದು ಜಗತ್ತಿನ
ಬೇಗುದಿಗೆ ಸ್ವಾಂತನವ ನೀಡುವೊಲ್.

ಆಗಳಾ

ಸತೀಮಣಿ ಕಸ್ತೂರಿ ಬಾ ತಲೆಯುರ್ಚಿಲಿರ್ದ
ವಾಸಂತೀ ಉತ್ತರೀಯವಂ ಮುಂದೆಳೆದು ಕಣ್
ತೀಡಿದರ್ ಕರವಸ್ತ್ರದಿಂ. ಮುಂದೆ ದೃಷ್ಟಿಕಕ್ಷೆಯಲಿ
ಎರ್ದೆಯಂ ನಡುಗಿಸಂತೆ ಭೋರ್ ಭೋರೆನುತೆ
ಭೋರ್ಗರೆಯುತ ಬಂದೆಳ್ದವೊಲ್ ದಂಡುದಂಡೈಸಿ
ಬಹ ಬೃಹದ್ ಅಲೆಗಳೋಳಿಯಲಿ ಜರ್ರನೆ ನುರ್ಗಿ
ಸೈವರಿದ ಜಹಜು ಬರಿ ಚುಕ್ಕಿಯಾಗೆಸೆದು ಕಣ್
ಮರೆಯಾಗೆ ಪಿನ್ನಡೆದರ್ ಸತಿ ತನ್ನವರೊಡಂ.

ಏಳು, ಏಳೆನ್ನ ಮಾನಸ ವೀಣೆಯೆ, ರಾಗದ
ಚಾಗದ ಅಭಿಲಾಷೆಯ ಮೂಸೆಯಲಿ ಮುಳುಗೆದ್ದು
ಹಾಡು ದನಿದಣಿಯೆ. ಏಳೇಳು ಚಿಂತಾಖನಿಯೆ,
ಪ್ರತಿಭಾ ಮನೋಹರಿಯೆ, ನಲವಿಂ ಬಲ್ಮೆಯಿಂ
ಕಿರುಮನಮತಿಗಳಿಗೊರೆಯೈ ನಿಜ ಕಥೆಯ. ಸ್ವರಾಷ್ಟ್ರ
ಉದ್ಯಮದಲಿ ಮೈವಿಟ್ಟು ಸಗ್ಗದ ಪಥವಿಡಿದ
ಮಾತಾಮಯಿ ಕಸ್ತೂರಿಬಾರವರ ಪುನೀತ
ಜೀವನ ಪುಟವಿಟ್ಟ ಅಪರಂಜಿಯೆ ತಾನಾಯ್ತು.
ಆ ಪುಣ್ಯಾವನಿಯಂ ತಣ್ಪಿನ ತನಿವೊಳ್ಪಿನಲಿ
ನೆನೆನೆನೆದು ಬಿತ್ತರಿಸು ಮನದುಂಬಿ ಮೈದುಂಬಿ

→

ಭಾರತ ರಮಣಿಯರ ಮತಿಯರಳಿಪ ಮಾಳ್ಕೆಯಲಿ.
ಪುಣ್ಯ ಭೂಮಿಯ ಧೀರ ಧೀಮಂತ ಕುವರಿಯರ
ಸಂಜೀವನ ಯೋಗದ ಕಥಾವಳಿಯ ನುಲಿಯೈ
ಶ್ರೋತೃಗಳ ಮನಃಪ್ರಾಣಗಳ್ ತನಿಗೊಳುವಂತೆ.

ಮುಗ್ಧ ದುಗ್ಧ ಮನದ ಸತೀಮಣಿ ಶಿವನಂಘ್ರಿಗೆ
ಮಣಿದು ಹಿರಿಯ ಸಂಸಾರದ ಹೊಣೆಯ ಹೊರೆ ಹೊತ್ತು
ಭೀಷಣ ತಪಸ್ಸಾಧನಾ ರಕ್ತಿಯಿಂ ಪರಮ
ಶ್ರದ್ಧೆಯಿಂ ಬಲ್ಮೆಯಿಂ ಕಾರ್ಯಕಾರಣ ಮಾರ್ಗ
ಯೋಗದಲಿ ಮುಳುಗಿರಲ್ ಪರಮ ಪತಿಯುಂ ಕಲಿಪಿದ
ಅಕ್ಕರಗಳಲಿ ಮನವಿಡೆ ಸಮಯಮುಳಿಯಲಿಲ್ಲದೆ
ಅಕ್ಕರದ ಆಸೆಯಂ ಕೈಬಿಟ್ಟರ್ ತನ್ವಂಗಿ.
ದೇಗುಲದಿ ಸಿರಿಗಂಧವಂ ತೇಯುವವೊಲಾಯ್ತು
ಮಡದಿಯ ಬದುಕು–ಬರೀ ಬದುಕು. ಸಂದುಪೆನಿತೋ
ಮೌಲಿಕ ದಿವಸಮಾನಗಳ್ ದಿವ್ಯ ವ್ಯರ್ಥಮಾಗಿ.
ಮನೆಯೊಳಿಹ ಜನರಾಶಿಯೊತ್ತಟ್ಟಗಿರ್ಕೆ, ಪೋರ್
ಬಂದರ್ ಸಂಸ್ಥಾನಿಗಳ್ ದಿನ ದಿನಂ ಬಂದಪರ್
ಶ್ವೇತ ಪ್ರಭುತ್ವದ ಅನಾಗರಿಕ ಸ್ಥಿತಿಯಂ
ಕಂಡುರಿದುರಿದು ಕೆಂಬೆಂಕೆಯಾಗಿ ಕೆರಳಿ ಹೇಸಿ;
ಮನೆಯೊಳೆಂದುಂ ಜನವೇ ಜನ. ಅನುದಿನಂ
ಊಟೋಪಚಾರದಲಿ ಪೊಳ್ತುರುಳಿದತ್ತು ನೆರೆ
ಸ್ವಚ್ಛಂದದಾನಂದದಿಂ. ಮಡದಿ ತಪಸ್ವಿನೀ
ವ್ರತವಿಡಿದಳೆಂಬಿನಂ ಧೀಮಂತ ತೇಜದಿಂ
ಶಾಂತಿ ಸಂಪ್ರದಾಯದಿಂ ತಾನಿರುತಿರುತಿರೆ
ಂಸಸೇವಿಪರ್ ಬಲ್ಮೆಯಿಂ ಮೇಣ್ ನಲ್ಮೆಯಿಂ.

→

ತನ್ಮಧ್ಯೆ, ಗಾಂಧೀಜಿಯ ಪೆತ್ತಮ್ಮ – ತನ್ನತ್ತೆ
ಸೆಜ್ಜೆಯಂ ಬಿಟ್ಟೇಳದೆ ಪವಡಿಸಿದಳ್ ರೋಗ
ರುಜೆಯ ಘೋರ ಬಂಧನದಲಿ ಸೆರೆ ಸಿಲ್ಕಿ. ಊರಿನ
ಬಿಷಗ್ರತ್ನರ್ ಆಗಮಿಸಿ ಮದ್ದು ಅರೆದರೆದು
ಕಷಾಯವಗೈದು ಊಡಿದರ್, ತೀಡಿದರ್ ವಿವಿಧ
ರೀತಿಯಲಿ. ಪುಥಲೀಬಾಯಿಯ ಚಿಕಿತ್ಸೆ ನಡೆದುದು
ಅನವರತ. ಶೈತ್ಯೋಪಚಾರ ಪಥ್ಯೋಪಚಾರ
ನಡೆದತ್ತು ಯಥೋಚಿತವಾಗಿ. ಆದೊಡೇಂ ವಿಧಿ
ಬಗೆದ ಕಟ್ಟಾಣತಿಯ ಮುಂತೆ ಎಲ್ಲಿಯ ಮದ್ದು
ಮಂತ್ರಮಾಟದಾಟ ? ಸುಡು ಜ್ವರದ ಬೆಂಕೆಯಲಿ
ಬೆಂದು ಸುಟ್ಟುರಿದು ಬಿಷಗ್ರತ್ನರಂ ಸೋಲ್ಗೆಡಗಿ
ಸ್ವಾಮಿನಿ ತನಿವೊಳ್ತಿನಲಿ ತಟ್ಟಿದಳ್ ಸ್ವರ್ಗದ
ಸ್ವರ್ಣದ್ವಾರಮಂ. ತೈಲವಾರಿ ದೀಪದಾನಿಯ
ದಿವ್ಯ ಜ್ಯೋತಿಯುಂ ನಂದಿಹೋಗೆ ಸುದೂರದಾ
ವಿಲಾಯತಿಯಲಿಹ ಗಾಂಧೀಜಿಗೆ ಸುದ್ದಿ ಕಳಿಪದೆ
ಅಂತ್ಯ ಸಂಸ್ಕಾರಮಂ ಗೈದರೆಲ್ಲ ಬಂಧು ಜನ
ಹಿರಿಯ ಪುತ್ರಗಣರೊಗ್ಗೂಡಿ. ಬಿಕ್ಕಿ ಬಿಕ್ಕಳುತೆ
ಬೀಳುಕೊಟ್ಟರ್ ಕುಟುಂಬದ ಮಾತಾಮಯಿಯಾ
ಭೌತಿಕ ಶರೀರ ಸಂಪುಟಮಂ ಬಳಗದೊಡನೆ.
ಗೃಹದೊಳ್ ತೆಕ್ಕನೆ ಕಡು ಕತ್ತಲೆಯುಂ ಕವಿದು
ಕಾವಳಿಸಿದವೊಲಾಯ್ತು ಸ್ವಾಮಿನಿಯುಮಿಲ್ಲದೆ. ಕಿರಿ
ಸೊಸೆ ತಾನಾದೊಡಂ ಹಿರಿಯ ಹೊಣೆ ಭುಜವೇರ್ದು
ನಿಲ್ಲೆ ಎರ್ದೆಗೆಡದೆ ಕಸ್ತೂರಿಬಾ ತಮ್ಮ ಅವಿಭಕ್ತ
ಕುಟುಂಬದ ಹೊಣೆಗಾರಿಕೆಯುಂ ಪೊತ್ತು ಅನನ್ಯ

→

ಸಾರುಪತ್ಯಮಂ ನಿರ್ವಹಿಸಿದರ್ ಜಗ್ಗದೆಯೆ.

ಸಾವಿರದೆಂಟನೂರತೊಂಭತ್ತೊಂದರ ಜೂನ್ ತಿಂಗಳಿನ ಹತ್ತರಂದು ಬ್ಯಾರಿಸ್ಟರ್ ಪದವಿಯಂ ಪಡೆದ ಗಾಂಧೀಜಿಯುಂ ಹನ್ನೊಂದರಂದು ಅಲ್ಲಿಂದೆ ಪಯಣಮಂ ಪೂಡಿದರ್ ಸ್ವದೇಶಾಭಿಮುಖವಾಗಿ. ವಿಲಾಯತಿ ಯಾತ್ರೆಯಲಿ ಶ್ವೇತ ವರ್ಣೀಯರಾ ಈರ್ಷೆಯುರಿ ಬೆಂಕೆಯಲಿ ಬೇಯುತ್ತೆ ಬ್ಯಾರಿಸ್ಟರ್ ಪದವಿಯಂ ಗಳಿಸಿದುದು ಸಾಮಾನ್ಯವೇನಲ್ಲಂ. ಅಂತೊಂದು ಅನನ್ಯತರ ಸಾಹಸಮಂ ಧೀರ ಗತಿಯಲೆಸಗಿ, ಭಾರತ ಭುವಿಗೆ ಪಿಂತಿರುಗಿ ಸಭ್ಯ ಬಂದಪರೆಂಬ ಶುಭ ಸುದ್ದಿಯುಂ ತೆಕ್ಕನೆ ಗಾಳಿಯ ಬೆನ್ನೇರಿ ಬಂದಪ್ಪೊಲ್ ಪರ್ವಿದತ್ತು ಊರೊಳ್. ಆಗಳ್ ಪಿರಿಯಣ್ಣಂದಿರ್ ಪುಳಕಿತ ಮನದಿಂ ಆನಂದ ತುಂದಿಲತೆಯಿಂ ನಲ್ಮೆಯ ಸೋದರ ಗಾಂಧೀಜಿಯಂ ಸಂಭ್ರಮ–ಸಡಗರಗಳಿಂದಲಿ ಸ್ವಾಗತಿಸುವ ಸಂಯೋಜನೆಗೆ ಶರಣಾದರ್. ಬೃಹದ್ ನಾಗರಿಕ ದೇಶದೆಲಿ ನೆಲೆನಿಂದು ಪ್ರೌಢ ವಿದ್ಯಾಸುಸಂಪನ್ನತೆಯಿಂ ಲಿ ಬಹ ಸೋದರಂ ಎಂತೀ ಹಳೆಯ ಅಂದರಹಿತ ಗೃಹದೊಳ್ ನೆಲೆ ನಿಲ್ವನೆಂದು ಚಿಂತಿಸಿದರ್ ಮನದಿ. ಪುರಾತನ ಗೃಹ ಸಮುಚ್ಛಯಮಂ ಆಪನಿತು ಜಡಿಕುಟ್ಟಿ ಕೆಡಪಿ ಮಾರ್ಪಡಿಸಿ ಗಾಳಿ ಬೆಳಕಿನ ಸಂವೃದ್ಧಿಗೆ ಬೆಳಕಿಂಡಿಗಳನಿಡಿಸಿ, ಅಲ್ಲಲ್ಲಿ ನವೀಕರಿಸಿ ಸುಣ್ಣ ಬಣ್ಣಗಳಿಂ ಸಿಂಗರಿಸಿದರ್. ಪೊಸ ಬಗೆಯ

→

ಪೀಠೋಪಕರಣಂಗಳ್ ತಂದಿರಿಸಿ ಸುಂದರ
ಅರಮನೆಯೊಲ್ ಅಲಂಕರಿಸಿದರ್ ಹಳೆ ಮನೆಯಂ.
ಮಡದಿ ಕಸ್ತೂರಿ ಬಾ ಪ್ರಿಯ ಪತಿಯಾಗಮನ
ಸುವಾರ್ತೆಯಿಂ ಹೃತ್‌ಕಲಶ ಬಿರಿವೊಲ್ ಆನಂದ
ರಸಾಯನದಿಂ ತುಂಬಿ, ಪ್ರತಿಕ್ಷಣಂ ರಮಣನ
ಪ್ರತೀಕ್ಷೆಯಲಿ ತಾನಿರುತಿರ್ದಳ್ ಹಾದಿಯೊಳ್
ಕಣ್ಣಿಟ್ಟು. ಇಂದು ಬಹ ನಾಳೆ ಬಹನೆಂದೆನುತೆ
ನೋಡುತಿರೆಯಿರೆ ದಿವಸ ಮಾಸಗಳೆನಿತೊ ಜುಣುಗಿ
ಉರುಳುರುಳಿ ಪೋದುವು ಸತೀಮಣಿಯ ಆತುರಿತ
ಮನೋಗತಿಗೆ ನಿರಾಸೆಯನೂಡಿಸಿ. ಅನುದಿನಂ
ಹತಾಶೆಯ ಕೆಂಬೆಂಕೆಯಲಿ ಬೆಂದು ನೊಂದೊಡಂ
ಬೆಳಕಿಂಡಿಯಲಿ ಮತ್ತೆ ಮತ್ತೆ ಮೇಣ್ಮತ್ತೆ ಇಣಿಕಿ
ನಿಣಿಕಿ ಚಿಂತೆಯಿಂ ಬೇವಸದಿಂ ಮುಂ ಪಥಮಂ
ನೋಳ್ಪುದು ದಿನಚರಿಯಾಯ್ತು ಕತ್ತಲ್ ಕವಿವನ್ನ.
ಗಳಿಗೆಗಳ್ ಎಂತುರುಳ್ದುವೊ ದಿನಗಳ್ ಎಂತೆಂತು
ಕಳೆದುವೊ ಎನೆ ಮನಕೆ ತಿಳಿಯದಾಯ್ತು ಗೃಹಿಣಿಗೆ.
ಕಡೆಗೊರ್ಸೆ ಗಾಂಧೀಜಿಯುಂ ಪೊತ್ತ ಛೈತ್ರವದು
ಸುದ್ದಿ ಸದ್ದುಗಳ ಸೊಲ್ಲಿಲ್ಲದೆ ಸೈವರಿದುದು
ಭಾರತ ಜಲ ನಿಧಿಯ ಮಹಾ ತಟನಿಯ ಅಂಚಿಗೆ.
ಒಡನೊಡನೆ ಬಂಧು ಮಿತ್ರ ಜನಂ ನೆರೆದುವಲ್ಲಿ
ತಮ್ಮ ನೆಚ್ಚಿನ ಮಿತ್ರ-ಅಪೂರ್ವ ಬ್ಯಾರಿಸ್ಟರ್
ಪದವಿಯೆತ್ತನಂ ಗೌರವ ಪ್ರೇಮಾದರಗಳಿಂ
ಸ್ವಾಗತಿಸೆ. ಪರಸ್ಪರ ಸಂದರ್ಶನ ಲಾಭದಿಂ
ಸಂಭ್ರಮ ಸಡಗರಗಳೊಗ್ಗೂಡಿ ನಗೆ ಮುಗುಳ್

ಅರಳಿದುದು ಎಲ್ಲರ ವದನಬಿಂಬಗಳಲಿ. ಆ
ಜನಸ್ತೋಮ, ಆ ಹರ್ಷ, ಆ ಆನಂದ
ಧುಮುಧುಮಿಸಿದುದು ಸುನೀಲಿಯ ಮಹಾಸಾಗರದ
ಮೊರೆತಕೆ ಹೆಗಲೆಣೆಯೋ ಎನೆ ತೋಷದ ಮತ್ತೇರಿ.
ಗಾಂಧೀಜಿ ಬಂಧುಮಿತ್ರರಂ ಬೀಳ್ಕೊಂಡು ತಾಂ
ಪೋರಬಂದರ್ ಪಿರಿಯಣ್ಣಂದಿರೊಡಗೂಡಿ ಮನೆ
ಎಡೆಗೆ. ಪಯಣ ಸಾಗಿದುದು ದೂರದ ಸದ್ಗೃಹಕೆ.
ತನ್ನ ಎಸು ಬದುಕಿಗೆ ಜನ್ಮವಿತ್ತ ಮನಮೋಹನ
ಗೃಹ. ತಾಯಿ ಮಡದಿ ಮಕ್ಕಳ ಸಂದರ್ಶನಕಾಗಿ
ಕಾತರಿತ ಜೀವ ತುಡಿಯುತಿರ್ದುದು ಆತುರಂ
ಘನಿಸಿ. ಗೃಹಶ್ರೇಣಿಯ ಆನೆವಾಗಿಲೊಳ್ ನಿಂದು
ಕಾದಿರ್ದ ಕುಟುಂಬಿಗರಲಿ ನಲ್ಮೆಯ ಪೆತ್ತಮ್ಮ
ಕಾಣದಿರೆ ಕಣ್ಗೆ ಕೇಳಿದರ್ ಗಾಂಧೀಜಿ ಮನ
ಮಿಡುಕಿ "ಅಮ್ಮನೆಲ್ಲಿ ? ಕಣ್ಗೆ ಕಾಣಳೇಕೆ ?"

ಆಗ,

ಪಿರಿಯಣ್ಣ ದುಃಖ ವಾರ್ತೆಯಂ ತಿಳಿಸಿ ನುಡಿದರ್,
"ಎಲ್ಲವುಂ ದೈವಾಯತ್ತಮಾಗಿರಲ್ ಏನಿಹುದು .
ಎಮ್ಮೊಳ್ ?" ಕೇಳ್ದುದಂ ಗಾಂಧೀಜಿ ಮನನೊಂದು
ಮರು ನುಡಿಯೆ ಮಾತು ಬಾರದೆ ದುಃಖ ಭಾರದಲಿ
ಜನನಿಯ ಶಯನ ಗೃಹಗುಯ್ದು ಮೂಕ ಮೌನದಿಂ
ತಲೆ ಬಾಗಿ ಕಣ್ ಮುಗಿದು ಕೈಮುಗಿದು ಸಲಿಸಿದರ್
ಪ್ರೇಮ ಗೌರವಯುಕ್ತ ಪ್ರಾರ್ಥನೆಯಂ ನಸುವೊಳ್ತು.

ಗಾಂಧೀಜಿ ತಮ್ಮೊಳೊಂದು ಪೊಸ ಅಧ್ಯಾಯಮಂ
ತೆರೆವ ಸಂಯೋಜನಾ ಪ್ರವೃತ್ತಿಯಲಿರುತಿರೆ

→

ಬಂಧು ಮಿತ್ರರ ಭೇಟಿಯಲಿ ಸಂದುವೆನಿತೆನಿತೊ
ದಿನಮಾನಂಗಳ್. ಸತಿ ಕಸ್ತೂರಿ ಬಾ ಪತಿಯ
ಸಾನಿಧ್ಯದಲಿ ತೋಷವೆರ್ಚೆಯುಂ ಆನಂದ
ಸುಧೆಯನುಂಡಳಿಲ್ಲ—ಪತಿ ಗಾಂಧೀಜಿ ಭಗವತಿ
ಸರಸತಿಯ ಪುತ್ರ. ಹರಿತ ಬುದ್ಧಿ. ಹರಿತ ಭಾಷೆ.
ಹರಿತನೇ ಎಲ್ಲವುಂ. ಅಕ್ಕರವನರಿಯದಿಹ
ಸತೀಮಣಿಯ ಸ್ಥಿತಿಗತಿಯುಂ ಬೇರೆವೇರೆಯೆ.
ಮುಗ್ಧ ಮನ. ತೆರೆಮರೆಯ ಬಾಳ್ಬದುಕು. ನಾಗರಿಕ
ಕಾಲಮಾನದ ದಿವ್ಯ ನಾಗರಿಕತೆ ಈಯೆಡೆ
ಸುಳಿಯದು. ಎಳಮಕ್ಕಳ ಎಳತಾಯಿ. ಎಳತನವೆ
ಎಲ್ಲ. ಜೀವನ ಧರ್ಮದ ರುಂದ್ರಾಟವಿಯಲ್ಲಿ
ಎಲ್ಲಿ, ಯಾವೆಡೆಯಲ್ಲಿ ಎಳೆಎಳೆಗಳಂ ಪಿಡಿದು
ಜಗ್ಗಿದೊಡಮದು ಕೊರಳ್ಗೆ ಉರುಳ್. ವಿದ್ಯೆಯಂ
ಕಲಿತು ಜಾನಂಬರಿಸದ ಬಾಳ್ಮೆಯು ಬಾಳ್ಮೆಯೇ
ಅಲ್ಲವೆಂಬರಿವು ಮನವಂ ಮುಳ್ಳಿನಗೊಳ್ಕದ
ಮಾಳ್ಕೆಯಲಿ ಇರಿಯುತಿರೆ ಗೃಹಲಕ್ಷ್ಮಿಯುಂ ಶ್ರದ್ಧೆ
ಪಡ್ಡೆಗಳ್ವೆರಸಿ ಕಲಿಕೆಯಲಿ ಬಲವಂದು ಮನ
ಮತಿಗಳಂ ಬೆಸೆದಳ್. ಪಗಲ್ ಗೃಹದ ಹೊಣೆಯಂ
ಹೊತ್ತು ರಾತ್ರಿಯ ವೇಳೆಯೊಳ್ ಪಾಠ ಪ್ರವಚನ
ಲೇಖನ ಪುರಾಣೇತಿಹಾಸಮಿತ್ಯಾದಿಗಳ
ರಸಪಾನದಿಂ ಮನೋಮಂದಿರದ ದೀಪ್ತಿಯುಂ
ಜಳಜಳಿಸಿ ಬೆಳಗತೊಡಗಿದುದು ಕುಡಿಕಟ್ಟಿದೊಲ್.
ದಿನ ದಿನಂ ಸತಿಯ ಜ್ಞಾನ ಸಂಪುಟ ಇನಿದಿನಿದು
ಅರಳುತಿರ್ದೊಡಂ ಪತಿಯ ಉದ್ವಿಗ್ನ ಕ್ರಮಕೆ

→

ಸಿಲ್ಕಿ ತತ್ತರಿಸಿದುದು ಮನೋಮಯ ಪ್ರಾಣಮಯ
ಪ್ರದೀಪ್ತಿ. ಗುರುಸ್ಥಾನವಿಡಿದ ಪತಿಯ ಮನಸಿಗೆ
ಸತಿಯು ಮುಂದ ಮುಂದ ಗತಿಯ ಮುನ್ನಡೆ ಒಲ್ಲದು
ಸಲ್ಲದೆನೆ ಅನುದಿನಂ ಕಟ್ಟುನಿಟ್ಟಿನ ಭದ್ರ
ಕಟ್ಟೊತ್ತಾಯ ಹೇರಿ ಗದರುವರ್, ಮುನಿಯುವರ್.
ಸತಿಮರ್ಯನಾತುರದ ಕ್ರಮದಿಂ, ಪ್ರಚಂಡ
ಯೋಜನಾ ಭಾವದಿಂ ತನ್ನೆಲ್ಲ ಪ್ರಕ್ರಿಯೆ
ಸಾಧನೆಯದು ತಾರದಿರೆ ಸಂತೃಪ್ತಿ ಚಿಂತೆಯ
ಗಾಣದಲಿ ಸಿಲ್ಕಿ ಅಶ್ರುಗಣ್ಣಿನ ಸತೀಮಣಿ
ಸೋಲ್ವರ್ ಸಲಸಲ. ಅವನಿತು ಪ್ರಯತ್ನಿಸಿಯುಂ
ಪತಿದೇವನೆತ್ತರಕೆ ಏರ್ದು ನಿಂದರಿಲ್ಲಂ. ಆಗಳಾ
ಗಾಂಧೀಜಿ 'ಶತದಡ್ಡಿ' ಎಂಬುಪಾಧಿಯನೀಯುತೆ
ಅಟ್ಟಿದರವರಂ ತೌರುಮನೆಗೆ ಹಂದಿಯನಟ್ಟಿದ
ಪಾಂಗಿನಲಿ! ಭ್ರಮರದ ಮೇಲೆ ಬ್ರಹ್ಮಾಸ್ತ್ರಮಂ
ಒಗೆದವ್ಪೋಲಾಯ್ತು ಪತಿಯ ಕ್ರಮ! ಸತೀ ಕಸ್ತೂರಿ
ಬಾ ಕಂಬನಿಯ ಕೋಡಿಯಲಿ ಕೊಚ್ಚಿಹೋದರ್.
ಶೈವಾಲಭರಿತ ಪುಷ್ಕರಣಿಯಲಿ ಮೈದಳೆದ
ತಾವರೆಯವೊಲ್ ಸುಕೋಮಲಮಯ ನಾರೀಮಣಿ
ಲಜ್ಜೆಯ ಮುಸುಂಕು ಕಳೆಯೆ ಶ್ರಮವನ್ನೆ ಶ್ರಮಿಸಿ
ಮನಮತಿಯಲಿ ಚಿಂತನಮಂಥನಂಗೆರಸಿದರ್.
ಆತ್ಮಗನ್ನಡಿಯಲಿ ತನ್ನ ಮೂಲ್ಯ ಪಡಿನೆಳಲ್
ಮೂಪೂರ್ಳಿಯೆ ಮೊಗದಲಿ ನವ ಚೈತನ್ಯದ ಮುಗುಳ್
ಅರಳಿ ಮಲರಾಗಿ ಎದೆಯ ಪಕ್ಷಿಗೆನಿತೋ ಶಾಂತಿ
ಸಮಾಧಾನಗಳ ನಿಧಿ ದೊರಕಿದತ್ತು. ಕಸ್ತೂರಿ

→

ಬಾ ಮನಃತುಷ್ಟಿಯಿಂ ಪುಷ್ಟಿಗೊಂಡಂತೆವೊಲೆಸೆದರ್.
ಕಲಾವಿದ ತನ್ನ ಮಹತ್ಕೃತಿಗೆ ತಾನೆ ತಲೆಯಂ
ಮಣಿಯುವಂತಾಯ್ತು ಸತಿ ಕಸ್ತೂರಿ ಬಾಪವರ
ಮನಃಸ್ಥಿತಿ ; ತನ್ನಂ ತಾಂ ಮೆಚ್ಚಿಯುಂ ಪತಿಯ
ಮುಂದೆ ಸಲ್ವುದು ಕಷ್ಟವೆನೆ ಮನಂ ಮಮ್ಮಲಂ.
ಎನಿತೋ ಮಾಸಂಗಳ್ ಉರುಳಿದುವು ಪತಿಯಿಂ
ದೂರಾಗಿ. ತರುವಾಯಿ, ಗಾಂಧೀಜಿ ಕರುಣೆಯಿಂ
ಮನಮರುಗಿ ಎದೆಗರಗಿ ಕರೆತಂದರ್ ಸತಿಯಂ
ತಾನೇತಾನೈಸಿ. ಗೃಹಲಕ್ಷ್ಮಿಯುಮಿಲ್ಲದಿರೆ
ಶೋಭಿಪುದೆ ಬಾಳ್ ಬದುಕು ? ಕಟ್ಟಕಡೆಗೆ ತಾನೆ
ಸೋತು ಮಣಿದರ್ ಗಾಂಧೀಜಿ. ಮಡದಿಯುಂ ಕಿಂಚಿತ್
ಪರಿಜ್ಞಾನಮಿಲ್ಲದೆ ಜೀವನಾಲವಾಲದಲಿ
ನೆರೆ ಮುಳುಗಿ ದಿನದಿನಂ ಒಲೆಯೊಳಗ್ನಿಯನೂದಿ
ಊದಿ ಪ್ರೋಜ್ವಲಗೊಳಿಸುತ ತನ್ನೆರ್ದೆಯ ದಿವ್ಯ
ಆತ್ಮಜ್ಯೋತಿಯಂ ನಿರ್ಲಕ್ಷಿಸಿ ಬಾಳ್ವಳೆ ಎಂಬ
ತೀವ್ರ ಗತಿಯ ಅಸಮಾಧಾನ ಕಾಡಿದುದು ಮನಂ
ಗಾಂಧೀಜಿ ಮತ್ತೆ ಗುರುವಾದರ್ ಸತೀಮಣಿಗೆ.

ಓ ತಾಯೆ ! ಶಾರದೇ, ಅಜಜಾಯೆ, ಶುಭಮಂಗಳೆ !
ವಿಷ್ಣು ಮಾನಸ ಮಹಾಗರ್ಭ ಸಂಭವೆ, ಪರಮ
ಭುವನ ಮೋಹನ ದಿವ್ಯ ಮಧುರ ವೀಣಾಪಾಣಿ,
ವಿರಾಟ್ ವಿಭವೆ, ಭಾವಚಿಂತಾಖನಿಯೆ, ದೇವಿ
ಸರಸ ಸರಳ ಕಾವ್ಯ ಕಲಾಕಲೇ, ಕಲ್ಯಾಣಿ!
ಮಣಿಯುವೆನು ನಿನ್ನಮಲ ಪಾದ ಪಂಕೇಜದಲಿ
ಶ್ರದ್ಧಾಭಕ್ತಿಗಳಿಂದೆ ಹೇ ತಾಯೆ! ದಯೆಗೈದು →

ಕರುಣೆಯಿಂ ಕೇಳೆನ್ನೆದೆಯ ಆರ್ತ ಬಿನ್ನಣಂ.
ಭಾರತ ಜನನಿಯ ವೇದ ಸಂಸ್ಕೃತಿಯ ಉಡಿಯಲಿ
ಸಂಜನಿಸಿ ಲೋಕಪ್ರಿಯತೆ ಗಳಿಸಿದ ಲಲನಾ
ಮಣಿಯರ ಕಡು ಕತ್ತಲೆಯ ಬಾಳಿಗೆ ಬೆಳಕನಿತ್ತು,
ಸಾಮಾಜಿಕ ಶಾಸ್ತ್ರಗಳ ಘೋರಾತಿಘೋರ
ಶೃಂಖಲೆಗಳನದ್ಭುತ ವಜ್ರಮುಷ್ಟಿಯಿಂ ಬಿಡುತೆ
ಗೊಳಿಸಿ ಮತಿಮಾಂದ್ಯಮಂ ಜಡಿಕುಟ್ಟಿ ಉದ್ಧರಿಸು.
ಮುಂದಾದೊಡಂ ಭಾರತ ಜನನಿಯ ಸಿರಿಯುಡಿಯಲಿ
ಬಾಳ್ಗೊಂಡ ನವನಾರಿಯರ್ ಸರಸತಿಯ ಪರಮ
ಸೇವೆಯಿಂ ಧೈರ್ಯಸ್ಥೈರ್ಯದಿಂ ಧೀಮತಿಯರೈಸುಗೆ.
ಪರಮೋಚ್ಚ ಲೋಕ ಸರಿ ಸಮಾನತೆಯೋಜೆಯಿಂ
ಅಶೃಂಖಲೆಯ ಪರಿವೇಶದಿಂ ನೆರೆ ಜೃಂಭಿಸುಗೆ.
ತಂತಮ್ಮ ವಿಜಯಶ್ರೀ ಚಿಹ್ನೆಯಲಿ ಪ್ರೇಮಾನು
ರಾಗದನುಭೋಗದಲಿ ಬಾಳ್ಗೆ. ಬಾಳಂಗಣದಿ
ತತ್ತಳ ತುಳಿತದ ಕೂರ ಕರಾಳ ಶಾಸನಂ
ಅನೂರ್ಜಿತಗೊಳಿಸು ತಾಯೆ ! ಪಾಕಾಗ್ನಿಯನೂದಿ
ಉಜ್ವಲಿಸುತೆ ತಮ್ಮಾತ್ಮನಂ ಮರೆವ ಮಂದಮತಿ
ಗೋಷ್ಠಿಗೆ ನಿಜಮಾರ್ಗದರ್ಶನ ಮಾಡೈ ಕಲ್ಯಾಣಿ !
ಕತ್ತಲೆ ತೆರೆ ಹರಿದು ಮುಖ ಮುಸುಕಂ ಕಿತ್ತೊಗೆದು
ಸಲ್ಲಲೀ ಜಗತ್ ದಿವ್ಯ ಬೆಳಕಿಗೆ ಹೇ, ತಾಯೆ !
ಧೀಮಂತಿಕೆಯ ನವೋನವ ತೋಷಘೋಷದಿಂ
ಬಾಳಲೀ ಭಾರತ ಸಂಸ್ಕೃತಿಗೆ ಕೀರ್ತಿ ಸಿರಿಯುಂ
ಮೆರಸುವೊಲ್ ಅಜ್ಞಾನ ತಿಮಿರ ಭೂತವಂ ಜಡಿಕುಟ್ಟಿ !

ಗಾಂಧೀಜಿಯುಂ ಪ್ರಚ್ಛನ್ನ ಜ್ಞಾನದಭಿಲಾಷೆಯಿಂ →

ಲೋಕಪ್ರಜ್ಞೆಯ ದಿವ್ಯ ಸಂಯೋಜನೆಯಿಂ ಪರ
ಅಧಿಕಾರ ದಂಡವಂ ಪ್ರಯೋಗಿಸಿ ಅನುದಿನ
ಮಥದಿಸು ಮನೋದಧಿಗೆ ವಿದ್ಯೆಬುದ್ಧಿಯಿಂ ನೆರೆ
ತುಂಬಿದರ್ ನಾಗರಿಕ ಜೀವನಕೆ ಪಕ್ಕಾಗಿ
ಬದುಕಿ ಬಾಳ್ವಂತೆ. ತಮ್ಮಯ ಪ್ರಯತ್ನವಂ ಅತಿ
ಭರದಿಂ ನಡೆಸಿರಲದು ಶ್ರೀಮತಿಯ ಮನವನದೆ
ವೇಗದಿಂ ತುಂಬಲಕ್ಕುಮೆ? ಶ್ರದ್ಧೆಯಿಂ ನಿತ್ಯ
ಕಲಿಯುತೊಡಗಿಯುಂ ತಲ್ಲಣಿಸಿದರ್ ಹುಲ್ಲೆಯೊಲ್.
ಅಂತಿಂತು ಭಂಗದಿಂ ಶ್ರದ್ಧೆಯಿಂ ಕಸ್ತೂರಿ
ಬಾ ಸ್ವಭಾಷೆ ಗುಜರಾತಿಯಂ ಮನ ಮೆಚ್ಚುವೊಲ್
ಕಲಿತು ಇಂಗ್ಲಿಷ್ ಭಾಷೆಯಲಿ ಅಷ್ಟಿಷ್ಟು ಓದು
ಬರೆಹವಂ ಕಲಿತು ಪರಿಣತಿಯಂ ಪಡೆದು ತಮ್ಮ
ರಮಣನ ಮನವಂ ಮೆಚ್ಚಿಸಿದರ್. ಸುಪ್ರೇಮವಂ
ಆರ್ಜಿಸಿದರ್ ಲೋಕೋತ್ತರ ಮಾನಿನಿ ತಾನೈಸೆ.
ಸಥ್ಯ ಪ್ರಪುಲ್ಲ ನವಯೌವ್ವನ ಜೀವನ ದ್ಯುತಿ
ಕುಡಿ ಕಟ್ಟದೊಲ್ ಉರಿಯೆ ಅಣಿಯಾದುದು ಬದುಕು.

ಪರಿಸರದ ಚಾರು ಧೀರಮಾರುತ ಉಸಿರಿಡಿದು
ತೀಡಿದೊಲ್ ಸುಯ್‌ಸುಯ್ಯನೆ ಸುಯ್ಯುಯ್ದು ಶುಭವಂ
ಹಾರೈಸಿದ ಪಾಂಗಿನಿಂ ಸುಳಿಸುತ್ತಿ ಸಾರ್ದತ್ತು
ದಿಶೆದಿಶೆಗೆ. ಮಾಮರದೆಲೆಯ ಹೊದರಿನಲಿ ಹುದುಗಿ
ಹಾಡುವ ಸುಸ್ವರಯೋಗಿ ಕೋಗಿಲೆಯ ನಿಡು ಸ್ವರಂ,
ಗಿಳಿವಿಂಡುಗಳ ಗಳಹು, ಕಾಜಾಣಸಿಂಚರಂ
ವಿಧವಿಧ ಪಕ್ಷಿಕೋಟಿಯ ವಿಧವಿಧಕೂಜನಂ
ಸುಮಧುರ ತುಮುಲಮಯತೆಯಲಿ ಶುಭ ಸಂದೇಶವಂ →

ನೀಡುವೊಲ್ ವಾತಾವರಣ ಸುಲಲಿತವಾದುದು.
ಇಬ್ಬನಿಯ ಹನಿಗಳುದುರಿದುವು ಹನಿಹನಿಯ್ಯೈಸಿ
ಮನೆಯಂಗಣದಿ ತರು ಗುಲ್ಮಲತೆಗಳಲಿ ಅಲ್ಲಿ,
ಇಲ್ಲಿ ಎಲ್ಲೆಡೆಯುಲಿಯುಂ ತುಂತುರುಗಳ ಮುತ್ತಿನ
ಮಣಿ ಚೆಲ್ಲಿ ಸೂಸಿರುತಿರೆ, ರವಿಕಿರಣಗಳ್ ಪ್ರತಿ
ಫಲಿಸಿ ಜಗಜಗಿಸುತೆ, ಮಿಗೆ ಬಜ್ಜರದರಲುಗಳ
ಅಲಂಕರಣ ಮೆರೆದುದು ಹೃದಯಂಗಮವಾಗಿ.
ಬದುಕಿಂಗೆ ನೆರವಿತ್ತ ಸುಸುಂದರತಮ ಗೃಹ
ಸಮುಚ್ಚಯುವಮ ತನ್ನ ನೇಹದ ವಸಂತೋದಯ
ಆಚರಿಸಿದಂತೆವೊಲ್ ತೋಷದಿಂ ಮೋದದಿಂ
ನಲಿದತ್ತು ದಿವ್ಯಭಾವಬಂಧುರತೆಯ ಹೋಲಿ !

ಅನಂತರಮಾ ಗಾಂಧೀಜಿ ಮುಂಬೈ ನಗರಿಯಲಿ
ಸಂಜೀವನ ಮಾರ್ಗಯೋಗದ ನೋಂಪಿಯಿಂ ತಮ್ಮ
ಬ್ಯಾರಿಸ್ಟರ್ ಕಛೇರಿಯಂ ತೆರೆದರ್ ಸಕಲ
ಸಜ್ಜನಿಂ. ಬ್ಯಾರಿಸ್ಟರ್ ಮನ ನ್ಯಾಯ ನೀತಿಯ
ಕಟ್ಟುಕಟ್ಟಳೆಗಳಂ ಜಡಿದುಂಬಿ ಜೀರ್ಣಿಸಿರೆ
ಜನಗಳೀಂ ಬಂದಪರ್ ತಂತಮ್ಮ ಬನ್ನಗಳ
ಕಂತೆಯಂ ಪೊತ್ತು. ಗಾಂಧೀಜಿಯುಂ ವಿಧ ವಿಧ
ಭಂಗ ಬನ್ನಗಳನೋದಿ ತಿಳಿಯಲೆಲ್ಲವಿಷಯಂ
ಸತ್ಯಗೊಲೆ ಧರ್ಮಗೊಲೆಯವತರಣಂಮೆನೆ ಆತ್ಮ
ಸಂತೃಪ್ತಿ ಮೂಡದು ಕೈಕೊಳೆ ವೃತ್ತಿಯಂ. ನಿತ್ಯ
ವಿಕೃತಕೃತಿಯಂ ತಿರುಚಿ ಸತ್ಯದ ಸುಸುಂದರ
ಮುಖ ಮಂಡಲಕೆ ಸ್ವಹಸ್ತದಿಂ ಮಸಿಬಳಿಯೆ ಮನ

→

ಒಪ್ಪದಿರೆ ವೃತ್ತಿಯ ಪ್ರವೃತ್ತಿಯುಂ ಮನಗೆಟ್ಟು
ನಿಂದತ್ತು ಶಿಲಾಮೂರ್ತಿಯೊಲ್ ನಿಶ್ಚಲಮಾಗಿ!
ಗಾಂಧೀಜಿಯ ದಿವ್ಯ ಸತ್ಯವ್ರತಂ ಕಂಗೆಟ್ಟು
ಮುಂಗೆಟ್ಟು ಮುಮುಡಿ ಮುದ್ದೆಯಾದುದು ಆಮೆಯಂ
ಹೋಲಿ! ಮನೋಮಂಡಲದಲಿ ಚೇಳುಗಳದ್ಭುತ
ಪರಿವಾರ ಹರಿದಾಡಿದವೊಲಾಯ್ತು ಮುಜುಗರಂ
ನೆರೆನೆರೆಸಿ; ಆನೆಗಳ ದಂಡು ಒಗ್ಗೂಡಿ ನೆರೆ
ಗೊಂದಣವನೆಬ್ಬಿಸಿದ ಪಾಂಗಿನಲಿ ಚಿತ್ತಶ್ರೀ
ಯದು ಗಲಿಬಿಲಿಯಲಿ ಸಿಲ್ಕಿ ಹಳಹಳಿಸಿದುದು. ಮತ್ತಂ
ಗಾಂಧೀಜಿ ಮೊಕದ್ದಮೆಯ ಬೊಂತೆಯನು ಮುಚ್ಚುತೆ
ಯೋಚನಾಶೀಲತೆಯಲಿ ಮನವಿಡುವರ್. ಸುಜ್ಞಾನಂ
ಒರೆಗಲ್ಲಿಗೆ ತೀಡುವರ್ ವಿಚಾರ ವಿಶೇಷಂ
ಕೆದಕಿಬೆದಕಿ ವಿಶ್ಲೇಷಣೆಗೈಯುವರ್ ಅರ್ಥ
ಕಾಮನೆಗಳಂ ಜಡಿದು ಕುಟ್ಟುವಂತೆ. ಸತ್ಯದ
ಸತ್ ಕಿರಣಗಳಂ ಆಕರ್ಷಿಸುವೆನೆನೆ ಸತ್ಯ
ಕಣಗಳಿರ್ದರಲ್ತೇ ಮೊಕದ್ದಮೆ ಹೂಡಿರ್ದ
ವಿದ್ಯಮಾನದ ಬೊಂತೆಯಲಿ? ಗಾಂಧೀಜಿ ನಿತ್ಯಂ
ನಿರಾಶೆಯ ಕುಂಡದಲಿ ಮುಳುಗೇಳುವರ್. ಮನದಿ
ವಿಚಾರವಿಪ್ಲವದಲೆಗಳೇಳ್ದಪವು, ತೆಕ್ಕನೆಯೆ
ಚಿತ್ತಭಿತ್ತಿಯಂ ಮುಟ್ಟಿ ಧೀಂಕಿಡುವಂತೆವೊಲ್.
ವೃತ್ತಿಯಂ ಕೈಕೊಳ್ಳಲಾರದೊಲ್ ಭಾವನಾ
ಪ್ರಪಂಚ ಕದಡಿ ಬಗ್ಗಡಮಾಯ್ತು. ಏಕಾಂತ
ನಿಷ್ಠೆಯಿಂ ಯೋಚಿಸಿ ಪರಿಭಾವಿಸಿದೊಡಂಮದು
ನಿಲುಕದಾಯ್ತು ವಿಚಾರಕಲ್ಪನೆಗೆ. ಅಸತ್ಯದ

→

ವಿಕೃತಮಯ ಸ್ವರೂಪಂ ಸುತ್ತ ಮುತ್ತಲಿರೆ,
ಎಲ್ಲಿಯ ನಿಜ ಸುಶಾಂತಿ ಜಾಗೃತ ಚಿದ್ ವೃತ್ತಿಗೆ?
ಚಿಂತಾವ್ಯಾಕುಲತೆಯಲಿ ಕಳೆದುವೆನಿತೋ ದಿವಸ
ಮಾನಂಗಳ್ ಪರಿಹಾರಂಗಾಣದೆಯೆ. ನ್ಯಾಯ
ನೀತಿಗಳಿರದ ವೃತ್ತಿಯಂ ಕೈಕೊಳ್ಳಲೊಪ್ಪದು
ಬುದ್ಧಿ ಸಂಪುಟಂ. ನಿರಾಸಕ್ತಿ ಬೆಳೆದತ್ತು
ದಿನದಿನಂ. ವೃತ್ತಿ ಕೈಗೂಡದಿರಲ್ ಆರ್ಥಿಕ
ಮುಗ್ಗಟ್ಟು ಬೆಳೆದತ್ತು ಬೆಟ್ಟದೊಲ್. ಮುಂಬೈಯಿಯ
ನಗರಜೀವನಯೋಗಕೆ ಅಣ್ಣಂದಿರೆ ಸಕಲ
ಆಧಾರಮೆನೆ ಸಮಸ್ಯೆಯ ಬೆಸನ ಭಾರವದು
ಕಾಡಿದತ್ತು ಶೂಲವಿಡಿದ ಕೈಯಾಗಿ ; ಇಂತಿರುತಿರೆಯಿರೆ
ಏಗಳುಂ ಸುತ್ತಮುತ್ತಲ್ ಇರುತಲಿರ್ದ ಎಣೆ–
ಇಲ್ಲದಿಹ ಬಹುಜನ ಪರಮಾಸಕ್ತ ಶ್ರೀಮಂತ
ಕಕ್ಷಿಗಾರರ್ ಬ್ಯಾರಿಸ್ಟರ್ ಗಾಂಧೀಜಿಯಲಿ
ನಂಬುಗೆಯನಿಟ್ಟು ತಂತಮ್ಮ ಮೊಕದ್ದಮೆಗಳ
ಗೆಲ್ಮೆಯಂ ಬಯಸಿ ದ್ರವ್ಯದ ಥೈಲಿಯನು ತಂದು
ಮುಂದಿಡುವರ್ ಆಗ್ರಹಪಡಿಸಿ. ಅಂದಿನ ಕಾಲ
ಮಾನದೊಳ್ ಬ್ಯಾರಿಸ್ಟರೆನೆ ಬಹುಮೂಲ್ಯಮಾದ
ವಕೀಲತನ ; ಎಲ್ಲವಗೆಯ ನ್ಯಾಯವಾದಿಗಳ
ಸ್ಥಾನಮಾನಗಳಿಂದಧಿಕಂ. ಕಾಯಿದೆ ಕಟ್ಟು
ಕಟ್ಟಳೆಗಳರಿವು ಪೆರ್ಚಳಮಿರೆ ಕಕ್ಷಿಗಾರರ್
ಮುತ್ತುವರು ಎಡೆವಿಡದೆ. ಸಕ್ಕರೆಯ ಸವಿಗೊಲಿದು
ಸುತ್ತಮುತ್ತ ಮುತ್ತ ಬಹ ಇರುವೆಗಳ ಪರಿಯಲಿ.
ಆವೊಂದು ಮೊಕದ್ದಮೆಯುಂ ತನ್ನ ಮನವೊಪ್ಪಿ

→

ಕೈಕೊಂಬುವನಿತು ಸತ್ಯ ವಸ್ತುವಾಗಿರದಿರಲ್
ಗಾಂಧೀಜಿ ಪಿಂಜರಿದರ್ ಮೊಕದ್ದಮೆಯುಂ ತಾಂ
ಕೈಕೊಳಲ್. ಅಸತ್ಯ, ಅನ್ಯಾಯಗಳ ಜೊಂತೆಯೇ
ಇರುತಿರೆ ಅಸತ್ಯಮುಂ ಪಿಡಿದು ವಾದಿಪುದೆನಲ್
ತನ್ನ ಕೊರಳ್ ಕೊಯ್ದುಂತೆನಿಸಿದತ್ತು! ಆಗಳ್
ಗಾಂಧೀಜಿ ಗಂಭೀರ ಚಿಂತನೆಯುಲಿ ಮುಳುಂಗಿ
ಮನಮಥಿಸಿ ಈಪಗೆಯ ಜೀವನವನೊಪ್ಪಿ ನಾಂ
ಬಾಳಲಾರೆನೆಂಬುವ ಆತ್ಮ ತೀರ್ಮಾನಕ್ಕೆ
ತಲೆ ಮಣಿದರ್ ವಕೀಲ ವೃತ್ತಿಯುಂ ಕಡೆಗಣಿಸಿ!
ಸತೀಮಣಿ ಕಸ್ತೂರಿ ಬಾ ತನ್ನೊಳ್ ತರ್ಕಿಸಿ
ಪರಿ ಭಾವಿಸಿದ ವಿಚಾರಸಂಪದಮೇ ಬೇರೆ.
ಅನ್ನೆಬರಮಿರುತಿರ್ದ ಅರ್ಥಸ್ಥಿತಮಿನ್ನು
ಕಳೆದು ಪೋದಪುದೆಂಬ ದೃಢನಂಬುಗೆ ಮನದಿ.
ಬ್ಯಾರಿಸ್ಟರ್ ಎಂದೊಡೆ ಸಾಮಾನ್ಯಮೆ? ದ್ರವ್ಯದ
ಮಹಾಪೂರಮೆ ಜಳಜಳಿಸಿ ಬಂದಪುದೆಂಬುವ
ಸಮಾಧಾನ ಕಾಲ್ಮುರಿದ ಕುದುರೆಯೊಲಾಯ್ತು. ಎಳ
ಮಕ್ಕಳ ಪರಿಪೋಷಣೆಯುಂ ಕುಟುಂಬದ ಭಾರ
ಮೆನ್ನೆ ಚಿಂತೆ ಪರಿತಾಪಗಳಲಿ ಮುಳುಂಗಿದುದು
ಚಿತ್ತಪ್ರವೃತ್ತಿ ದಿನದಿನಂ. ಬಲು ಭಂಗದಿಂ
ಕಾಲಹರಣ ನಡೆದಿರಲೆನಿತೊ ದಿನ ಕಳೆದತ್ತು
ಪೆರ್ಚಿನ ಪರಿಹಾರಮದಿಲ್ಲದೆಯೆ. ಕಸ್ತೂರಿ
ಬಾ ತಲ್ಲಣಿಸಿಯುಂ ಮನದಿ ನೆಚ್ಚುಗೆಡದಪ್ರೊಲ್
ಪರಿಸ್ಥಿತಿಯು ಕೈಕೂಸಾಗಿ ಕಾಲಯಾಪನೆ
ಗೈದರ್ ಸರಾಗದಲಿ. ಬಂಧುಗಳ ಸಹಕಾರ

ಯೋಗದಿಂ ಭಂಗವದು ಭಂಗವೆನದ ತೆರದಲಿ.

ಅಂತಿಂತು ಬಗೆವಗೆಯಲಿ ಶ್ರಮಿಸಿಯುಂ ತನ್ನ
ಕೈಗೂಡದ ಕಜ್ಜದಿಂ ಮಾನಸಿಕ ಹಿಂಸೆಯುಂ
ಪೆರ್ಚೆ ಬಗೆ ಒಗರಾಗೆ ಕಛೇರಿಯಂ ತೊರೆದು ತಾಂ
ಮುಂಬೈ ನಗರಿಯಂ ಬಿಟ್ಟು ಪಿಂದಿರುಗಿ ಬಂದರ್
ರಾಜಕೋಟೆಕೆ. ಅಲ್ಲಿನ ವಕೀಲರ ಬಳಿಗೈದು
ಸಹಾಯಕ ವಕೀಲನೆನೆ ವೃತ್ತಿಯಂ ಕೈಕೊಂಡರ್.
ದಿನದಿನಂ ಅರ್ಜಿಯಂ ಉಲ್ಲೇಖಿಸುವುದೆ ವೃತ್ತಿ.
ಕಳೆದುದು ಕೆಲಗಾಲ ವೃತ್ತಿಯುಲ್ಲದ ಪ್ರವೃತ್ತಿಯ
ಸೇವೆಯಲಿ. ನಸು ಸಮಾಧಾನ ಸಂತೃಪ್ತಿಯಿಂ,
ದೂರಾಯ್ತು ತಮ್ಮ ಮಾನಸ ಲೋಕದಾವೇಶಂ.
ಪಿರಿಯಣ್ಣನುಂ ತಮ್ಮಯ ಸಮಯೋಚಿತಮಪ್ಪ
ಪರಿಜ್ಞಾನದಿಂ ಸಲಹೆಯೊಂದನಿತ್ತರ್ ಪ್ರಿಯ
ಸಹೋದರ ಮದನಮೋಹನ ಗಾಂಧೀಜಿಗೆ "ಕೇಳ್,
ದಾದಾ ಅಬ್ದುಲ್ಲಾ- ನುಂ ಸುಪ್ರಸಿದ್ಧ ನಾಮಂ.
ದಕ್ಷಿಣ ಆಫ್ರಿಕೆಯೊಳ್ ಪಿರಿಯ ಉದ್ಯಮಿಯಿರುತಿರೆ
ವ್ಯಾಪಾರ ಸಂಬಂಧದೊಳ್ ಮೊಕದ್ದಮೆಯೊಂದು
ಪುಟ್ಟಿ ಮುಂಬೆಳೆದು ಬೃಹದಾಕಾರ ತಳೆದಿರ್ಪುದು.
ನಲವತ್ತು ಸಹಸ್ರ ಪೌಂಡಿನ ದಾವೆ ಬಹುದಿನದಿಂ
ನಡೆದಿದೆ ಕೊನೆಗಾಣದೆ. ನೀನಲ್ಲಿಗುಯ್ಯುವುದು
ಒಳ್ಳಿತು. ದಾದಾ ನಿನ್ನಯ ಖರ್ಚು ವೆಚ್ಚವನೆಲ್ಲ
ನಿರ್ವಹಿಪರ್. ಇದರೊಳ್ ಸ್ವಾಮಿಕಾರ್ಯಮಲ್ಲದೆ
ಸ್ವಕಾರ್ಯವದು ಕೈಗೂಡಿ ಬಂದಪುದು ನಿಜದಿಂ.
ದಾದಾ ಅಬ್ದುಲ್ಲಾ ಬಹು ಕಾಲದಿಂ ಪರಿಚಿತರ್

→

ಅವರೊಡನೆ ನೀಂ ಪೋಗಿ ಬಂದಪುದು ಒಳ್ಳಿತೆಂಬೆ."
ಗಾಂಧೀಜಿಯುಂ ತದೇಕ ಭಾವನೆಯಿಂ ಕೇಳಿ
ವಿಷಯ ವಿಮರ್ಶಿಗೈದರ್. ಪೋಗುವುದೆ ಸರಿಯೆಂಬ
ನಿರ್ಣಯಂ ಪೊರಬಿಳ್ದುದು ಹೃದಯದಾಳದಿಂ.
ಗಾಂಧೀಜಿ ಮಾನಿಸಿದರ್ ಅಣ್ಣನ ಸಲಹೆಯುಂ;
ಒರ್ಮೆ ಪೋಗಿ ಬಂದೊಡೆ ಸ್ವಾನುಭವ ಘನವೆತ್ತು
ವೃತ್ತಿಯ ತಪದ ತೀವ್ರತೆಗೆ ಒಳ್ಳಿತಪ್ಪುದೆನೆ
ಪೋಪುದೆ ಸರಿ ಎಂಬಂತಿಮ ನಿರ್ಣಯಕೆ ಮಣಿದರ್.
ಅಕ್ಷರ ಅಕ್ಷರದೊಳ್ ಆಶಾಭಾವ ಸ್ಫುರಿಸಿದ
ಅನುಜನ ಸಲಹೆಯುಂ ಮನದೊಳೊಪ್ಪಿ ತೋಷದಿಂ
ಉತ್ಸುಕತೆಯಿಂ ದೂರ ನಾಡೊಳ್ ಪೊಸ ಬಾಳಿನ
ಕನಸು ಕಟ್ಟಿ ಸುದೂರ ಪಯಣದ ಸಿದ್ಧತೆಯಲಿ
ತೊಡಗಿದರ್ ಗಾಂಧೀಜಿ. ಮುಗ್ಧದುಗ್ಧಮನದ
ಸತೀಮಣಿ ಕಸ್ತೂರಿ ಬಾ ಮತ್ತೆ ರಮಣನಂ
ಅಗಲಿ ಬಾಳ್ವಗೋಳಂ ನೆನೆಯ ಚಿಂತೆಗೆತ್ತರ್.
ದುಃಖಭರಿತ ಹೃದಯ ಜಲಧರ ಪಯೋನಿಧಿಯ
ಮಾಳ್ಕೆಯಲಿ ಭಾರಭಾರಮಾದುದು. ಮುನ್ನಿನೊಲ್
ಬೃಹತ್ತಮ ಸಂಸಾರದ ನಿರ್ವಹಣೆ ಮೇಣ್ ಮಕ್ಕಳ
ಹೊಣೆಗಾರಿಕೆಯುಂ ಕೊರಳೊತ್ತುವುದು ದಿಟ, ಎನುತೆ
ಕಸ್ತೂರಿ ಬಾ ಮನದೊಳ್ ಚಿಂತೆಗೀಡಾಗಿಯುಂ
ತೋರ್ವಡಿಸದೆ ತನ್ನಂ ತಾಂ ಸೈಪಿ ಪತಿವರ್ಯ
ಗಾಂಧೀಜಿಯಗಲಿಕೆಯ ದುಃಖಮಂ ಭರಿಸಿದರ್
ಅಂದಿನೊಲ್. ದೂರ ಆಫ್ರಿಕೆಯಲಿ ಪತಿಯ ಒಂಟಿ
ಬಾಳ್ಕೆಯೆಂತೊ ಊಟೋಪಚಾರದ ಕತೆಯೆಂತೊ

→

ಎಂಬ ಯೋಚನೆಯ ಕೀಟ ಕೊರೆವುದು ಒಡಲಿನಲಿ.

ರಮಣೀ ಮಣಿ ಕಸ್ತೂರಿಬಾರವರಿಗಿರ್ಮಡಿಯ
ಕಾತರತೆಯ ಭಾರವೀ ಕವಯಿತ್ರಿಯ ಎದೆಯಲಿ.
ಅಂದಿನ ನಿಡುಬಾಳ್ಕೆಯ ಹಂತ ಹಂತದಲಿ ಭಂಗ ಬಣ್ಣದ
ಭೃಂಗಗಳ ಬೆನ್ನೇರಿ ಎಡೆಯಿಂದೆಡೆಗೆ ಚಲಿಸಿ
ಸಂಚಲಿಸಿ ಅಂಡಲೆದು ಅನುಭವಿಸಿದ ಅನನ್ಯ
ಸ್ವಾತಂತ್ರ್ಯ ಪ್ರೇಮದಿಂ ಸಾಹಸ ಸಂಯೋಜನೆಯ
ನೇಮದಿಂ ಸಮರಸ ಹೃದಯಿಯೆನೆ ಸವಿದಪೆಣ್ಣಿವ
ಮನದುಂಬಿ. ಸ್ವಾತಂತ್ರ್ಯ ದೀಕ್ಷೆಯಂ ತೊಟ್ಟ ಪತಿ
ಗಾಂಧೀಜಿಯ ಪಜ್ಜೆ ಪಜ್ಜೆಗಳನನುಸರಿಸುತಿಹ
ಮಡದಿ ಕಸ್ತೂರಿ ಬಾರವರ ಗತಿ ಇನ್ನೆಂತು
ಪೇಳ್, ವಿರಹಾಗ್ನಿಯೊಳೆದ್ದ ಒಡಲಿನ ಸಂಕಟ
ಧೈರ್ಯದ ಹೊನಲ್ಪೈಸಿದುದು ಮೈಮನ ಪುಳಕಿತ
ಗೊಳ್ವಂತೆವೊಲ್. ಪೂಜ್ಯೆ ಮಂಗಳೆ ಮೆರೆದರ್
ವೀರ ಸತಿಯಾಗಿ! ಭಾರತಿಯ ವರ ಸುತೆಯಾಗಿ!

ಗಾಂಧೀಜಿಯುಂ ನೆನೆದರಂದಿನ ವಿಲಾಯತಿಯ
ಪಯಣಮಂ. ತಾಯಿ, ಸ್ವಾಮಿನಿ, ಪುಥಲೀಬಾಯಿಯುಂ
ಇರ್ದಳಂದು ಸತಿಗೆ ತಾಯಾಗಿ. ಕಷ್ಟಸುಖಕೆ
ನೆರವಾಗಿ. ಇಂದು ಕಸ್ತೂರಿ ಬಾ ತಾಯಿಲ್ಲದ
ತಬ್ಬಲಿ, ಎನೆ ಸಲ್ವುದು. ಆದೊಡಂ ಸತೀಮಣಿ
ಎಲ್ಲವಂ ನಿರ್ಭಯದಲಿ ಭರಿಸುವಳೆಂಬುದಂ
ಅರಿತು ನುಡಿತವರ್ ಗಾಂಧೀಜಿ. ಮತ್ತದರಿಂದೆ
ಪೆರ್ಚಿನ ಕಳವಳಗೊಳದೆ ಪಯಣಂ ಪೂಡಿದರ್.

ಪೊರಡುವ ದಿನಂ ಬಳಿ ಸಾರ್ವುದು; ದಕ್ಷಿಣ ಆಫ್ರಿಕಾ →

ದೂರದೇಶ, ಪರಭಾಷೆ, ಪರಜನ, ಪರಾಡಳಿತ
ಇರುತಿರ್ದ ಕಂಡರಿಯದ ತಾಣದೊಳ್ ವಕೀಲಿ
ವೃತ್ತಿಯಲಿ ದಿಗ್ವಿಜಯಿಯಾದಪೆನೆಂಬ ಪೂರ್ಣ
ನೆಚ್ಚು ಇರದಿರ್ದೊಡಂ ಮನಂ ದೃಢಗೊಳಿಸಿದರ್
ಗಾಂಧೀಜಿ. ಖಿನ್ನಮುಖಿಯಾಗಿ ಎಳೆಕಂದನಂ
ಎದೆಗಾಂತು ನಿಂದ ಪತ್ನಿಯಂ ವ್ಯೃದಡವಿ ಅಸು
ತಾಪದಿಂ ಪ್ರೇಮದಿಂ ನೇಹದಿಂ ಪೇಳಿದರ್,
"ಚಿಂತಿಸದಿರ್ ಕಸ್ತೂರಿ. ವರ್ಷವೊಂದು ಮಾತ್ರಮೆ
ಅಲ್ಲಿರ್ದು ಪಿಂತಿರುಗಿ ಬಂದಪೆಂ" ನುಡಿಗಟ್ಟು ಎದೆ-
ಯಾಳದಿಂ ಹೊರಬಿಳ್ದುದು. ಸತಿ 'ಹೂಂ' ಎಂದೆಂದು
ಬಾಗಿದರ್ ತಲೆಯಂ. ಎದೆಗುದಿಯಲಿ ಮನನೊಂದು
ನೀರಾಗಿ ಹುಬ್ಬೆತ್ತಿ ನೋಡಲಾರದೆಯೆ ಕಣ್ ತುಂಬಿಬರೆ
ಕಂಬನಿಗಳ್ ಉದುರಿದುವು ಮಣ್ಣಹುಡಿಯ ಮೇಲೆ.
ಮೋನಮಾಂತ ಹೃದಯದ್ವಯಂಗಳ್ ಪರಸ್ಪರ
ಮೌನ ಸಂಭಾಷಣೆ ನಡೆಸಿದುವು ಕಡು ದುಃಖದ
ದನಿವೆರಸಿ. ಮತ್ತಂ ನಸುಪೊಳ್ತಿನಲೀರ್ವರುಂ
ಬೇರೆ ಬೇರೆಯಾದರ್ ವಿಧಿವತ್ತಾಗಿ. ಹಿರಿಯರ
ಪರಿವಾರದೊಡನೆ ಸತಿ ಕಸ್ತೂರಿ ಬಾ ಮಕ್ಕಳ
ಸಹಿತ ಪಿಂದಿರುಗಿ ಬಂದರವಿಭಕ್ತ ಕುಟುಂಬದ
ಅರಮನೆಗೆ. ಇಡೀ ಮನೆಯುಂ ತುಂಬಿ ತುಳುಕುವೊಲ್
ಜನವೇ ಜನ. ಮಾತುಕತೆಯ ಗದ್ದಲ ಮಕ್ಕಳ
ಚೀರ್ದನಿ, ಸುತ್ತಮುತ್ತಲ್ ನಾಯಿಗಳ ಬೊಗಳುವಿಕೆ
ದನಕರುಗಳ ಪರಿವಾರ ಎನೆ ಮನೆಯೊಂದದುಭುತ
ಕರ್ಮಶಾಲೆ. ಏಗಳ್ ಗಾಣದೆತ್ತಿನ ದುಡಿತ.

→

ಮೂಡಣ ದಿಗ್ ನಾರೀಮಣಿ ಚಂದನ ಕಾಂತಿಯ
ಕನಕ ಸಿರಿಯಿಂದೊಪ್ಪಿ ಕೆನ್ನೀಲ ದುಕೂಲವ
ಹೊದ್ದು ಮೆರೆದಿರೆ ಮೋಹನ ರೂಪಿನಲಿ ; ಜಗತ್ತು
ಮಧುರಮಯವಾಗಿ, ಧ್ಯಾನರೋಚಕವಾಗಿ ಮಿಗೆ
ಪ್ರಶಾಂತಮಯವಾಗಿ ಕಣ್ಮನಮಂ ಸೆಳೆದತ್ತು.
ಪರಮಸತಿ ಕಸ್ತೂರಿ ಬಾ ನಿಲ್ದಳ್ ಅಂಗಣ
ಮಧ್ಯೆ, ಪ್ರಾತಃಸೌಂದರ್ಯ ರಾಶಿಯಲಿ ಮುಳುಂಗಿ
ಶಿಲಾಮೂರ್ತಿಯೋಪಾದಿಯಲಿ ಪ್ರೈಮರೆತ ತೆರದಿ.
ದಿವ್ಯ ಪ್ರಶಾಂತ ಶಾಂತಿಯುಂ ಹೆಪ್ಪುಗಟ್ಟಿದೊಲ್
ಹೃನ್ಮನಗಳಂ ತಣಿಸಿದೊಡಂ ಒಡಲ್ ಸಂಕಟ
ಅಳಿಯಲಿಲ್ಲಂ. ವಿರಹಾಗ್ನಿಗೆ ನೆಯ್ಯನೆರೆದೊಲ್
ಇನ್ನಿನಿತು ದುಃಖ ಭಾರಂ ಒಡಲ್ ಆಳದಲಿ.
ಜಗತ್ ಸೌಂದರ್ಯರಾಶಿ ಭುಗಿಲೆದ್ದಿರೆ ಪಕ್ಷಿ
ಸಂಕುಲಂ ಎಳ್ಚತ್ತು ಹರಿಸಿದತ್ತು ವಿಧವಿಧ
ರಾಗಮಾಲೆಯಂ ಕೊರಳ್ ತುಂಬಿ ಸುಖಾನಂದ
ಮೋದದಿಂ. ಆಗಳಾ ಗೃಹಿಣಿ ಕೊಡವನೆತ್ತಿ
ನೀರೆರೆದು ಉದ್ಯಾನದ ಸಸ್ಯ ಸಮುಚ್ಚಯಮಂ
ತಣಿಸಿದರ್ ತಣ್ಣನೆಯ ತಂಪಿನಲಿ ತಂಪಾಗಿ.
ವರ್ಣವರ್ಣಾಂತ ಸುಗಂಧಮಯ ಪುಷ್ಪಕೋಟಿ
ನಳನಳಿಸಿರೆ, ಸುಂದರ ಸಸ್ಯಗಳ ಪರಿಷತ್ತು
ತಂಗಾಳಿಯ ಮುದ್ದಿಗೆ ಉಲ್ಲೋಲಕಲ್ಲೋಲ
ಭಂಗಿಯಲಿ ತಲೆದೂಗಿ ಪ್ರೈದೂಗಿ ಮೆರೆದತ್ತು,
ಪಚ್ಚ ರಾಗದಲಿ ಹರ್ಷಮಂ ನೆರೆ ಸೂಸಿ. ಈ
ಎಲ್ಲ ವಗೆಯ ಸೊಬಗಿನ್ನೈಸಿರಿಗೆ ಶಿರ ಮುಡಿಯಾಗಿ

→

ವೈದೋರಿವನ್ ವರ ಚೆಂಬಿಸಿಲಿನೆಳನೇಸರು
ಉಜ್ವಲೋಜ್ವಲ ತೇಜದಿಂ ಸ್ವರ್ಣ ಬಿಂಬದೊಲ್
ಅವತರಿಸಿ. ಮರ್ತ್ಯ ತಾಂ ಸ್ವರ್ಗೀಯುತರವಾಯ್ತು
ಉದಯಮಾನೋತ್ಸವದ ಮಹಾ ವೈಭವದಿಂದೆ.
ಪ್ರಾತಃಕಾಲೀನ ಬೆಳ್ಮುಗಿಲ್ ಮಂಜಿನ ಅದ್ಭುತ
ವಾಹಿನಿಯು ಮೇಲೆ ರಾರಾಜಿಸಿರೆ ಸ್ವರ್ಣಮಯ
ರವಿಬಿಂಬ ನಭೋ ಭೋಗವಮಂ ಪೆರ್ಚಿಸುವಂತೆ,
ನಾರೀಮಣಿ ತಲೆಬಾಗಿ ನಮಿಸಿದರ್ ಪ್ರಕೃತಿ
ಚೇತನಕೆ. ಮನದೊಳ್ ರಮಣನಂ ನೆನೆದು ದೂರ
ಆಫ್ರಿಕಾ ದೇಶದೊಳ್ ಈಪೊಳ್ತಿನಲಿ ಏನ್
ಗೈಯುತಿಹರೊ, ಇನ್ನೆಂತಿರ್ಪರೊ ಎಂಬೊಂದು
ಯೋಚನೆಯೊಳ್ ಮನವಿಟ್ಟು ಲಿಖಿತ ಚಿತ್ರದವೊಲ್
ನಿಂತರ್ ನಿಶ್ಚಲ ಭಂಗಿಯಲಿ ಕಸ್ತೂರಿ ಬಾ.

ಆಗಳೆಲ್ಲಿಂದೈತಂದುವೋ ಮತ್ತಾವಾವ
ಸುದ್ದಿಯಂ ತಂದುವೊ ಎನೆ ಮುದ್ದು ಕಪೋತಗಳ
ಹಿಂಡು ರೊಯ್ಯನೆ ಪಾರುತಲೈದುವು ಎರೆಂಕೆಗಳ
ಪಟಪಟಸುತ. ಕಪ್ಪುಬಿಣ್ಪಿನ, ಬೂದುಬಿಣ್ಪಿನ,
ಎಣ್ಣೆಗೆಂಪಿನ, ಸ್ವಚ್ಛ ಸುಂದರ ಧವಳ ಕಾಂತಿಯ
ಪಕ್ಷಿವಳಗವದು ಇಳಿದುದು ಅಂಗಣದಾಣಕೆ.
ಕೊರಳ್ದನಿಯಂ ಹರಿಸುತಲ್ಲಿ ಕೂಡಾಡಿ
ಜಿಗಿದಾಡಿ ಕುಪ್ಪಳಿಸಿ ಭುಜವೇರಿ ತಲೆಯೇರಿ
ಮುಖಮೈಯೆನದೆ ಹಾರಿ ಕುಳಿತು ಮುಖ ಮುಟ್ಟುತಿರೆ
ಮುದ್ದಿನ ಮಳೆಗರೆವಂತೆವೊಲ . ಕಸ್ತೂರಿ ಬಾ
ಎನಗಾವುದೊ ದಿವ್ಯ ಸಂದೇಶಮಂ ತಂದು

→

ಒಪ್ಪಿಸುತಿಪೆ ದೈವ ಸನ್ನಿಧಿಯೆಂ ಎಂದೆಂಬ
ಭಾವನೆಯಲಿ ಪುದಗೊಂಡು ಗೋಧಿಯಂ ಬೊಗಸೆಯಲಿ
ತಂದು ಎರಚಿದರ್ ಅವ್ರುಗಳ ಒಡಲ್ ಜಡಿತುಂಬಿ
ಬಿರಿವನ್ನ. ಸಾಧ್ವಿ ಕಸ್ತೂರಿ ಬಾ ಮನಸೇಚ್ಚೆ
ಉದಯರಾಗವಂ ಹಾಡುವರ್ ಎದೆಯಲಿ ಭಕ್ತಿ
ರಸ ಸ್ಫುರಿಸಿ. ಸಲ್ ಮಕ್ಕಳಂ ಲಾಲಿಸಿ ಎತ್ತಿ
ಓಲೈಸುವರ್ ಕಿರಿಸೊಸೆಯೆನೆ ಪಿರಿಯ ಹೊಣೆಯಂ
ಪೊತ್ತು ಸಂಸೇವಿಸುವರ್ ಅತಿಥಿ ಅಭ್ಯಾಗತರ
ಮನಸುಮ ಅರಳುವನ್ನ. ದಿನದಿನಂ ಅಂಜಿಯುಂ
ಬರುಪ್ರೊಳ್ತಿನಲಿ ಕಾಯ್ವರ್ ಹಾದಿಯೊಳ್ ಕಣ್ಣಿಟ್ಟು.
ಪತಿಯು ಪ್ರೀತಿಯುಕ್ಕಿ ಬಹ ಪತ್ರದ ಸಲುವಾಗಿ.
ಭಾವುಕ ಪ್ರವೃತ್ತಿ ಇನಿತಿಲ್ಲದ ಪತಿವರ್ಯಂ
ಬರೆಯುತಿರ್ದುದು ವಿರಳಾತಿವಿರಳವಾಗಿ. ತಮ್ಮ
ನೆಸಹು ಇರ್ಪುದೊ ಇಲ್ಲವೊ ಎಂಬವೊಲ್ ಸಂತತ.
ಪತಿಭಕ್ತಿ ಪರಾಯಣೆ ಕಸ್ತೂರಿ ಬಾ ಮನದ
ತಳಮಳದಲಿ ಸಿಲ್ಕಿ ಕಳೆದುವೆನಿತೊ ದಿನಮಾನ
ಸುದ್ದಿಯು ಸುಳಿವಿಲ್ಲದೆ. ದಿನಾಂತ ಕಾಲೀನ
ವಿಶ್ರಾಂತಿಗೆತ್ತು ಮಲಗಿರೆ ಸೆಜ್ಜೆಯಲಿ ಪರಮ
ಸಾಧ್ವಿ ಕಂಡರೊಂದು ಕನಸಂ. ಪತಿವರ್ಯನುಂ
ಚತುರಾಶ್ವಗಳ ದಿವ್ಯ ರಥವೇರಿ ಸಹಸ್ರಾರು
ಕಂಠಗಳ ಜಯಧ್ವನಿಯ ಮಧ್ಯೆ ಬರುತಿರ್ದರ್
ಗೃಹಾಭಿಮುಖವಾಗಿ! ಅಹ, ಆ ಸುರಸುಂದರ
ದೃಶ್ಯಮಾನ ಚಿತ್ತಾರ ಮನೋಭಿತ್ತಿಯ ಮೇಲೆ
ನಲಿದತ್ತು ಮತ್ತೆಮತ್ತೆ ; ಮೈ ಪುಳಕಿತಮಪ್ಪ

→

ನಾಳ್ಕಿಯುಲಿ. ಕಸ್ತೂರಿ ಬಾ ಮತ್ತೆ ಅದೆ ಸ್ವಪ್ನ
ಮೂಡಿಬರಲೆಂದು ಕಣ್ಮುಚ್ಚಿದರ್ ಮತ್ತೊಮ್ಮೆ.
ನಿದ್ದೆಯುಂ ಬಂದುದಲ್ಲದೆ ಸ್ವಪ್ನ ಮೂಡಲಿಲ್ಲ.

ಮರುದಿನಂ ವರ್ತಮಾನ ಪತ್ರಿಕೆಯುಲಿ ಪೊದಲ್ದ
ಪ್ರಮುಖ ಪುಟದ ವೃತ್ತಾಂತದೊಳ್ ಪತಿ ಮೋಹನ್
ದಾಸ್ ಗಾಂಧೀಜಿಯು ಕಾರ್ಯಕುಶಲತೆಯಂ ನೆರೆ
ಬಣ್ಣಿಸಿದ ಸುದ್ದಿಯದು ಪರ್ಬಿದುದು ಎಲ್ಲೆಡೆಯು
ಜನಮನಮಂ ಮುಟ್ಟಿ ಪುಳಕಿತಗೊಳಿಸುವಂತೆಪೋಲ್ !
ಆಗಳೇಂ ಜನತತಿ ತಳೆದ ಸಂತಸಂ ? ಮನೆಯು
ಮಂದಿ ಮಾತ್ರಮಲ್ಲಂ, ಧೀಮಂತ ಪ್ರಜೆಗಳ್
ಹುಮ್ಮನಿಂ ಕೋಲಾಹಲವನೆಬ್ಬಿಸಿ ಕುಣಿಯುತ
ಆನಂದ ರಸಾನ್ನವನುಂಡರ್ ಪ್ರಸನ್ನ
ಭಾವದಿಂ ನಗೆಮುಗಳ್ ಹರಿಸಿ. ಪರಸ್ಪರ ಅಭಿ
ನಂದಿಸುವರ್ ; ಕುಟುಂಬಿಗರ್ ಎಲ್ಲಿ ಕಂಡರಲ್ಲಿ
ಪರಮಾನಂದ ಮೋದದಲಿ ಅಭಿನಂದಿಸುವರ್
ಮತ್ತಮಾ ಸತೀಮಣಿ ಕಸ್ತೂರಿಯುಂ ಕಂಡು
ಹರ್ಷಧ್ವನಿಗೈಯುತೆ ಅಭಿನಂದಿಸಿ ನಮಿಪರ್.
ಆಗಳ್ ಸತಿ ಕಸ್ತೂರಿ ಬಾ ತನ್ನ ಪ್ರೇಮದ
ಒಲವಿನ ಪತಿಯುನ್ನತಿಯಂ ನೆನೆದು ಆನಂದ
ರಸಾಯನವನುಂಡು ಭಗವಂತನಿಗೆ ತನ್ನಯ
ಆತ್ಮ ನಿವೇದಿಸಿದರ್ ಕೈಮುಗಿದು ಕಣ್ಮುಗಿದು.
ಆ ಬಳಿಕಲಾ ಪ್ರತಿಕೆಯೊಳ್ ದಿನದಿನಂ ಎಡೆ–
ಬಿಡದಪೋಲ್ ಗಾಂಧೀಜಿಯು ಸುದ್ದಿಯೆ ಸುದ್ದಿ ! ಬರಿ
ಸುದ್ದಿಯಲ್ತು, ಬಿಸಿ ಬಿಸಿ ಸುದ್ದಿ ! ಸತಿ ಕಸ್ತೂರಿ →

ಬಾ-ರವರ ಹೃನ್ಮನಂಗಳ್ ತಕಥೈ ತಕಥೈ
ಪುಳಕವಮಾದತ್ತು ಜೀವಕಣಂ ತುಳುಕುವವೊಲ್!

ಅಂತಿಂತು ದಿವಸಮಾನಗಳ್ ಸುಖದುಃಖದಲಿ
ಓಲಾಡಿ ಸಂದುವು ಐತಿಹಾಸೀಯ ಪುಟದಲಿ
ವಿಜೃಂಭಿಸೆ. ಗಾಂಧೀಜಿಯುಂ ದೂರದೂರದ
ಆಫ್ರಿಕಾ ದೇಶಕೆ ಪಯಣಂ ಬೆಳೆಸಿದ ಸಮಯೆ
ಬಲ್ಮೆಯಿಂ ನಲ್ ಮಾತಿನೊಳ್ 'ಅಲ್ಲಿ ತಾನೊಂದು
ವರುಷ ಮಾತ್ರಮಿರ್ದು ತಿರುಗಿ ಬಂದಪೆಂ' ಎಂದುದ
ಮರೆತಂತೆವೊಲ್ ನಾಲ್ಕು ವರ್ಷಗಳ್ ಕಳೆದುವೆಂತೊ
ಕೈಗೆಟುಕದ ಮಾಳ್ಕೆಯಲಿ. ಮನೆವಾಳ್ತಿಯ ದಿವ್ಯ
ಜಂಜಡದಲಿ ಸತೀಮಣಿ ಬೇಸರದಿಂ ಕಳೆದ
ಕಡು ಕತ್ತಲೆಯ ಮನಕೆ ಬೆಳಕೀಯುವ ತೆರದಲಿ
ನಲ್ ಮುಹೂರ್ತವನಾರ್ಯೈದಂತೆವೊಲ್ ಗಾಂಧೀಜಿ
ಸುದ್ದಿಯಂ ಮುಟ್ಟಿಸದೈತಂದರ್ ಭಾರತ
ಧಾತ್ರಿಯ ಪರಿಪುಣ್ಯತಲಕೆ. ಆಗಳಾ ಬಂಧು
ವರ್ಗದಲಿ ಮೇಣ್ ಮಿತ್ರವರ್ಗದಲಿ ಸಂತಸ
ಧಾರೆ ಉಕ್ಕಿ ಹರಿದುದು ತೋಷಘೋಷಿಣಿಯಾಗಿ !
ಕುಟುಂಬದ ಗೃಹಶ್ರೇಣಿಯಲಿ ತಳಿರು ತೋರಣ
ರಂಜಿಸಿದುದು ಪೊಸ ಪರ್ಬವೆಂಬಂತೆವೊಲ್.
ಗಾಂಧೀಜಿಯುಂ ತೋಷಪೂತ ಹೃದಯಂ ಪೊತ್ತು
ಊರಗಲ ಓಡಾಡಿ ಮಿತ್ರವರ್ಗಮಂ ಮೇಣ್
ಬಂಧುವರ್ಗಮಂ ಕಣ್ತುಂಬ ಕಂಡು ಕಾಣುತೆ
ಉಭಯ ಕುಶಲೋಪರಿಯನುಂ ನಡೆಸಿ ಮನದುಂಬಿ
ನೈದುಂಬಿ ತಣಿದರ್ ತಮ್ಮವರ ಸಂದರ್ಶನ

→

ಭಾಗ್ಯದಮೃತವನುಂಡು. ಕೆಲವಾನು ದಿವಸಂ
ಪೋರ್‌ಬಂದರಿನಲಿರುತಿರ್ದು ಕುಟುಂಬದ ಸ್ನೇಹ
ಸುಧೆಯ ಸೊಗವನು ಸವಿದು ಮಧುರ ಮನದಿಂ ತೋಷಿತ
ಹೃದಯದಿಂ ಮತ್ತೆ ಅಣಿಯಾದರ್ ಗಾಂಧೀಜಿ
ಸತಿಸುತರನೊಡಗೂಡಿ ದೂರ ಆಫ್ರಿಕಾದೇಶ
ವಾಸಕ್ಕೆ. ಗಾಂಧೀಜಿ ಕೈಕೊಂಡ ಪ್ರವೃತ್ತಿ
ನಿತ್ಯ ಸತ್ಯದ ಪರಿಶೋಧನೆಗೆ ದಾರಿ. ಪರಮ
ಮನೋಭವ ಸತ್ಯದ ಕಿರಣಂಗಳ್ ಸ್ಫುರಿಸುತಿರೆ
ಅಂಗಪ್ರತ್ಯಂಗಗಳಲಿ ಪರಾಜಯಮೇ ಜಯ
ವಾಗಿ ಪೊಳೆವುದು ಸತ್ಯದ್ರುನ್ಯಂ.
ಪೊರಡುವ ದಿನ
ಬಳಿಸಾರಿ ಬರೆ ಸುತ್ತಮುತ್ತಲ್ ನೆರೆದುದು ಜನ
ರಾಶಿ. ಸಸ್ನೇಹಾನುರಾಗದಲಿ ಘನವೆತ್ತ
ಬೀಳ್ಕೊಡಿಗೆ ಸುಖದುಃಖಮಯಮಮಾಯ್ತು. ಸತೀಮಣಿಗೆ
ಸ್ವಜನರ ಅಗಲಿಕೆ, ದೂರ ಪಯಣ, ಕಂಡರಿಯದ
ದೇಶ, ತಿಳಿಯದ ಭಾಷೆ ಎಂತಾಪುದೋ ಬದುಕು
ಎಂಬೊಂದು ಘನತರ ಚಿಂತೆಯುಂ ಕಾಡಿದುದು ಮನ
ಮತಿಗಳಂ. ಪ್ರಪ್ರಥಮ ಸಾಗರೀ ಯಾನಮಂ
ಕೈಕೊಳ್ಳೆ ಧಣಧಣಿಸಿದುದು ಹೃದಯದಾಣಂ.
ಜನರಾಶಿಯ ಶುಭ ಹಾರೈಕೆಯ ಹರ್ಷಘೋಷಂ
ಕಿವಿಗಳಂ ಅಪ್ಪಳಿಸುತಿರೆ ತೀರಮಂ ಬಿಟ್ಟು
ಹೊರಟಿತು ನೌಕೆ. ಸುತ್ತಮುತ್ತಲ್ ನೀರೇ ನೀರು.
ಭೋರೆಂದು ಭೋರ್ಗರೆವ ಜಲರಾಶಿ. ಧುಮುಧುಮಿಸಿ
ಮುನ್ನುಗ್ಗಿ ಮೇಲಾಯ್ದು ಬರುತಿರೆ ಈ ಚಣಮೆ

→

ನೌಕೆಯಂ ಕೊಚ್ಚಿಕೊಂಡೊಯ್ವುದೆಂಬಂತೆವೊಲ್
ಭಯಾನಕ ದೃಶ್ಯಂ. ಎಳೆಗೂಸಂ ಎದೆಯೊಳಾಂತು
ಹಿಡಿದ ಸತಿ ನಡುಗಿದರ್ ಭಯ ಭೀತಿಯಿಂ. ಮುಖವರ್ಣ
ಕರ್ಪುರತಳೆದತ್ತು ನೇತ್ರರು ಹೆಪ್ಪುಗಟ್ಟಿದಂತೆ.
ಆಗಳಾ ಗಾಂಧೀಜಿ ನಗುನಗುತೆ ಸತಿಯ ಮನ
ಸ್ಥಿತಿಯಂ ನೋಡಿ ಭುಜದೊಳ್ ಹಸ್ತವಂ ಇರಿಸಿ
"ಇನಿತು ಭಯಮೇಕೆ ಜೊತೆಯೊಳೆಲ್ಲರಿರೆ ? ಸಾಗರ
ಯಾನದಲಿ ವ್ಯೆನೋವಿಲ್ಲ. ತೊಟ್ಟಿಲೊಳ್ ತೂಗಿದ
ಅನುಭವಮಿಹುದಲ್ತೇ ?"
"ನೀರ್ಗಂಧ, ಮತ್ಸ್ಯಗಂಧ
ಪಾಚಿಗಂಧಗಳಲ್ಲದೆ ಮತ್ತೇನಿಲ್ಲಮೆನೆ
ಕೊರಳೊತ್ತುತಿಹುದು ಹಿಂಸ್ರಕವಾಗಿ."
"ಬಿಡು, ಮೊದಲ
ದಿನಮಾತ್ರವಿಾ ಬಗೆಯ ಸಂಕಷ್ಟ. ಬಳಿಕೆಲ್ಲ
ಸರಿಯಪ್ಪುದು ನೀ ಚಿಂತಿಸದಿರ್. ಒಳಮನೆಗೆತ್ತು
ವಿಶ್ರಾಂತಿ ಪಡೆದುಕೊ. ಮಲಗಿ ನಿದ್ದೆಗೈದೊಡದು
ಒಳ್ಳಿತು. ಅನಂತರಂ ಇಲ್ಲವೀ ಸಂಕಟಂ
ಶುಭೆ !" ಗಾಂಧೀಜಿಯುಂ ಅಂತೆಂದೊಡಂ ಒಡಲಿನಲಿ
ಅಸಹನೀಯಮಾದ ಮತ್ಸ್ಯಗಂಧ ತುಂಬಿರಲ್
ಎಲ್ಲಿರ್ದೊಡಂ- ಎಂತಿರ್ದೊಡಂ ಬಿಡದು ಹಿಂಸ್ರಕ
ಗಂಧ ಪ್ರಪಂಚ. ಎಡೆವಿಡದೆ ರಾಚುತಿರ್ದುದು
ಇಂದ್ರಿಯಂಗಳ ಮೇಲೆ ಅವ್ಯಾಹತ ಗತಿಯಲಿ.
ಸುನೀಲ ಜಲದರ್ಪಣದಲಿ ನಿತ್ಯ ಆಡಾಡಿ
ನಲಿದಾಡಿ ತಣಕುಪಣಕೆನುತ ಮಿಂಚಿ ಮಿನುಗುತೆ

→

ಮಂತ್ರಮಾಯದಾಟವನಾಡುವ ಹಿರಿಕಿರಿ ಜಲ
ಚರಂಗಳ ಚೋದ್ಯದಾಟ ಮನಕೆ ಸೊಗಸೆನಿಸಿರೆ
ಕಣ್ಮನಕೆ ದುರ್ಗಂಧವತಿ ದುರ್ಭರ ನಾಸಿಕ
ದೇಶಕೆ. ಸತಿ ಕಸ್ತೂರಿ ಬಾ ಸಹಿಸಲಾರದೆ
ಸಹಿಸಿದರ್ ಇತರ ಪಯಣಿಗರೊಡಂಗೂಡಿ. ಅಃ,
ಕಣ್ನೆಟ್ಟು ಮುಂಚೂಣಿಯ ವೇದಿಯನೇರಿ ನೋಡೆ,
ಜಲಧಿಯೆತ್ತ ? ಪಯಣಮಿದೆತ್ತ ? ಗುರಿ ಇನ್ನೆತ್ತ ?
ತಿಳಿಯಲ್ಬಾರದ ಅನನ್ಯ ಜಲರಾಶಿಯ ಹಾಸು.
ಮುಂದೆ ಕಂಗೊಳಿಸುತಿದೆ ದೂರ ದಿಗ್ ತಟಾಂತ
ಲಗ್ನದಲಿ ಸ್ವರ್ಗ ವೈಕುಂಠ ಕೈಲಾಸಗಳ
ಚಾರು ಚಂದ್ರಿಕಾ ದೃಶ್ಯಮಾನ ಸೌಂದರ್ಯದ
ಮಹಾನಿಧಿ! ಕರ್ನೀಲ ಮೇಘಗಳ್ ಪೈದೋರ್ದ್ದು
ನೀಲ ವರ್ಣಾಂತ ಭವ್ಯ ಜಲಧಿಯ ಉಲ್ಲೋಲ
ಕಲ್ಲೋಲ ಅಲೆಗಳ ಸಂಮಂಥನದೊಳ್ ಸಂಜಾತ
ಮೌಕ್ತಿಕಾಮಯ ಫೇನಪುಂಜಂ. ಜಹಜಿನಿಕ್ಕೆಡೆ
ಜಪ್ಪನೆ ಜಿಗಿವ ವಾರಿರಾಶಿಯ ತರಂಗಾಟ್ಟ-
ಹಾಸವದು ಸಂಭ್ರಮ ಸಮುದಿತ ಸಮುಲ್ಲಾಸ
ಮೋದಮೆಲ್ಲೆಡೆಗಳಲಿ. ದೂರದೂರ ದಿಗಂತದ
ಸಾಗರ ತಡಿಗೆ ಕನಕ ಕಾಂತಿಯೋಕುಳಿಯೆರಚಿ
ಒಯ್ಯನೊಯ್ಯನೆ ಇಳಿಯುತಿರ್ದ ಅರುಣನ ದಿವ್ಯ
ಉಜ್ವಲೋಜ್ವಲ ಬಿಂಬ ಇಳಿದತ್ತು ಸಮುದ್ರದ
ತಡಿಗೆ. ರಂಗಿನೋಕುಳಿಯ ಚೆಲ್ಲಿದ ಸಾಂಗಿನಲಿ
ಜಲರಾಶಿ ಕೆಂಗಲಿಸಿದುದು ರವಿಯ ಬಿಂಬದಿಂ.
ಸಾಯಂ ಶಾಂತಪ್ರಶಾಂತನಿಶಾಂತವಾಶಾಂತ

→

ಸಂದೃಶ್ಯಮಾನ ಸೌಂದರ್ಯದಿಂ ಬಾನ್‌ಧಳ
ಲೋಕೋತ್ತರವಾಯ್ತು ; ಸಗ್ಗಸಿರಿಯೆ ಧರೆಗಿಳಿದೊಲ್
ಸ್ವರ್ಗೀಯತರವಾಯ್ತು, ಬಂಧುರ ರುಚಿರವಾಯ್ತು.

ಮುಂಪಯಣದಲಿ ಕಳಿದುವೆನಿತೊ ದಿವಸವಾನಂ.
ಬಳಿಕೊರ್ಮೆ ಬಡಗಣದಿಶೆಯಿಂ ಸುಯ್‌ಸುಯ್ಯೆಂದು
ಬಿರುಸಾಗಿ ಬೀಸಾಡಿ ರೋಷ ಭೀಷಣತೆಯಿಂ
ಬೀಸುತ್ತ ಬಂದ ಗಾಳಿ ಪ್ರಚಂಡ ವೇಗದಿ
ಬೀಸಿವೀಸಿ ಚಂಡತನದಿಂ ಘೋರ ರೂವಿಂ
ಬೋರ್ ಬೋರಾಡುತಿರೆ ಜಹಜು ದಾರ ಹರಿದಾ
ಗಾಳಿಪಟದೊಲ್ ತತ್ತರಿಸಿ ತುಯ್ಯಲಾಡುತ
ತಿರ್ರನೆ ತಿರುಗಿ ತಳಮಳಿಸಿದುದು ಜಲರಾಶಿಯ
ಮಧ್ಯೆ. ಅಪರಿಮಿತ ಜನರಾಶಿಯುಂ ಒಡಲ್ಗೊಂಡ
ಮಹಾ ಛೈತ್ರಂ ಬುಗುರಿಯೊಲ್ ಸುತ್ತಿ ತಿರುಗುತಿರೆ
ನೆಲೆದಪ್ಪಿ, ದಿಕ್ಕೆಟ್ಟು, ಪಥಗೆಟ್ಟು ಅತ್ತಿತ್ತ
ತುಯ್ದುದು ನೆರೆ ತುಯ್ಯುತ್ತೆ, ತುಯ್ದುಯ್ದು ಮುಳುಗುವ
ಮಾಳ್ಕೆಯಲಿ. ಅಲ್ಲೋಲ ಕಲ್ಲೋಲಿತ ಅಲೆಗಳ
ರಭಸದಲಿ ತಿರುಗಿದುದಾ ಛೈತ್ರ ಚಕ್ರಮಂ ಹೋಲಿ !
ಒಳಗಿದ್ದ ನೂರಾರು ಪಯಣಿಗರ್ ಎದೆನಡುಗಿ
ಡವಡವಿಸಿರೆ ಗಿರ್ರನೆ ತಲೆ ತಿರುಗಿ ನೆಲೆದಪ್ಪಿ
ಉರುಳಿ ಬಿಳ್ದರ್ ಎಲ್ಲಿದ್ದರಲ್ಲಲ್ಲಿ. ಭೀಕರ
ಭಯಾನಕ ಬಿರುಗಾಳಿಯು ಸುಯ್ಯನೆ ಸುಯ್ದುಯ್ದು
ರೊಯ್ಯನೆಯೆ ರೋಷದುಸಿರ್‌ವಿಡುತ್ತೆ ಮಾಂಕರಿಸಿ
ಫೂತ್ಕರಿಸಿ ಅನ್ವಳಿಸುತಿರೆ ಛೈತ್ರಂ ಮುಳುಗಿ
ಹೋಹನಿತು ಭೀಭತ್ಸ ಭೀಷಣ ಗತಿ ! ಘೋರನೆ →

ಭೋರ್‍ಗುಡುವ ಅಲೆಗಳೇಳುತಿರೆ ಜವರಾಯನೇ
ತಾನಾಗಿ ! ನೌಕೆಯುಂ ಏರಿಳಿತದಲಿ ಸಿಲ್ಕಿ
ಘೋರಾತಿಘೋರ ಧಾಳಿಯಲಿ ಚಣಾಚಣಂ ಮೃತ್ಯು
ಕೂಪಕಿಳಿಸುವನಿತು ಅಪಘಾತದ ಅವತರಣಂ !
ಅಳುವೆನೆನೆ ಸೊಲ್ಲು ಹೊರಡದ ಪರಿ ಜನತತಿ ಭಯ
ಭೀತಿಯಲಿ ಸೋಲ್ದು ಸೋತು ಬಿಳ್ದುದು ನೆಲಗಚ್ಚಿ.
ಮೃತ್ಯುಮಯ ದುಃಖಾಗ್ನಿಯ ಕಿಡಿಕಿಡಿಗಳ್ಹೊಡಿ
ಸುಟ್ಟು ಕಟ್ಟುರಿಯಾದ ಜನತತಿಯ ಸ್ಥಿತಿಯಂ
ಕಂಡು ಕರುಣ ಕಾತರ ಮನದಿಂ ಗಾಂಧೀಜಿಯುಂ
ಎಲ್ಲರಂ ನಲ್ಮಾತುಗಳಿಂ ಸಂತೈಸಿ ಧೈರ್ಯ
ಸ್ಥೈರ್ಯವಂ ತುಂಬಿ ರಾಮಧ್ಯಾನಂಗೈಯಿರೆಂದು
ಒಂದೆಡೆಯಲಿ ಕೂಡಿಸಿ ತಾವು ಆರಂಭಿಸಿದರ್
"ರಾಮ ರಾಮ ಜೈ ಸೀತಾರಾಮ ಜೈ ಜೈರಾಮ"
ಒಕ್ಕೊರಲ ರಾಮಧ್ಯಾನ ಉಸಿರಿಲ್ಲದೆಯುಂ
ಹೊಮ್ಮಿದುದು ರಾಮ ರಾಮ ಸೀತಾರಾಮ ಎಂದು
ಪ್ರಾಣಾಂತಕ ರಣಗೋಳಿನಲಿ ಬಿರುಗಾಳಿಯುದು
ಬೀಸುತಲಿರೆ ವಾರ್ಧಿಯ ಅಬ್ಬರದ ಉಬ್ಬರಂ
ಮೇರೆ ಮೀರುತಲಿರ್ದುದು ಭೋರನೆ ಭೋರ್ಗರೆದು.
ಭಕ್ತಿಯಿಂ ದೈನ್ಯದಿಂ ಸಂಕಷ್ಟದಿಂ ಬೇಡಿ
ಪಾಡುತಲಿರೆ ರಾಮಧುನಿಯಂ, ಆವ ಚಣದಲಿ
ಕಿವಿಗೊಟ್ಟಿತೊ ಪರದೈವ ಬಿರುಗಾಳಿ ದಿಕ್ಕಂ
ಬದಲಿಸಿತು ಕರುಣ ದ್ರವ್ಯ ಕರಂಗಿ ನೀರಾಗಿ
ಹರಿದವೊಲ್ ! ಆದರಾ ಭುಗಿಲೆದ್ದ ಬೃಹತ್ತಮ
ಅಲೆಗಳೊರ್ಮೆಗೇ ಶಾಂತಗೊಳಲುಂಟೇ ? ಗಾಳಿ

→

ಮುಂದೆ ಮುಂದೆ ಸಾಗುತೆ ದೂರಕೆ ಪಯಣಿಸೆನಿತೊ
ಪೊಳ್ತು ಭೈತ್ರಂ ಅತ್ತಲಿತ್ತ ತುಯ್ದಾಡಿದುದು
ಹುಚ್ಚೆದ್ದು ಭೋರ್ಗರೆವ ಮಹಾ ಅಲೆಗಳ ಘೋರ
ಜಂಜಡದ ಸೆರೆಯೊಳ್ ಸಿಲ್ಕಿ, ಇದ್ದೆಡೆಯಲಿರದೆ
ತೂಗಿದತ್ತು ತೂಗುಯ್ಯಲೆಯೊಲ್. ಅಲೆಯೋಳಿ
ಸುಶಾಂತಗತಿಗಿಳಿವುದೆಲ್ಲಿ ಜಹಜಿಗೆ ಸಹಜ ಗತಿ ?
ಭೋರೆಂದು ಭೋರ್ಗರೆದು ನುಗ್ಗಾಡುವ ಅಲೆಗಳ
ಮೇಲೆ ನೆಲೆಗೊಳ್ಳಲಾರದೆ ತೊಳಲುತಿರ್ದುದಾ
ನೌಕೆ ಭಯಂಕರವಾಗಿ. ರಾಮಧುನಿ ಎಡವಿಡದೆ
ಮೊಳಗುತಿರ್ದುದು ಎಲ್ಲರೊಗ್ಗಿನಿಂದಲಿ. “ರಾಮ
ರಾಮ ಸೀತಾರಾಮ” ಭಕ್ತಿರಸವದು ಮಧುರ
ಶ್ರೋತ್ರಸ್ವನಿಯಾಗಿ ಹರಿದುದು ನರ ನಾಡಿಗಳಲಿ
ದೇಹದಾದ್ಯಂತ. ಆ ದೂರದೂರಕುಯ್ದಾ
ಜಂಝಾವಾತಂ ಜಡಿದು ಕುಟ್ಟಿ ಬೀಸಿವೀಸುತೆ
ಘೋರ ರೋಷಾವೇಶದ ಆರ್ಭಟದುಸಿರು ಬಿಡುತೆ
ಮಹಾವಾರ್ಧಿಯುಂ ಅಪ್ಪಳಿಸುತಿರ್ದುದು ಕಣ್ಗೆ
ಗೋಚರಿಸುವ ಪಾಂಗಿನಲಿ. ಭಯಭೀತ ಪಯಣಿಗರ್
ಗಡಗಡ ನಡುಗುತೆ ತೊದಲು ದನಿಯಲಿ ಒಗ್ಗೂಡಿ
ಆರಂಭಿಸಿದರ್ ಮತ್ತೆ ರಾಮಧುನಿಯುಂ. ತೆಕ್ಕನೆ
ಒದವಿದ ಯಮಗಂಡದ ಕರಾಳ ಗತಿಯಿಂದಲಿ
ಪಾರುಗೈದ ಶ್ರೀರಾಮನಾಮದ ಮಹಿಮೆಯುಂ
ಮನಗೊಂಡು ಸುಖದುಃಖದ ಗದ್ಗದ ಸ್ವರದಿಂ
ಭಜಿಸಿ ಧ್ಯಾನಿಸಿದರ್. ಆಪತ್ತಿನಲಿ ಬೆಂಗಾಯ್ದ
ದಿವ್ಯ ರಾಮನಾಮವದು ಎಲ್ಲರ ಮನದಲ್ಲಿ

→

ಅನುರಾಗಶಿಯುಲಿ ನೆಲಸಿ ದೃಢವಾಯ್ತು ; ಅಮೃತ
ಮಯವಾಯ್ತು. ಅಂದಿನಿಂ ಗಾಂಧೀಜಿ ಭಾವನಾ
ಸಂಪುಟದಲಿ ಶ್ರೀರಾಮನಾಮದ ಹಿರಿಮೆಯುದು
ಸ್ಥಿರವಾಯ್ತು ಜೀವನಾಂತ್ಯದಗಳಿಗೆ ಬರುವನ್ನ.

ಮುಂದಿನ ನೌಕಾಯಾನ ಸಹಜ ಗತಿಯುಲಿ ನಡೆದು
ಸಂದು ಹೋದುವು ಕೆಲವಾನು ದಿವಸವಾನಗಳ್.
ಶಾಂತಿಯಿಂ ಪಯಣಂ ಮುಗಿಬಗಿಯಾಗುತಿರೆ ನಸು
ದೂರದಲಿ ಉತ್ತರದ ದಿಗ್ ದೇಶದ ನೆಲೆಯೊಳ್
ಕಣ್ಗೆತ್ತುದು ಆಫ್ರಿಕಾ ಖಂಡದ ಮಹಾ ಪ್ರಸ್ತ
ಭೂಮಿ ! ಹಸುರಿನ ಹಿನ್ನೆಲೆಯುಲಿ ಭೂ ವಿಸ್ತಾರ
ಹೊನ್ನ ರಾಜಿಯುಲಿ ರಂಜಿಸಿದತ್ತು. ಇನ್ನಿಸಿತು
ಮುಂಬರಿದು ಜನರಾಶಿಯುಂ ಕಣ್ಗೆಸೆಯೆ "ಅದೋ
ನೆಲ ! ಅದೋ ನೆಲ !" ಕೂಗಿದರ್ ಜಹಜಿನ ಮುಂಗಡಿ
ಮಂಚೂಣಿಯುಲಿರ್ದ ಜನ. ಪುರುಪಿನಿಂ ಮತ್ತೆ
ಕೂಗಿದರ್ ದನಿ ಎತ್ತರಿಸಿ ! ಆಗಳೇಂ ತೋಷ
ಘೋಷಂ ಉಕ್ಕಿ ಹರಿದುದು ನಗೆಯ ದನಿ ಮರ್ಮರಿಸಿ.
ಚಿಣ್ಣ ಮಕ್ಕಳ್ ನೂಕು ನುಗ್ಗಲಾಡಿ ಮುಂಗೆತ್ತರ್
ನೋಡುವಾತುರದಲಿ ಗಜಿಬಿಜಿಯುಂ ಮೂಡಿಸಿ.

ಗಾಂಧೀಜಿಯುಂ ಮಿನ್ನೆ ತಾನಲ್ಲಿ ಇರುತಿರ್ದ
ವೇಳೆಯೊಳ್ ಶ್ವೇತವರ್ಣೀಯರ ಪ್ರಭುತ್ವಂ
ಧೂರ್ತತನದಿಂ ವಿಚಾರ ಹೀನ ದಮನ ನೀತಿಗೆ
ಇಂಬುಕೊಟ್ಟಿರಲ್ ಪ್ರಜಾ ಪೀಡನೆ ನಡೆದುದು
ಗಂಭೀರ ಗತಿಯುಲಿ. ಅಂತೊಂದು ಹೀನ ನಡೆಯು
ವಿರುದ್ಧ ವಿನಯದಿಂ ದನಿಯೆತ್ತಿ ಜನ ಹಿತಮಂ
→

ಸಾಧಿಸೆ ಪೌರ ನ್ಯಾಯ-ನೀತಿಗಳ ಸಂಹಿತೆಯಂ
ಮುಂದಿಟ್ಟು ಹೋರಾಡಿ ತಮ್ಮ ಹಕ್ಕು ಬಾಧ್ಯತೆ
ಏನೆಂಬುದಂ ತೆರೆದ ಹೃದಯದಿಂದಾರ್ಜಿಸಿ
ಪೌರ ಹಕ್ಕು ಬಾಧ್ಯತೆಗಳಂ ನ್ಯಾಯವತ್ತಾಗಿ
ಪಡೆದು ಜಯಲಕ್ಷ್ಮಿಗೆ ವಿಜಯ ಹಾರವ ತೊಡಿಸಿರ್ದ
ಕೀರ್ತಿ ಕೇತನದ ಪರಾಕಾಷ್ಠೆ ಎಂಬುದರರಿವು
ಮೂಡಿದುದು ಕಸ್ತೂರಿ ಬಾಗೆ ಆ ದೇಶವಂ
ಮತ್ತವಸಾ ದೇಶಿಗರಂ ಕಂಡವರ್ಮೇಲೆಯೆ. ಸತೀ
ಮಣಿ ಮುಗ್ಧದುಗ್ಧ ಭಾವದಿಂ ಪರಿವೀಕ್ಷಿಸಿದ
ಪರಿಯೆ ಬೇರೆ. ಅಲ್ಲಿನ ಬಿಳಿಯ ಯುವ ಪ್ರಭೃತಿಗಳ
ಸದಿಚ್ಛೆಯೆ ಬೇರೆ. ನೌಕೆ ಮುಟ್ಟಿತು ತೀರವಂ ;
ಗಾಂಧೀಜಿಯಂ ಕಂಡೊಡನೆ ಬಿಳಿಯರ ರೊಚ್ಚು
ಕೆರಳ್ದುದು. ಅಂದವಂ ಭಾರತಕೆ ಪಿಂತಿರುಗಿ
ಪೋದನೆಂಬ ಸುದ್ದಿಯ ಕೇಳ್ದು ನೆಮ್ಮದಿಯ ನಿಡು
ಉಸಿರ್ ಬಿಟ್ಟು ಸಂತಸದಿಂದಿರ್ದ ಯುವ ಜನಕೆ
ಮತ್ತೈತಂದನೆ ಎಂದೆಂಬ ಕಿಚ್ಚಿನ ದ್ವೇಷವಂ
ಕಾರಿದರ್ ಕಂಗಳಲಿ. ಬಂದರಿನಲಿಯೆ ಪೊಯ್ದು
ಜಡಿಕುಟ್ಟಿ ಹಿಂದಕ್ಕಟ್ಟುವ ಯೋಜನೆಯಿಂದಲಿ,
ಬಿಳಿಯರ್ ಹಡಗು ಕಟ್ಟೆಯಂಚಿನಲಿ ನಿಂತು ಕಡು
ಕೋಪದಿಂ ರೋಷದಿಂ ಕೂಗಿದರ್ "ಗಾಂಧಿಯಂ
ಹಿಂತಳ್ಳಿ ! ಗಾಂಧಿಯಂ ಹಿಂತಳ್ಳಿ ! ಅಲ್ಲದೊಡೆ
ಇತ್ತಕೊಡಿ. ಒಂದೇ ಸಲಿಗೆ ಮುಗಿಸಿಬಿಡುವುದೇ
ಸರಿ !" ಗದ್ದಲವದು ಕಿವಿಗಳಿಗೆ ಕೇಳಿಸುತಿರೆ
ಅರ್ಥವಾಗದು ವಿಭಿನ್ನ ಭಾಷೆಯ ಮಾತುಗಳ್.

→

ಕಸ್ತೂರಿ ಬಾ ತನ್ನೊಳ್ ತಳಮಳಿಸುತ್ತೆ, ಎಳೆ
ಮಕ್ಕಳಂ ಎದೆಗಾಂತು ಸೂಸಿದರಶ್ರು ಜಲಮಂ.
ಪೊಸದೇಶದಲಿ ಸೊಗದ ಸುಗ್ಗಿಯನುಂಬುವೆನ್
ಎಂದು ಪರಿಭಾವಿಸಿರ್ದ ಸತಿಗೊದವಿದ ರುದ್ರ
ಭೀಷಣತೆಯ ಸ್ವಾಗತ ನಡುಗಿಸಿತು ಎರ್ದೆಯಂ.
ನೌಕೆಯ ಚಾಲಕಂ ಒಳಗುದಿಯಲಿ ಸಿಲುಕಿ ತನ್ನೊಳ್
ಚಿಂತೆಗೆತ್ತು ಇತರ ಪಯಣಿಗರನಿಳಿಸಿ ಮೇಣ್
ಗಾಂಧೀಜಿಯಂ ಒಳಗುಳಿಸಿರುತಿರೆ ಬಿಳಿಜನಂ
ಬಿಟ್ಟರೇಂ ಸುಮ್ಮನೆ ? ಮಿಗೆ ರೊಚ್ಚಿನ ಕಿಡಿ ಕಾರಿ
ಒಳನುಗ್ಗಿ ಗಾಂಧೀಜಿಯಂ ಎಳೆದು ಬಡಿಯುತಿರೆ
ಮಡದಿ ಕಸ್ತೂರಿಬಾರವರ ಗೋಳು ಗಗನಂ
ಮುಟ್ಟಿದುದು ; ನೋಳ್ಪ ಕಣ್ ತುಂಬಿ ಕೋಡಿವರಿವಂತೆ.
ಅನಿತರೊಳ್ ಅಲ್ಲಿಗೈದ ಸಹೃದಯಿ ಆರಕ್ಷಕ
ಬಂಧುಗಳ್ ಮೇಣ್ ಭಾರತೀಯರ್ ಒಗ್ಗೂಡಿ
ಸಮಯೋಚಿತ ಸಹಾಯವನಿತ್ತು ಸತಿ ಸುತರಂ
ಶ್ವೇತ ವರ್ಣೀಯರ ಕಣ್ ತಪ್ಪಿಸಿ ಸಾಸದಿಂ
ಚಾಕಚಕ್ಯತೆಯಿಂ ರಕ್ಷೆಯಿತ್ತರ್. ಎನಿತೆನಿತೊ
ಕಷ್ಟದಿಂ ಪಯಣಿಗರ ಬೆಂಬಳಿಯೆ ನಡೆಸುತ್ತೆ
ಬಂದರಿನ ಕಟ್ಟೆಯಂ ದಾಂಟಿಸಿದರಾದೊಡಂ,
ಗಾಂಧೀಜಿ ಬಿಡುಗಡೆಯಾಗದಿರೆ ಮುಂಬರಿಯೆ
ಮನವೊಪ್ಪದೆಯೆ ನಿಂತರಲ್ಲೆ ಕಸ್ತೂರಿ ಬಾ.

ಮಹಾಸಾಗರದ ದೀರ್ಘ ಕಠಿಣ ಯಾನಮಂ
ತೀರ್ಚಿ ಭುವಿಯಂ ಮುಟ್ಟಿದೆವೆಂಬ ಸುಖ ಕಲ್ಪನೆ
ಕ್ಷಣದೊಳ್ ಕೈಮಿಂಚಿಹೋಯ್ತು. ಆಶಾಪ್ರವೃತ್ತಿ

→

ಕಳಚಿ ಬಿಳ್ದು ಮಣ್ಣಿನಲಿ ಬೆರೆತು ಮಣ್ಣಾಯ್ತು!
ಕಂಬನಿಯ ಕೋಡಿ ಹರಿದುದು ತಡೆಯಿಲ್ಲದ
ಮಾಳ್ಕೆಯಲಿ. ದುಃಖ ಸಂಕಟ ತುಂಬಿದ ನಯನ
ಚೈತ್ಯಾಕ್ಷಿಗಳ್ ರಂಗು ತಳೆದುವು ರಕ್ತ ಕೆಂಪಾಗಿ.
ಗಾಂಧೀಜಿ ಮಡದಿಗೆ ಕಣ್ ಸೂಚನೆ ನೀಡಿದರ್,
'ನೀನೀಗಲೇ ಪೋಗು, ಅನಂತರ ನಾಂ ಬರ್ಪೆಂ'
ಕಸ್ತೂರಿ ಬಾ ತರತರನೆ ನಡುಗಿದರ್. ಪ್ರಾಣ
ಪಕ್ಷಿ ತಲ್ಲಣಿಸಿತು ಎರ್ದೆಗುಡಿಯಲಿ. ಪೆಟ್ಟನಿಂ
ಗಾಯವಟ್ಟು ನೆತ್ತರಿಳಿವ ರಮಣನಂ ಬಿಟ್ಟು
ಪೋಪುದೆಂತು ? ಧರ್ಮಸಂಕಟದಲಿ ಸಿಲ್ಕಿದರ್
ಪರಮ ಸತಿ. ಅಗ್ನಿ ಕುಂಡದಲಿ ನಿಂತ ತೆರದಲಿ
ಎದೆವಿಡಿದು ಉಸಿರ್ಗಟ್ಟಿ ಕಾದಿರ್ದ ಭಾರತ
ಬಂಧುಜನರೊಡಂ ಪೊರಡಲಾರದೆಯೆ ಪೊರಟರ್
ಅಲ್ಲಿಂದ ಮಕ್ಕಳ ಸಹಿತ. ಕಂಡು ಕೇಳರಿಯದ
ಊರು, ಗುರುತರಿಯದ ಜನರಾಶಿ, ಪತಿಯ ಗತಿಯು
ಏನಾದಪುದೊ ಎಂಬ ಸಂಕಟದ ಗೋಳಿನಲಿ
ಮುಳುಗೆದ್ದ ಮಡದಿ, ಎಳಮಕ್ಕಳ ಶ್ರೀರಕ್ಷೆಯ
ಬಯಸಿ ವಿಧಿಯಿಲ್ಲದೆ ನಡೆದರ್ ಭಾರತೀಯರ
ಬೆಂಬಿಡಿದು. ಹೃದಯವ ಹಿಂದೆ ಬಿಟ್ಟು ಬಂದೊಲ್
ಸಂಕಟದ ಅವತರಣ ಎದೆಯಾಂತರಾಳದಲಿ.
ಬಂಡಿವಿಡಿದು ಬಾಬಾ ರುಸ್ತುಂಜಿಯವರ ಮನೆಯಂ
ಗಂಡವಿಲ್ಲದೆ ಸೇರಿದೊಡಂ ಪತಿವರ್ಯನುಂ
ಪಿಮ್ಮರಳಿ ಬಂದರಿಲ್ಲ. ಗತಿಯೇನಾಯ್ತೊ ? ಆ
ಧೂರ್ತ ಜನ ಮತ್ತೆ ಬಡಿದರೊ ಎಂಬುವ ಚಿಂತೆಯ

→

ಸಂಕಟಂ ಕೊರಳ್ಗೆತ್ತುದು ಘೋರ ವಿಷವಾಗಿ.
ಮನೆಯೊಡತಿಯುಂ ಕೇಳ್ವನೆನೆ ಭಾಷೆಯೆ ಬಾರದು.
ಕಂಗಳಲಿ ಕಂಬನಿಯ ಪ್ರವಾಹ ಹರಿದತ್ತು
ಗಂಗೆ ಯಮುನೆಯರ ಮಾಳ್ಕೆಯುಲಿ. ತಾಯಿಮಕ್ಕಳ
ಸಂಕಷ್ಟ ಧುಮುಧುಮಿಸಿದುದು ಒಳಗುದಿಯಾಗಿ.
ಮನಃಪ್ರಾಣಗಳ್ ತಳಮಳಿಸಿ ಹೃತ್ ಕುಂಡದ
ಅಲೆಗಳ್ ಅಲ್ಲೋಲಕಲ್ಲೋಲವಾಗುತಿರಲ್,
ಚಿತ್ತದೊಳ್ ಚಿಂತಾವೇಶಂ ಸ್ತಬ್ಧವಾದುದೊ
ಎಂದೆನಲ್ ಏನೆಂಬುದಂ ಅರ್ಥೈಸಲಾರದ
ಸ್ಥಿತಿ. ಶಿರೋಭಾರಮಂ ಕೈದಳಗಳ ಮೇಲಿರಿಸಿ
ಚಿಂತಾಪರವಶರಾದರ್ ಪತೀ ಪರಾಯಣೆ.
ಮನವೆಲ್ಲ ಚಿಂತಾಮಯ ; ದುಃಖಮಯ ; ಯೋಚನಾ
ಮಯ ; ಇತಿ ಅಮಿತಮಯಗಳಿಂ ತುಂಬಿ ಕೊರಳ್ಗದು
ಉರುಳಾಯ್ತು, ಪ್ರಾಣ ಕುಂಡಲನಿಗೆ ಮುಳ್ಳಾಯ್ತು.
ಮನೆಯ ಮುಂದಿನ ಜಗಲಿಯುಲಿ ಜನರ ಕೂಟವದು
ಕೂಡಿ ಮಾತುಕತೆಗಳ ಗದ್ದಲಂ ಪೆರ್ಚಿದುದು
ಕರ್ಣಕಠಿಣವಾಗಿ. ಬಳಿಯುಲಿ ಮೈಮುದುಡಿರ್ದ
ಮಕ್ಕಳ್ ಮುಸುಮುಸು ಅಳುವಿನ ಗದ್ದಲ. ಎದೆಯುಲಿ
ದುಃಖ ಸಂಕಟದ ಗದ್ದಲ ಎಲ್ಲವುಂಗೂಡಿ
ಗದ್ದಲಮಯಮಾದುದು ಪೊಳ್ತು. ದುಃಖಿನಿ ಕಸ್ತೂರಿ
ಬಾ ಮೈಮುದುಡಿದರ್ ಪೆರ್ಮಳೆಗೆ ಸಿಲ್ಕಿದ ಹಕ್ಕಿ
ಮರಿಯವೊಲ್. ಸಾಯಂ ಸಮಯಮುರುಳಿ ನಿಶೆಯಡರಿ
ಬಂದಳ್ ಕರಿಗಪ್ಪಿನ ದುಕೂಲವನುಟ್ಟು. ಪೊರ
ಜಗಲಿಯುಲಿ ಪತಿ ಗಾಂಧೀಜಿಯ ಸೊಲ್ಲು ಕೇಳ್ದುದು

→

ತೆಕ್ಕನೆ ಕಿವಿ ನಿಮಿರುವೊಲ್ ! ಸಧ್ಯ, ಬದುಕುಳಿದು
ಬಂದುದೇ ಸಾಕಾಯ್ತು ಕಸ್ತೂರಿ ಬಾ-ಗೆ. ಆ
ಗಳಿಗೆಯೊಳೆ ಒಳಗೈದರ್ ಗಾಂಧೀಜಿ, ನೋಳ್ಪವ
ಕಣ್ ಕಂಗೆಡುವೊಲ್ ! ಉಟ್ಟ ಬಟ್ಟೆಯಲಿ ರಕ್ತದ
ಕಲೆಗಳಿಂಗಿದುದು ಹೆಪ್ಪಿಟ್ಟಂತೆ. ತಲೆ ಹಣೆ
ಮುಖಗಳಿಂದಿಳಿದ ನೆತ್ತರಧಾರೆ ಭಯಾನಕ !
ಭೀಭತ್ಸ ! ಕಸ್ತೂರಿ ಬಾರವರ ಚೈತನ್ಯ
ಶೂನ್ಯ, ಬುದ್ಧಿ ಶೂನ್ಯ. ಏಳುವೆನೆನೆ ಕೈಕಾಲ್
ನಡುಗಿ ಕುಸಿದರಲ್ಲೀ. ಹಿಂದೆಯೇ ಒಳಗೈದ
ಬಾಬಾ ರುಸ್ತುಂಜೀಯುಂ ಗಾಂಧೀಜಿಗೆ ಸಕಲ
ಸಹಾಯವನಿತ್ತು ಮಜ್ಜನಗೈಸಿದ ಬಳಿಕಂ
ಔಷಧೋಪಚಾರಕೆ ಸನಿಹದೊಳಿರುತಿರ್ದ ವೈದ್ಯ
ವಾಚಸ್ಪತಿಯುಂ ಬರಮಾಡಿದರ್. ಆ ಶ್ವೇತ
ವೈದ್ಯಮಹನೀಯುಂ ಮೈಯ ಗಾಯಗಳಿಂಗೆ ತಕ್ಕಿನ
ಮದ್ದೂಡಿ ಕಟ್ಟು ಬಿಗಿವನಿತರೊಳ್ ಪ್ರಾಂಗಣದಿ
ಗದ್ದಲವೆಳ್ದುದು ಮತ್ತೆ ! ಕೂಗು ಕಿರುಚಾಟಗಳ್
ಕೂರ್ಬಾಣಗಳ ಮಾಳ್ಕೆಯಲಿ ತಾಗಿದುವು ಮನಂ.
ಮತ್ತದೇ ಬಿಳಿಯ ದುರುದುಂಬಿಗಳ್ ಗಾಂಧೀಜಿಯ
ಬೆಂಬಿಡಿದು ಬಂದು ಅಲ್ಲಿರ್ಪುದನರಿತು ಕೂಗಿ
ಕರೆಯುತ್ತೆ ಗದ್ದಲವನೆಬ್ಬಿಸಿದರ್ "ಗಾಂಧೀ
ಬೇಕು ! ಗಾಂಧೀ ಕೊಡಿ ! ಅಲ್ಲದೊಡೆ ಈ ಮನೆಯ
ಧ್ವಂಸಗೊಳಿಪುದೇ ದಿಟಂ !" ಬೊಬ್ಬೆಯೋ ಬೊಬ್ಬೆ ! ಆ
ಪ್ರಂಡುವೆತ್ತ ದುರುದುಂಬಿಗಳಂ ನಲ್ ಮಾತಿನಲಿ
ಸಂತೈಸಲೆನಿತೆನಿತೋ ಧ್ವನಿಗಳ್ ಪ್ರಯತ್ನ

→

ನಡೆಸುತಲಿರ್ದುದು ಕೇಳ್ದುದು. ಆದೊಡವರ್ ತಮ್ಮ
ರೋಷ ದ್ವೇಷಂಗಳಂ ಪಿಂತೆಗೆದರಿಲ್ಲ. ಮಿಗೆ
ಬಿತ್ತರದ ಧ್ವನಿಯಲಿ ಕೂಗಿದರ್ "ಗಾಂಧಿಯ
ಹೊರಗಟ್ಟೆ !" ಆಗಳೊರ್ವ ಶ್ವೇತ ವರ್ಣೀಯ ಮನ
ಮರುಗಿ ಸಹೃದಯತೆಯಿಂ ಬಿಳಿಯ ಆರಕ್ಷಕನ
ತೊಡುಗೆಯಂ ಕಳಚಿ ಗಾಂಧೀಜಿಗೆ ತೊಡಿಸಿ ರುದ್ರ
ಭೀಷಣ ಗದ್ದಲಗಳ ಕಣ್ ಮುಂತೆಯೇ ತಮ್ಮ
ಸಂಗಡಿಗನ ಮಾಳ್ಕೆಯಲಿ ದಾಂಟಿಸಿ ಪಾರುಗೈದು
ಉಪಕರಿಸಿದ ಬಳಿಕಂ ತಲೆಬಾಗಿಲಂ ತೆರೆದು
ತೋರಿದರ್. ದುರುದುಂಬಿಗಳೊಳ್ ನುಗ್ಗಿ ಮನೆಯಂ
ಪರಿಶೋಧಿಸಿ ನಿರಾಶೆಯಲ್ಲಿ ಪಿಂದಿರುಗಿದರ್.
ತಂತಮ್ಮ ಹಾದಿ ಹಿಡಿದು !

ಅಂದಿನ ಕೂರಾತಿ

ಕೂರ ರಾತ್ರಿಯೆಂತು ಉರುಳ್ದುದೋ ಮೈಮನದ
ನೋವುನಿಡಿಗಳೆಂತು ಕಳೆದುವೋ ಎನೆ ಗಂಭೀರ
ಗತಿ ಹೆಜ್ಜೆಯಿಡುತೊಯ್ಯನೆ ಆಫ್ರಿಕಾ ದೇಶೀಯ
ಉದಯಮಾನೋತ್ಸವ ಸುರ ಸುಂದರ ಶೈಲಿಯಲಿ
ನಡೆದುದು ರವಿಯ ರುಕ್ಮರಾಗಾತಪದ ಕನಕ
ಮಂಡಳಂ ರಂಜಿಸಿತು ಮೂಡಣ ದಿಗ್ಭಿತ್ತಿಯ
ಮೇಲೆ. ಶುಕ ಪಿಕ ವಿಹಂಗಗಳ್ ವಿವಿಧ ರಾಗದಿ
ಗೀತಾಂಜಲಿಯನರ್ಪಿಸಿ ಹೊಂದಳಿರಿನ ದಿವ್ಯ
ಹೊಂದಳಿಗೆಯಲಿ ಹೊನ್ನಾರತಿಯೆತ್ತುತಲಿಹವೋ
ಎನೆ ಹೊನ್ನರಾಗದಿಂ ಜಗಜಗಿಸಿ ಪೊಳೆದತ್ತು
ಹೊನ್ನ ಹೊತ್ತರೆ. ಸತೀ ಕಸ್ತೂರಿ ಬಾ ತೆರೆದ

→

ಕಿಟಕಿಯಲಿ ಮೊಗವಿಟ್ಟು ನೋಡಿದರ್ ನೇಸರಿನ
ಆಯೋಜನಾ ವೈಖರಿಯುಂ. ಹಚ್ಚ ಹಸುರ್ಪಿನ
ತಂಗಾಳಿಯು ಲೀಲಾಖೇಲನದಿ ಓಲಾಡಿ
ತುಯ್ಯಲಾಡುತಿರಲತ್ತಿತ್ತ ರಂಗು ರಂಗಿನ
ತಳಿರಿಂದೆಸೆವ ವನವಾರ್ಧಿಯುಂ ಶೃಂಗಾರ
ಸೌಂದರ್ಯದಿಂ ಶೋಭಿಸಿದತ್ತು ಕಣ್ಮನಗಳಂ
ಸೆಳೆಯುವ್ರೊಲ್. ಅತ್ತಿತ್ತಲಲೆದು ತುಯ್ಯಲಾಡುವ
ವನವಾರ್ಧಿಯ ಪಲ್ಲವ ಪಾಣಿಯಲಿ ವರ್ಣಮಯ
ಪುಗಳ ಹಿಲಾಲುಗಳು ಪರಿಶೋಭಿಸಿ ನಲಿದುದು
ತಲೆದೂಗಿ. ಪ್ರಕೃತಿಯ ಅಗಾಧ ಸೌಂದರ್ಯ
ರಾಶಿಯಲಿ ಮುಳುಗಿರುತಿರೆ, ವೀಥಿಯ ಸುದೂರದ
ತಿರುವಿನಲಿ ಶ್ವೇತವರ್ಣೀಯ ಜನರಿರ್ದ ಹಿಂ
ದಂಡು ಇತ್ತಲೈತ ುತಲಿರ್ದುದು ಕಣ್ಗೆಸೆಯೆ
ಮೈ ನಡುಗಿದುದು ತರತರನೆ. ಮುನ್ನಾದಿನದತಿ
ಕೂರ ಘಟನೆಯುಂ ನೆನೆದು. ಮನೆಯೊಳ್ ಗಾಂಧೀಜಿ
ಮಕ್ಕಳಲ್ಲದೆ ಬೇರಾರಿಲ್ಲ. ಗಾಯುವಟ್ಟು
ನೆತ್ತರ್ ಬಸಿದು ಮಾನಸೀಯ ಹಿಂಸೆ ಮತ್ತಂ
ದೈಹಿಕ ಹಿಂಸೆಗೆ ಒಳಪಟ್ಟು ಮೈ ಸೋಲ್ದು ನೆರೆ
ಬಳಲಿ ನಿದ್ರಾದೇವಿಯ ಮಡಿಲಲಿ ಮಗುವಿನೋಲ್
ಮಲಗಿರ್ದ ಪತಿ ಸೆಜ್ಜೆಯುಂ ಬಿಟ್ಟು ಎದ್ದಿಲ್ಲ.
ಮತ್ತಾರ್ ಇಲ್ಲವೀ ತಾಣದಲಿ. ಈಗಳೇಂ
ಗೈಯಲಿ ? ಎನುತೆ ಭಯದಿಂ ಕಿಟಕಿಯ ವಾಗಿಲಂ
ಮುಚ್ಚಿದರ್ ತಟ್ಟನೆ. ನಸುವ್ರೊಳ್ತಿನಲಿ ಎಲ್ಲರ್
ಬಾಗಿಲಿಗೈದು ಕಟಕಟ ಮಿಡಿದರ್ ತಲೆಬಾಗಿಲಂ.

→

ರಾತ್ರೋರಾತ್ರಿ ಬಂದಿಳಿದ ಮನೆಯು ಪರಿಚಯಮಿನ್ನು
ಆಗಿಲ್ಲ. ಇಂ ನೆರೆಹೊರೆಯು ಪರಿಚಯಮಿರ್ಪುದೆ ?
ಆರ ನೆರವಂ ಬೇಡಲಿ ? ಎಂತಿದರ ನಿವಾರಣೆ ?
ಎಂದೆಂಬ ಚಿಂತೆ ಮನಮಂ ಕಾಡಿದತ್ತು. ಸತಿ
ಮನದಿಷ್ಟದೈವಮಂ ಧ್ಯಾನಿಸುತೆ ಕಲ್ಲಿನೊಲ್
ನಿಂದರ್ ಧಣಧಣಿಸಿ ಮಿಡಿವ ಎದೆಯೊತ್ತಿ ಹಿಡಿದು !
ಭಯ ಭೀತಿಯ ಗಾವದಿಂ ಕಪ್ಪು ತಳೆದತ್ತು
ಮೊಗವರ್ಣ. ಬಾಗಿಲ ಮಿಡಿದ ಸದ್ದು ಕೇಳ್ದಿಪ್ಪ
ಗಾಂಧೀಜಿಯುಂ ಬಾಗಿಲ್ ತೆರೆಯಲ್ ಮುಂದಾಗೆ
ಬೇಡೆದರ್ ಕಸೂರಿಬಾ ತಡೆದು ಅದೇ ಧೂರ್ತ
ಜನ ಬಂದಿಹರ್ ಎಂಬ ಕಣ್ ಸೂಚನೆಯಂ ನೀಡಿ !
ಬಾಯ್ದೆರೆದು ನುಡಿಯೆ ಗಂಟಲಿನ ಹಸಿಯೊಣಗಿದುದು
ಸೊಲ್ಲುಡುಗಿ. ಆ ಶ್ವೇತ ವರ್ಣೀಯರ ಹಿರಿದಂಡು
ಮತ್ತೆ ತಟ್ಟಿದುದು ಬಾಗಿಲಂ. ಗಾಂಧೀಜಿಯುಂ
ವಿಷಯಮರಿತುಂ ಧೈರ್ಯದಿಂ ತೆರೆದರ್ ಬಾಗಿಲ್.
ಗಾಂಧೀಜಿಯ ಗಾಯಗಳ ಕಟ್ಟಂ ಕಂಡೊಡನೆ
ಲಜ್ಜಾ ವಿಷಾದದಿಂ ಕುಗ್ಗಿ ನಲುಗಿ ವಿಧವಿಧ
ಭಾವನೆಗಳ ಪಾತ್ರೆಯಂಚಿನಲಿ ತಕಪಕನೆ ಕುದಿ
ಕುದಿದು ಮನಮತಿಗಳ್ ಪುಟಗೊಂಡುವೋ ಎನೆ ಎಲ್ಲ
ಕಟ್ಟಾಳುಗಳ್ ತಲೆ ಮಣಿದು ಹಸ್ತಲಾಘವಂ
ನೀಡಿ ಇಂತೆಂದರ್ "ಎಲೆ ಗಾಂಧೀ, ನಿನ್ನೆಯುಂ
ನಡೆದ ದುರ್ಘಟನೆ ತೀವ್ರತರ ಅಪಾರ್ಥ. ಅನ್ನೆಯ
ಅವಜ್ಞೆಗಳಿಂದಾಯ್ತು. ಮನಕದಂ ತಾರದೆಯೆ
ಮನ್ನಿಪುದು !'

→

ಗಾಂಧೀಜಿ ಪ್ರಸನ್ನವದನದಿಂ
ಬೀಳ್ಕೊಟ್ಟರ್, ಶ್ವೇತ ವರ್ಣೀಯ ಬಂಧುಗಳಂ.
ಭಯ ಭೀತಿಯಿಂ ಬೆದರಿ ಕಂಗಾಲಾಗಿರ್ದ ಸತೀ
ಕಸ್ತೂರಿ ಬಾ ಸ್ನೇಹಭಾವಮಂ ಕಂಡು ಅನುರಾಗದಿಂ
ಕೈಜೋಡಿಸಿದರ್ ಚಿಂತೆವಿಟ್ಟು. ವಿಶ್ರಾಂತಿಯಲಿ
ಕಳೆದುಹೋದುದು ವಾರವೊಂದು. ಗಾಂಧಿಜಿಯುಂ
ನಿರಪರಾಧಿಯಾದ ತನ್ನಂ ಹಿಂಸಿಸಿದ ಕಾರಣಂ
ಬಿಳಿಯರ ವಿರುದ್ಧ ಆರೋಪಮಂಗೈದು ಆವ
ಮೊಕದ್ದಮೆಯುಂ ಹೂಡದಿರೆ ಶ್ವೇತವರ್ಣೀಯ
ಜನಾಂಗವದು ತಮ್ಮಾಗಳ ಸ್ನೇಹಹಸ್ತಮಂ
ತೋಷದಿಂ ಚಾಚಿದತ್ತು. ದ್ವೇಷದ ಕಿಡಿ ಆರಿ
ಸಂಜೀವನೋಚಿತ ತಿಳಿ ವಾತಾವರಣ ಪರಿ
ಸರದಲಿ ಉದಿಸೆ ಜೀವಿತೋದ್ದೇಶಕೆ ಅನುಪಮ
ಬಿತ್ತಾಯ್ತು. ಚೈತ್ರಪ್ರಭಾತಂ ಸುರಸುಂದರ
ಮಧುರಮಾಯ್ತು. ಕುಮುದಿನಿಗೆ ಮೊಗಬಾಡಿ ಬೆಳ್ಳನೆ
ಕಮಲಿನಿಗೆ ನಗೆಮೂಡಿ ಅರಳುತಿರೆ ದಸದಿಸೆಯ
ತಂಗಾಳಿ ಸುಯ್ಯುಯ್ಯು ತೀಡಿದುದು ವಿಹಂಗಮ
ಕೋಟಿಯಿನೆಳಗ್ಚಿಪವೊಲ್.

ಶ್ವೇತ ವರ್ಣೀಯರಂ
ಕ್ಷಮಿಸಿ ಸ್ನೇಹಹಸ್ತವನು ಚಾಚಿದ ದಿವಸಮೇ
ಗಾಂಧೀಜಿ ಸತ್ಕೀರ್ತಿ ಶಿಖರವನ್ನೇರಿದರ್
ತಾವರಿಯದಂತೆವೊಲ್. ನೀತಿ ನ್ಯಾಯದ ನೆಮ್ಮ
ಸಲಹೆಗಳಿಗೆ ಬರ್ಪ ಜನಸಂಖ್ಯೆ ಬೆಳೆಯುತಿರ್ದು
ಗಾಂಧೀಜಿಯ ಪೆಸರ್ ಮನೆಮನೆಯಲಿ ಪ್ರದೀಪ್ತಿ

→

ಬೆಳಗಿದಪೊಲಾಯ್ತು ಕಾಲಕ್ರಮದಲಿ. ರಮಣನ
ಜನಸೇವೆಯಲಿ ಬಹ್ವಂಶ ಸತೀಮಣಿಯು ಪಾಲಿಗೆ
ಸೇರಿದತ್ತು ಕ್ರಮವತ್ತಾಗಿ. ಬಹುವತಿಥಿಗಳ
ಸತ್ಕಾರ ಗೃಹಿಣೀ ಪದಕ್ಕಿತ್ತ ಮಹೋನ್ನತ
ಉಂಬಳಿ. ಅನುದಿನ ಬಿಡುಪಿನಿತುಕೊಡದ ಸಂಸಾರ.
ಸತ್ ಸಹನಾ ಮೂರ್ತಿಯೇ ತಾನಾದ ಕಸ್ತೂರಿ
ಬಾ ಎಲ್ಲವಗೆಯು ಕಾರ್ಯ ಕಲಾಪಗಳ ಹೊಣೆ
ಹೊತ್ತು ಒಳ ಹೊರಗೆ ದುಡಿಯುವರ್ ದೀಕ್ಷಾ ವ್ರತ
ವಿಡಿದವೊಲ್. ಪರದೇಶೀಯ ಪೊಚ್ಚಪೊಸ ರೀತಿ
ನೀತಿಯಿಂದೆ ರೂಪುಗೊಂಡಿತು ವಿನೂತನ ಗತಿಯು
ಬಾಳು. ಅನುಕ್ರಮದೊಳ್ ಪುಟವಿಟ್ಟ ಅಪರಂಜಿ
ತಾನಾಯ್ತು ಬದುಕು. ಸತಿ ಕಸ್ತೂರಿ ಬಾ ನವೋ
ನವ ನಾಗರಿಕತೆಯಲಿ ತೊಳಗಿ ಬೆಳಗಿದರಮಿತ
ತೋಷಿಣಿಯೈಸಿ. ಪ್ರಜೆಗಳ ಹಿತಾಸಕ್ತಿಯಲಿ
ಪತಿವರ್ಯನುಂ ಭೇದಭಾವವಿಲ್ಲದೆ ಮುಳುಗಿ
ಸಹಕಾರವಿತ್ತು ಭಂಗ ಬನ್ನದ ಜಂಜಡಂ
ಬಿಡಿಸಲ್ ಗೈವ ಸಮಾಜ ಸೇವೆಯುದು, ಅನನ್ಯ
ಮಾನವೀಯ ಅನುಕಂಪ ಭ್ರಾತೃಭಾವದಿಂದೆ
ದೇಶವಾವೇಶದೊಳ್ ವಿಜೃಂಭಿಸಿ ಮೆರೆದಿರೆ
ಸತೀಮಣಿಯ ಹೃನ್ಮನಗಳ್ ನಿತ್ಯ ಮಂಗಲಂ.

ಗಾಂಧೀಜಿಯುಂ ಅನುದಿನಗೈವ ಸಾಮಾಜಿಕ
ಸೇವೆಯಲಿ ಕಳೆದು ಹೋದುವೆನಿತೊ ದಿನಮಾನಂ
ಕೈಗೆಟುಕದ ನಾಳ್ಕೆಯಲಿ. ಬಳಿಕಂ ಗಾಂಧೀಜಿ
ಜೋಹಾನ್ಸಬರ್ಗ್ ನಗರಿಯಲ್ಲಿ ಪ್ರಪ್ರಥಮ

→

ಬ್ಯಾರಿಸ್ಟರ್ ವೃತ್ತಿಯುಂ ಕೈಕೊಂಡರ್ ತಾವಾಗಿ.
ವೃತ್ತಿಗಡಲಿನ ಪೆರ್ದೆರೆಯ ಸ್ಪರ್ಧೆಯೊಳ್ ಮಿಂಚಿ
ಮೇಲೇರುತಿರೆ ಭಾಗ್ಯಲಕ್ಷ್ಮಿಯುಂ ನಲಿದೊಲಿದು
ಅತಿ ತೋಷದಿಂದೈತಂದಳ್ ಮನೆಬೆಳಗೆ. ಪರಮ
ಪ್ರೇಮಮಯಿ ಕಸ್ತೂರಿ ಬಾರವರ ಹೃದ್ಗಡಲು
ತುಂಬಿ ಆನಂದಾಮೃತವಾಹಿನಿಯುಕ್ಕಿ
ಹರಿದುದು ರಸಧಾರೆಯೈಸಿ. ಆದರದು ತಮ್ಮ
ಭಾರತೀಯ ಸಂಪ್ರದಾಯದ ಚೌಕಟ್ಟಿನಲಿ
ಮುಳುಗಿರುತಿರೆ ಗಾಂಧೀಜಿ ಗುರುವಾದರು ಮತ್ತೆ
ಸತಿಸುತರಿಗೆ. ನಾಗರಿಕ ವೇಶಭೂಷಣಂಗಳ್
ಜೃಂಭಿಸಿದುವು. ಭವ್ಯ ಭವನದಲಿರುತೆ ಬರಿಗಾಲ್
ವಿಲಕ್ಷಣಮೆನೆ ಬೂಟು-ಕಾಲುಚೀಲಂಗಳೈದುವು.
ಮಿನ್ನೆ ತಾವೆಂದು ಬೂಟು ತೊಟ್ಟು ಅನುಭವವಿರದೆ
ಭಂಗಪಟ್ಟರ್ ಮಡದಿ· ಬೂಟೊತ್ತಿ ನೋವುಂಡು
ನರಳಿದೊಡಮದಂ ಮಾನಿಸರ್ ಗಾಂಧೀಜಿ. ಕೆಲ
ದಿನವಿಂತು ಭಂಗಮಿಹುದು ಬಳಿಕೆಲ್ಲಂ ಇಂತೆ
ಸರಿಯಪ್ಪುದು ಎಂಬರ್ ಉದಾಸೀನದಿಂದಲಿ.
ಮಡದಿ ಕಸ್ತೂರಿ ಬಾ ಮಜಲು ಮಜಲುಗಳಲ್ಲಿ
ಪತಿವರ್ಯನ ಅನನ್ಯ ಸಾಂಗತ್ಯದೊಳ್ ಪಡೆದ
ದಿವ್ಯಾನುಭವದ ರಸಜ್ಞತೆಯಲಿ ಮುಳುಗೆದ್ದು
ಪುಟವಿಟ್ಟ ಅಪರಂಜಿ ತಾನಾದರ್. ದಿನದಿನ
ಸ್ವಾನುಭವ ಹೆಪ್ಪಿಟ್ಟ ಹಾಲಿನೊಲ್ ಘನಿಸಿರಲ್
ನವಬಾಳಿನ ನವೋದಯದಿಂದಲಿ ಪ್ರಭಾತ
ಕಾವ್ಯವಾಹಿನಿ ಹರಿದುದು ಜಳಜಳಿಸಿ. ಸುಂದರ

→

ಬಾಳು ತೊಳಗಿ ಬೆಳಗಿ ಘನತರವಾಯ್ತು ; ಭಾರತ
ಸಾಮ್ರಾಜ್ಯದ ಬಿಡುಗಡೆಯ ಮಹೋನ್ನತ ಉದ್ಯಮ
ಕ್ಷೇತ್ರಕೊಂದು ಅಡಿಗಲ್ಲನಿಡುವ ಸುಯೋಜನೆಯಲಿ.
ಕಸ್ತೂರಿ ಬಾ ಸಿರಿತನದಲಿ ಸಿರಿಲಕ್ಷ್ಮಿಯೆನಿಸಿ
ಬಡತನದಲಿ ದರಿದ್ರ ಲಕ್ಷ್ಮಿಯೆನಿಸಿ ತಾನೆಂದು
ಕುಂದಿಲ್ಲದ ಕಸ್ತೂರಿ ಮಲ್ಲಿಗೆಯ ತೆರದಲಿ
ಅರಳಿ ಘಮಘಮಿಸಿದ ಅನುಪಮ ತೇಜೋವತಿಯೆ
ತಾನಾದರ್ ಕಿಂಚಿತ್ ಕುಂದಿಲ್ಲದಂತೆವೊಲ್ !

ತರುವಾಯಿ, ಕಾಲಕ್ರಮದೊಳ್ ಗಾಂಧೀಜಿಯುಂ
ಪರಿಸರದ ದೀನ ಜನರ ಬವಣೆಯಲಿ ತಮ್ಮ ಕಣ್
ದೃಷ್ಟಿಯಂ ಹರಿಸಿದರ್. ಕಾಲಾನುಕಾಲದಿಂ
ಆಫ್ರಿಕೆಯಲಿ ನೆಲೆನಿಂತ ಭಾರತೀಯರೆಲ್ಲರ್
ಪ್ರಜೆಗಳ ನಿಜ ಹಕ್ಕು ಬಾಧ್ಯತೆಗಳಿಂ ಪೂರ್ಣ
ವಂಚಿತರಿರೆ ಬರ್ದುಕು ಭಾರ. ಬಡತನದ ಬೆಂಕೆ
ಕಠಿಣಾತಿಕಠಿಣಂ. ಗೆಯ್ಮೆಯಿರುತಿರ್ದು ಗೆಲ್ಮೆಯು
ದಕ್ಕದೆ ಗತಿಗೆಟ್ಟ ಜನರಾಶಿಯ ಕರುಣಾಯಿತ
ಚಿತ್ತಾರ. ದಿನದಿನಂ ಭಂಗ ಬನ್ನಗಳ ಗೋಳು
ಮನತುಂಬಿ ದುಃಖ ಸಂಕಟಂ ಪೊತ್ತು ಸಾಲ್ಗೆಸಿ
ಬರ್ಪ ಜನರ ಕಂಬನಿಯಂ ತೊಡೆಯದೆಂತು ಜೀವನ
ಪುರುಷಾರ್ಥ ? ಗಾಂಧೀಜಿ ವೃತ್ತಿಯ ಸ್ವರೂಪವದು
ಬುಡಗಳಚಿದ ಹೆಮ್ಮರದೋಲಾಯ್ತು. ಸಮಯೋಚಿತ
ಪರಿಜ್ಞಾನ ಭುಗಿಲೆದ್ದು ಧಗಧಗಿಸಿ ಕೆಂಬೆಂಕೆ
ಕಿಡಿಕಾರಿದೊಲ್ ಪ್ರಜ್ವಲಿಸೆ ತನುಮನ ಪುಟದುವು
ಸೆಂಡಿನೊಲ್ ಸಾರ್ವಜನಿಕ ಸೇವಾ ಕ್ಷೇತ್ರಕ್ಕೆ.

→

ದೀನ ಜನರ ಕರುಣ ಕತೆಗಳನರಿತು ಮನದಲಿ
ಕಾರುಣ್ಯ ದ್ರವ್ಯವದು ಕರಗಿ ಸಹಸ್ರ ಸಹಸ್ರ
ಶ್ರೋತಗಳ್ಗೈಸಿ ಹರಿದುದು ನರನಾಡಿಗಳೊಡೆದು
ಶೀಳಿಹೋವಂದದಲಿ. ಸುಡುವಿಸಿಲ್ ಮುಟ್ಟುತಿಹ
ಮುಗಿಲ್ ಮಂಜಿನೊಲಾಯ್ತು ಗಾಂಧೀಜಿಯ ಹೃದಯ.
ಬ್ಯಾರಿಸ್ಟರ್ ವೃತ್ತಿಯಂ ಬದಿಗೊತ್ತಿ ಸಾರ್ವಜನಿಕ
ಸೇವೆಯಂ ಕೈಕೊಂಡರ್ ಗಾಂಧೀಜಿ. ಆಗಳ್
ಜನಕೋಟಿಗೆ ಕಾಯಿದೆ ಕಟ್ಟಳೆಯ ಪರಿಜ್ಞಾನ,
ಸಂಜೀವನೋಚಿತ ತಂತ್ರಜ್ಞಾನ, ಬಾಳಿನ
ಬೆಳಕಿಗಾಗಿ ರಾಜಕೀಯ ಆಚಾರ ಸಂಹಿತೆ
ಇವುಗಳಂ ತಿಳಿಸಿಕೊಡೆ ಪ್ರವಚನ-ಭಾಷಣಗಳ
ಸರಮಾಲೆ ಹರಿಸಿ ಮುಗ್ಧ ಪ್ರಜಾವರ್ಗದಲಿ
ಮನಮತಿಯನರಳಿಪೊಂದು ದಿವಿನಾದ ಸುಜ್ಞಾನ
ದಾನ ಆರಂಭಿಸಿದರ್ ಗಾಂಧೀಜಿ. ಅದರಿಂ
ಬಹುಜನಂಗೂಡಿದ ಅನುಪಮ ಧ್ಯೇಯಗಳುಳ್ಳ
ಸಂಘ ಸಂಸ್ಥೆಗಳ್ ಒಡಮೂಡಿದುವು ಅಲ್ಲಲ್ಲಿ.
ಸಾರ್ವಜನಿಕ ಸೇವಾ ಮಹಾರಂಗಕೆ ತಮ್ಮನು
ತಾವೇ ಸಮರ್ಪಿಸಿದರ್ ಗಾಂಧೀಜಿ ದಂಪತಿಗಳ್.
ಸ್ವಯಿಚ್ಛೆಯಿಂ, ಆತ್ಮಪ್ರೇರಣೆಯಿಂ, ದೀನಜನ
ಪ್ರೇಮದಿಂ ದಯೆ ಕರುಣೆಗಳ್ ಸತ್ಯದ ಕಿರಣಂ
ಅರಸಲೆಂದು ಮುಂದೈದಿರೆ ದೈವಾಯತ್ತಾಗಿ
ಸಾರ್ವಜನಿಕ ಸೊತ್ತಾದರ್ ಗಾಂಧೀಜಿ ತಮ್ಮನು
ಪಜ್ಜೆ ಪಜ್ಜೆಯಲಿ ಬೆಂಪಲಿಪ ವರ ಸತಿಯೊಡನೆ !
ಅನುಗಾಲಂ ಚಿಂತನ ಮಂಥನದಿಂ ಮೈವೆರ್ಚಿ

→

ಪ್ರಪಂಚಜ್ಞಾನ ಘನವೆತ್ತ ಮಂತ್ರಾಗ್ರಾರ
ತರ್ಕವಿತರ್ಕ ಹೂಡಿ ಸರಳ ಸುಂದರಮಾದ
ಸಂಜೀವನ ಕಲೆಯ ನೆಲೆ ಬೆಲೆಯುಂ ಅರಿತು ನಿಜ
ಕಾರ್ಯರೂಪಕಿಳಿಸಿದರ್ ಗಾಂಧೀಜಿ. ತಮ್ಮಯ
ರೀತಿ ನೀತಿಗಳನೊಪ್ಪಿ ಸೇವೆಗೈಯೆ ಪರಮ
ಆಸ್ಥೆಯಿಂ ಮುಂದ್ವೈದ ನವಯುವಕರಂ ತಮ್ಮ
ಆಶ್ರಮದೊಳ್ ನೆಲೆಗೊಳಿಸಿ ಸಕಲತರದೊಳವರ್ಗೆ
ಶಿಕ್ಷಣವಿತ್ತು ಸಾಮಾಜಿಕ ಸೇವೆಗನುಗೊಳಿಸಿ
ನವಜೀವನದಾನಗೈದರ್ ; ಮುಂದಿನ ತಮ್ಮ
ಸಾರ್ವಜನಿಕ ಸೇವಾ ಕ್ಷೇತ್ರದೊಳ್ ಧೈರ್ಯದಿಂ
ಸಾಹಸದಿಂ ಚಮತ್ಕಾರದಿಂ ಬೆಂಬಲಿಸಿ ನಿಲ್ವ
ಸಾಹಸಿಗರಂ ಕೂಡಿಸಿ. ಅನ್ನೆಬರಂ ಪರಮ
ಗುರುವರ್ಯನಂ ಕಾಣದಿರ್ದ ಯುವಜನಗೋಷ್ಠಿ
ಆತ್ಮಾನಂದದಿಂದೊಪ್ಪಿದರ್ ಗುರುದೇವನಂ.
ದಿನದಿನಂ ಪೆರ್ಚಿದುದು ಪರಿಜನರ ಗೋಷ್ಠಿಯಲಿ,
ರಾಷ್ಟ್ರೀಯ ವಿದ್ಯಮಾನದ ವಿಚಾರ ವಿಪ್ಲವದ
ಸಾರ ಸರ್ವಸ್ವಮಂ ಚರ್ವಣಚರ್ವಿತಗೊಳಿಸಿ
ಪರಿಹಾರಮಂ ಕಂಡುಕೊಳ್ಳುವಾ ಪಂಬಲಂ.
ಆ ದೇಶದ ವಿದ್ಯಮಾನಂ ಅರಿತು ಮನಗೊಳಲ್
ರಾಷ್ಟ್ರದೊಳ್ ಆದ್ಯಂತ ಪ್ರವಾಸ ಕಾರ್ಯಮಂ
ಕೈಕೊಂಡರ್ ಗಾಂಧೀಜಿ. ಬಿಳಿಯರ ದುರ್ನೀತಿ,
ದುರಾಚಾರ, ಕಾರುಣ್ಯಹೀನತೆಯ ವರ್ತನೆ,
ತಿರಸ್ಕಾರ, ವರ್ಣಭೇದ ನೀತಿ ಇವುಗಳ ಆಳ-
ನೀಳಮಂ ಅಳೆದು ಮನಂ ಮರ್ಮರ ಮರುಗಿ ಕರಗಿ

ಚಿಂತೆಗೆತ್ತುದು. ದೀನ ಪ್ರಜೆಗಳ ವರ್ಗವಂ
ಅನೀತಿ ಅನ್ಯಾಯುಗಳ ಪಿಚಂಡಿ ಹಿಡಿತದಿಂದೆ
ಬಿಡುತೆಸ್ಸೈವ ವಿಚಾರ ವಿಪ್ಲವದ ಕೆಂಬೂತ
ನರ್ತಿಸತೊಡಗಿದುದು ತಲೆಯುಲಿ. ಗಾಂಧೀಜಿಯುಂ
ನಿಶ್ಚಲ ಮನದಿಂದೆ ಕಾರ್ಯ ಪ್ರವೃತ್ತರಾದರ್.
ಅನ್ಯಾಯ-ಅನೀತಿಗಳ ವಿರುದ್ಧ ನಿಶ್ಚಂಚಲ
ಮನದಿಂದಲಿ ಕಾರ್ಯೋನ್ಮುಖರಪ್ಪ ಸನ್ಮಿತ್ರ
ಬಂಧುಗಳ ಒಕ್ಕೂಟವಂ ರಚಿಸಿ, ಬಹುಮುಂದಿ
ವಟುಗಳಿಗೆ ಮಾರ್ಗದರ್ಶನವ ನೀಡೆ ತಮ್ಮಯ
ಬಿಡದಿಯಲಿಯೆ ತಲನೆನೆ ಸಂಸಾರ ಭಾರವದು
ವೆರ್ಚಿದುದು ದಿನದಿನಂ. ಸತೀ ಕಸ್ತೂರಿ ಬಾ
ತನ್ನ ಕಾರ್ಯರಂಗದಲಿ ಏಕಾಂಗಿ. ಅನುದಿನ
ಬಿಡುತೆಗಾಣದ ಬದುಕು. ಬಂಧು ಬಳಗವಿಲ್ಲದ
ತಾಣ. ಮನರಂಜನೆಯುದು ಮೈಲಿಮೈಲಿ ದೂರವೆನೆ
ಪತಿಯ ಸಾನಿಧ್ಯವೊಂದೆ ಸುಖ ಸಾಧನವೆನಲ್
ಅವರುಂ ಸದಾ ಸಾರ್ವಜನಿಕರ ಪರಮ ಪಾಲು !
ಕಸ್ತೂರಿ ಬಾ ಬಳಲಿ ಸೋಲ್ದು ಸುಣ್ಣವಾಗಿಯು
ಸೋಲ್ದರಿಲ್ಲಂ. ಕಾಲಾನುಕಾಲದ ಪರಿಸ್ಥಿತಿ
ಜೀವನಸ್ತರದಗತಿಗನುಗುಣವುಪ್ಪಿದ ಬದುಕು
ಬಂಧಾನುಬಂಧದೊಳಿರಲ್ ಯಾವತ್ಕಾಲಂ
ಗೃಹಿಣೀ ಪದಕಿನಿತು ಕುಂದಿಲ್ಲ. ಕೊರವಿಲ್ಲ.

ಗಾಂಧೀಜಿ ಆರ್ಥಿಕ ಪರಿಸ್ಥಿತಿಗೆ ಹೊಂದುವೊಲ್
ಜೀವನಂ ಸರಳೀಕರಣಗೊಳಿಸೆ ವಿವಿಧತರ
ಕಡಿತದಿಂ ಸಂಯೋಜನೆಯೊಂದಂ ರೂಪಿಸಿದರ್.

→

ಭವ್ಯ ಭವನದ ವೈಭವೋಪೇತ ಜೀವನಂ
ಬದಿಗೊತ್ತಿ ಪುಟ್ಟ ಮನೆಯಂ ಹಿಡಿದು ನಿವಾಸಂ
ಬದಲಿಸಿದರ್. ಊಟೋಪಚಾರದಲಿಯುಂ ಮಿಗೆ
ಸರಳೀಕರಣಮಾಯ್ತು. ಕಸ್ತೂರಿ ಬಾ ಪತಿಯ
ಎಲ್ಲವಗೆಯ ಬದುಕಿನಲಿ ಸತತ ನೆರಂಗೂಡಿ
ಸಲಿಸುವರ್ ತಮ್ಮಯ ಅಮೂಲ್ಯತರ ಸೇವೆಯಂ.
ಪತಿಯ ಪೊಚ್ಚ ಪೊಸ ಶಾಸನಾನುಶಾಸನಗಳಂ
ಆಚರಣೆಗಳವಡಿಪುದು ಸಂಕಷ್ಟಮೆನಿಸಿಯುಂ
ಕಿನಿಸು ಮುನಿಸಿಲ್ಲದೊಪ್ಪಿ ಭಂಗದ ಬೇಗೆಯೊಳ್
ಬೆಂದು ಬೇವಾಗಿ ಕಾರ್ಯರೂಪಕೆ ಇಳಿಸುವರ್,
ಪತಿಯ ಜಾನಬಲಂ ಪರೋಪಕಾರಮಂ ತಾನೆಚ್ಚಿ.
ಅನುಗಾಲಮೆಲ್ಲಂ ಅತಿಥಿ ಅಭ್ಯಾಗತರುಗಳ್
ಪೆರ್ಚಿದರ್. ಸಾರ್ವಜನಿಕ ಸೇವೆಯೊಳ್ ನಿಂದಿರೆ
ಸಾಮಾನ್ಯಮೇ ? ದಿನದಿನಂ ಸೇವಾ ವೃತ್ತಿ
ಮುಂಬೆಳೆಯುತಿರೆ ಜೀವನ ಕುಸುಮದಳಂ ಬಿರಿದು
ಅರಳರಳಿ ಮಂದಾರಮಾಗುತಿರ್ದುದು ಗಂಧ
ಪೂರ್ಣಮಾಗಿ. ಗಾಂಧೀಜಿಯ ಕೀರ್ತಿ ಪರಿಮಳಂ
ಪರಿಸರದಲಿ ಪಸರಿಸಿದತ್ತು ಶ್ರೀಗಂಧದಿಂ
ಪೊದಳ್ವ ಪರಿಮಳದೊಲ್. ಪಿಡಿದ ಕಾರ್ಯಮೆಂದುಂ
ಬಿಡರ್ ಕೈಗೂಡುವನ್ನ. ಸಾಮವೇದವೊಂದೇ
ಹರಿತ ಆಯುಧ. ಅಮಿತ ಸಂಧಾನಗಳಿಂದಲಿ
ಕಾರ್ಯಕಾರಣಮಂ ಕೈಗೂಡಿಪರ್ ವಾಗ್ಜಾಲ
ಹರಿಸಿ. ಪರದೇಶ ಮೇಣ್ ಪರಾಡಳಿತಮೆನಲ್
ಕಠಿಣ ವ್ರತ. ಕಠಿಣ ಬದುಕು, ಕಠಿಣಾತಿಕಠಿಣಮೆ

→

ಎಲ್ಲ. ಸುಖದುಃಖಗಳ್ ಒಗ್ಗೂಡಿ ಸಾಗಿದುವು,
ನಿತ್ಯದ ಬದುಕಿನಲಿ.
ಪೂರ್ವೀ ದಿಗ್ದೇಶದೊಳ್ ಮೆಲು
ಮೆಲ್ಲನೆ ಮುಂಬರುತೆ ಶ್ರೀರಮಣಿಯಂತೆಸೆವ ಉಷೆ
ವೈವಿಧ್ಯ ವರ್ಣಮುಯ ರೂಪಮಯ ಮುಗಿಲ್ಗಳ್
ಮನುಕುಲದ ಜೀವನರಸಕ್ಕಳುಪಿ ಕಿನಿಸಿನಿಂ
ಭೂವಿಹಾರಕ್ಕೈದುವೊ ಎನಿಪಂತೆ ಮಂಜುಮಯ
ಮಾದುದು ನೆಲಹೊಲ ಮನೆಗಳ್ ಮುಚ್ಚಿಹೋಹಂದದಿ.
ಬನಬನದಿ ದಟ್ಟ ತರುಗುಲ್ಮಲತೆಗಳಿಂದಲಿ
ಉದುರುತಿರ್ದುವು ಹನಿಗಳ್ ವನದೇವಿಯುಂ ನಿರುತ
ಹರ್ಷಾಶ್ರುಬಿಂದುವರ್ಷವ ಸೂಸುವೊಲ್. ಅಲ್ಲಿ
ಇಲ್ಲಿ ಎಲ್ಲೆಡೆಗಳಲಿ ಪೂವಿಂ ಪೂವಿಂಗೆ ಸಲಿ
ನಲಿದಾಡಿ ಹಾರಾಡುವ ಮಧುಪಂಗಳುಂ ಮಧು
ಮತ್ತ ಭ್ರಮರಂಗಳುಂ ಪೂವೊಡಲ ಸುಸುಂದರ
ಕರಂಡದ ಹೊಂಧೂಳಿಯೊಳ್ ಹೊರಳಿ ತೋಷದಿಂ
ಹೊಂಬೊಗರೇರಿ ಗಿಡದಿಂ ಗಿಡಕೆ ಓಡಾಡಿ
ಮಕರಂದ ಭಿಕ್ಷೆಯುಂ ಬೇಡಿ, ಕುಟಜಂಗಳಲಿ
ಝೇಂಕರಿಸಿದುವು ನಿತ್ಯ ಯಾತ್ರೆಯೋಂಕಾರಮಂ
ಹರಿಸಿ. ಇಂದ್ರದಿಜ್ನಗರಿಯಿಂದೈದ ಮಾರುತಂ
ಬೀಸಿ ವೀಸಿ ಪೂಗಂಪು ಸಿಂಪಡಿಸಿ ದಿಶೆಯಿಂ
ದಿಶೆಗೆ ಸುಯ್ಯನೆ ಸುಯ್ದು ಧಾಳಿಯಿಡುತಿರೆ ತಣ್ಣನೆ
ತನಿಯಿಂಪಿನ ತಣ್ಪನು ಚೆಲ್ಲಿ. ಗಿಡುಮರಗಳಲಿ
ಪಕ್ಷಿಗಳ್ ಎಳ್ಚತ್ತು ಎರಂಕೆಯನೊದರಿ ಇನಿ
ಗೊರಳೆತ್ತಿ ಪಾಡತೊಡಗಿದುವು ಉದಯರಾಗಂ.

→

ಶೌಚಾಲಯಗಳಿಲ್ಲದ ಊರು. ಶೌಚ ಕಾರ್ಯವದು
ಮಡದಿಯದೆ. ಪಗಲಿರುಳ್ ಗೆಯ್ದೊಡಂ ಮುಗಿಸುದಾ
ಕಾಯಕದ ಹಗರಣ. ಸುಕೋಮಲತನು ಕಾಯಂ
ಬಳಲುತಿರ್ದುದು ಅನುದಿನಂ ಅತೀ ಶ್ರಮಿಪುವ
ಕರ್ಮಯೋಗದಿಂ. ದಿನನಿತ್ಯಂ ಧರ್ಮಶಾಲೆಯ
ಮಾಳ್ಕೆಯಲಿ ನಡೆಯುತಿರೆ ದಣಿದೊಡಂ ಚೆಲ್ವಾಯ್ತು
ಆಶ್ರಮ ಸದೃಶ ಬದುಕು. ಎದೆಗಡಲ ಪ್ರಫುಲ್ಲ
ತಾವರೆಯು ಹಿಗ್ಗಿ ಅರಳಿ ನಲಿಯುವ ಪಾಂಗಿನಲಿ,
ಸಾಮಾಜಿಕ ಶೌಚದ ಮಹಾಸಂಗವಂ ನಿತ್ಯ
ರಮ್ಯಾರುಣಜ್ಯೋತಿಯನುರಿಸುವಂತೆ ಗೆಯ್ವುದೇ
ಚಾರುಧೀರಮತಿಯ ಗುರಿಯಿರೆ ಸೋಲನರಿಯದು
ಪುನೀತ ಪರಿಪುಣ್ಯ ಜೀವ. ಗಾಂಧೀಜಿಯ ಪಾತ್ರ
ಎಂತಂತು ಕಸ್ತೂರಿ ಬಾರವರ ಪಾತ್ರವುಂ
ಅಂತಂತೆಯೇ ಲೋಕಪ್ರಿಯಂ. ಪ್ರಕೃತಿಯ
ಪ್ರತೀಕದಂತೆ, ವನದೇವಿಯ ಕುವರಿಯಂತೆ
ಶಾಂತಮೂರ್ತಿಯ್ಯೆಂದ ಪರಮಮಾನಿನಿ. ಅಮಿತ
ಪುಣ್ಯವತಿ ಕಸ್ತೂರಿ ಬಾ. ಬಂಧು ಬಳಗವದು
ಇಲ್ಲದೂರಿನಲಿ ಸಾಮಾಜಿಕರೆ ದಿನನಿಚ್ಚ
ಜೀವ–ಬಂಧುಂ–ವಲಯಂ ಸತೀಮಣಿಗೆ. ಅನುಪಮ
ತ್ಯಾಗಮಯ ಜೀವನದ ಸರ್ವಾಧಿಕಾರಿಣಿಯೆ
ತಾನಾಗುವ ಪ್ರಥಮ ಪಾಠಮಂ ಕಲಿತರಲ್ಲಿ
ಕಸ್ತೂರಿ ಬಾ ದೈವಾಯತ್ತಾಗಿ. ಗಾಂಧೀಜಿ
ಸತ್ಯ-ಧರ್ಮ-ಶಾಂತಿ-ಶಿಸ್ತುಗಳ ಸಾರಸರ್ವಸ್ವಂ
ಮನಗೊಂಡುದಲ್ಲಿಯೆ ! ಬ್ರಿಟಿಷ್ ಪ್ರಭುತ್ವದ

→

ಮುಂತೆ ಸತ್ಯಾಗ್ರಹದ ಡಂಗೂರವಂ ಬಾರಿಸಿ
ಮದ್ದು-ಗುಂಡು-ಮಸಿಗಳನೆದುರಿಸುವ ಧೀಮಂತ
ಧೀರತನದ ಪ್ರಪ್ರಥಮ ಪಾಠವಂ ಪಡೆದು
ಮನದುಂಬಿಡುದಲ್ಲಿಯೆ ! ಸಾರ್ವಜನಿಕ ಜೀವನದ
ಭವ್ಯ ಗಾದಿಯನೇರಿ 'ಮಹಾತ್ಮ' ರೆಂಬ ಬಿರುದು
ಪಡೆದುದು ಆಫ್ರಿಕಾ ದೇಶೀಯ ಪರಿಪುಣ್ಯ
ಭೂಮಿಯಲಿಯೆ ! ಮಹೋನ್ನತ ಆದರ್ಶ ಜೀವನದ
ಸಂಯೋಜನೆಗೆ ಅನನ್ಯ ಅನುಭವ ರಸಾನ್ನಂ
ಪಡೆದು ಶಕ್ರದಿಕ್ಚಕ್ರಾಭಿಮುಖವಾಗಿ ದಿಟ್ಟ
ಹೆಜ್ಜೆಯಿಟ್ಟುದಲ್ಲಿಂದಲೆ ! ಅಂದಿಂದಿಗುಂ
ಆಫ್ರಿಕಾ ದೇಶದೊಳ್ ನಡೆದಿರ್ದ ಘೋರತರ
ವರ್ಣಭೇದ ನೀತಿಯ ವಿರುದ್ಧಂ ಹೋರಾಡಿ
ನ್ಯಾಯನೀತಿ, ಕಾಯಿದೆ ಕಟ್ಟಲೆಗಳ ನೆರವಿಂ
ಸತ್ಯ–ಧರ್ಮ–ಪ್ರೇಮಗಳ ಅನುಬಂಧದಿಂ ತಾಂ
ಸಾರ್ವಜನಿಕ ಸೇವಾ ಕಾತರತೆಯಲಿ ಮುಳುಗಿ
ದಿವ್ಯಾನುಭವರಸವುಂಡು ಜೀರ್ಣಿಸಿದುದಲ್ಲಿಯೆ !

ಅಂತಿಂತು ಆಫ್ರಿಕಾ ದೇಶೀಯ ಕುಕರ್ಮದ
ಮಹಾಕಾಂಡದಲಿ ತೊಳಲಿ ದುರ್ದಮನೀಯಮಾದ
ರಂಗದಲಿ ಹೋರಾಡಿ ಸೋತು ಗೆಲ್ದ ಬಳಿಕಂ
ಗಾಂಧೀಜಿ ದಂಪತಿಗಳಂ ಶ್ರೀಗಂಧದ ಗುಡಿಯ
ಗೋಪುರದೊಳ್ ರೂಪಿಸಿದತ್ತು ದೂರ ಆಫ್ರಿಕಾ
ದೇಶಂ ! ಮೇಣ್ ಭಾರತೀಯರ ಕೀರ್ತಿಯೈಸಿರಿಯಂ
ಗಿರಿಶಿಖರಕೆತ್ತುವೊಲ್ ಅಮೃತ ಬಿಂದುಗಳ
ಸರಮಾಲೆ ತೊಡಿಸಿದತ್ತು, ಒರ್ಮೆಗೆ ಪ್ರಸಿದ್ಧಿ

→

ಕಿರೀಟವ ತೊಡಿಸಿ ಲೋಕವ ಬೆಳಕಿಗಿಡುವಂತೆ !
ದಿನದಿನಂ ಗಾಂಧೀಜಿಯು ದಿವ್ಯಾನುಭವ ಘನಿಸಿ
ಜೀವನಾದರ್ಶಂ ಮಲೆತು ಬಲಿತು ಸಿರಿ ಸೊಬಗು
ಏರುತಿರ್ದುದು ಮುಗಿಲ್ ಮುಟ್ಟುವೊಲ್. ಬಾಳಿನೊಳ್
ಪಜ್ಜೆ ಪಜ್ಜೆಯಲಿ ಸರಳೀಕರಣ ಪೆರ್ಚಿದುದು
ಸೇವಾ ಪರಾಯಣತೆಗೆ ತಗುವಂತೆ ಮತ್ತಂ
ಅಂತರ್ಯದ ಸದ್ಭಾವನಾ ತರಂಗಗಳಲಿ
ಚೆಲ್ವರಳುವಂತೆ ಪಸದನಗೈವುದು ನೋಳ್ಪರ್
ಅಚ್ಚರಿಗೊಳುವ ತೆರದಿ. ನಗರವಲಯದ ಅತೀ
ಸದ್ದು ಗದ್ದಲಗಳ ಕಿರಿಕಿರಿ ಕಿನಿಸಿಗೆಗಳುಂ
ಕೂರ್ಮುಳ್ಳಿನೊಲ್ ಚುಚ್ಚುತಲಿರುತಿರೆ ನಗರದಿಂ
ದೂರ ವಾಸಿಪ ಇಚ್ಛೆಯುಂ ಮೂಡಿದುದು ಮನದಿ.
ಒಡನೊಡನೆ ತಮ್ಮ ಶಿಷ್ಯಗಣಂಗೂಡಿ ನಗರದಿಂ
ನಸುದೂರದ ನಲ್ದಾಣವನಾಯ್ದು ಮನವೊಪ್ಪಿ
ಸಮತಟ್ಟಿನ ದಾಣದಲಿ ನಿರ್ಮಿಸಿದರ್ ರಮ್ಯ
ಪಟ ಹರ್ಮ್ಯಮಂ ಸರಳ ಸುಲಭತರ ಶೈಲಿಯಲಿ.
ಶ್ರದ್ಧೆ ಪ್ರೀತಿ ವಿಶ್ವಾಸಗಳ ಒಕ್ಕೂಟದಿಂ
ಹಾಲ್ಜೇನಿನ ರಸವೇ ಘನಿಸಿದೊಲ್ ಮೂಡಿಪುದು
ಪರ್ಣಕುಟಿ ನೋಳ್ಪ ಕಣ್ ಬೆಕ್ಕಸಂಬಡುವಂತೆ.
"ಫೀನಿಕ್ಸ್ ಸೆಟಲ್‌ಮೆಂಟ್" ಎಂಬ ಪೆಸರನಿತ್ತು
ಉದ್ಘಾಟಿಸಿದರ್ ಗಾಂಧೀಜಿ ಅಭಿಮಾನಿಗಳ
ಸಮ್ಮುಖದೊಳ್. ಅಃ, ವೇದಕಾಲೀನ ಮಹರ್ಷಿ
ಮಹೋದಯರಾಶ್ರಮದ ರೀತಿಯಲಿ ಚೆಲುವಾಯ್ತು.
ಗಾಂಧೀಜಿ ದಂಪತಿಗಳ ಆದರ್ಶಮಯ ನವ

→

ಜೀವನದ ಬಾಳ್ ಬನವು ಸರಳ ಬಂಧುರವಾಯ್ತು,
ದೀನಜನ ಬಂಧುಗಳ ಸೇವೆಗನುಗುಣವುಪ್ಪಿ.
ಸುಖ ಶಾಂತಿ ಸಮುದಯದಲಿ ತಣ್ಣನೆ ತಂಪುಗುವ
ಮಂದ ಮಾರುತನ ಚಾಮರ ಸೇವೆಯುದು ನಿತ್ಯ
ಬಂಧಾನುಬಂಧದಿಂ ನಡೆಯುತಿರೆ ತನುಮನಂ
ಪುಳಕಗೊಳ್ವನಿತು ರಾಗಾರುಣತಾನಂ ಮಧುರ
ಮೋಹನಂ. ಗಿಡುಮರಗಳಲಿ ವಿವಿಧ ಪಕ್ಷಿಗಳ್
ಸ್ವರಾನುಸ್ವರದಲಿ ಸುಪ್ರಭಾತಮಂ ಹಾಡಿ
ಪಾಡಿ ಮೋದದಿಂ ನಲಿವುವು ಸ್ರೋತೃಗಳ ಮನಕೆ
ಮುದವೂಡಿ. ಪಚ್ಚ ಪುಸುರ್ವೊತ್ತ ಗಿಡುಮರಗಳ
ಪಲ್ಲವ ಪಾಣಿಯಲಿ ಅರೆವಿರಿದ ಸುಗಂಧಮಯ
ಪುಷ್ಪಗಳ ಪರಿಷತ್ತು ಮನೋಜ್ಞಂ. ಸರ್ವತ್ರ
ಮನೋಹರಂ.

ಗಾಂಧೀಜಿಯ ಆಶ್ರಮದಲಿ ನಿತ್ಯ
ನೀತಿ ನಿಯಮಂಗಳ್ ಅಮಿತ ಕಟ್ಟು ಕಟ್ಟಳೆಯ
ರೀತಿಯೊಳ್ ನಿರೂಪಿತವಾದತ್ತು. ಒಳಹೊರಗೆ
ಬಗೆಬಗೆಯ ಧರ್ಮಿಯರ್ ಒಡಗೂಡಿ ಬಾಳ್ದಿರೆ
ಸರ್ವಾಂಗ ಮುಗುಳರಳಿ ಮಲರಾಯ್ತು ; ಗಾಂಧೀಜಿ
ದಂಪತಿಗಳ ವಿಶ್ವಾತ್ಮಕವಾದ ಸಂಸಾರ.
ವಿಶ್ವಧರ್ಮದಿಂ ಕೂಡಿದ ಬಾಳ್ ನೋಳ್ಪರ್ಕಣ್
ಬೆಕ್ಕಸ ಬೆರಗುಗೊಳಿಸಿದತ್ತು. ಯಾವತ್ಕಾಲಂ
ಅರಿಪರಿಮಿತ ಸಂಗ್ರಹ, ಅಧಿಕತರ ಪರಿಗ್ರಹ, ನಿಜ
ದ್ರವ್ಯದಾಹ, ಜಿಹ್ವಾ ಚಾಪಲ್ಯ, ಅಸ್ಪೃಶ್ಯತೆ,
ಪಾಲುಮಾರಿಕೆಗಳುಂ ವರ್ಜ್ಯ. ಧರ್ಮಕರ್ಮ

→

ಶಾಂತಿ ಶಿಸ್ತು ನ್ಯಾಯಗಳಲಿ ನಿಷ್ಠೆಯಿರ್ಕೆ
ಹಿಡಿದರ್ ಪರಮ ಪಥವ ಸಂಜೀವನ ಯೋಗಕ್ಕೆ.
ಬ್ಯಾರಿಸ್ಟರ್ ವೃತ್ತಿಯಂ ತೊರೆದು ಆಶ್ರಮಿಸಾಯ
ಜೀವನಂ ಕೈಕೊಂಡರ್ ದೀನ ದಲಿತ ಜನರ
ಸೇವೆಯಂ ಏಗಳುಂ ಹೃತ್‌ಪೂರ್ವಕವಾಗಿ
ಸಲಿಸೆ. ಆತ್ಮ ಪ್ರದೀಪದ ದಿವ್ಯ ಕುಡಿಗೆ ನಿತ್ಯ
ಅಮರ ಜ್ಯೋತಿಯ ತೈಲವೆರೆದರ್ ಕುಡಿಕಟ್ಟದ
ಮಾಳ್ಕೆಯಲಿ ಉರಿಯೆ. ಕಾರ್ಯಕಾರಣಂ ಬಲಿಯುತಿರೆ
ಎಂದಿಗುಂ ಮುಗಿಯದ ಕಾರ್ಯಕಲಾಪಂಗಳ
ವಾಹಿಯಲಿ ಮುಳುಗಿ ಕೊಚ್ಚಿಹೋದರ್ ಗಾಂಧೀಜಿ.
ಕಗ್ಗತ್ತಲೆಯ ರಾತ್ರಿ ನಕ್ಷತ್ರಮಾಲೆಯಿಂ ನೆರೆ
ಮಿರುಗುವಂತೆ, ಶರದುದಯ ರವಿ ರುಕ್ಮ ರುಚಿಯಿಂ
ಶತಪತ್ರದಗ್ರಭಾಗದ ಬಿಂದು ಹೊಳೆವಂತೆ,
ಮೇಣುಷೆಯ ದಿವ್ಯಾಂಬರದಲಿ 'ಬೆಳ್ಳಿ' ತಾ ನೊಂದೆ
ವಿರಾಜಿಸುವಂತೆ ಗಾಂಧೀಜಿ ರಂಜಿಸಿದರಾ
ಜನಕೋಟಿಯಲಿ ತಾನೊಂದು ಮಿನುಗು ತಾರೆಯೆನೆ
ಜಗದಕಣ್ಗೆ. ಅರ್ಧಾಂಗಿ ಕಸ್ತೂರಿ ಬಾ ನಿಜ
ಭಾರತಪುತ್ರಿಯೆನೆ ಹಣೆಯಲಿ ಚಂದ್ರ ಕುಂಕುಮ
ಬಿಂಬವಿಟ್ಟು ಬೈತಲೆಯಲ್ಲಿ ಸಿಂಧೂರವಿಟ್ಟು
ತಲೆಯಮೇಲೆ ಬೆಳ್ಳನೆ ಬಿಳಿಯ ವಾಸಂತೀ
ಉತ್ತರೀಯವನು ಹೊದ್ದು ನಿಜ ಸ್ಫೂರ್ತಿಯಲಿ ತಾಂ
ರಂಜಿಸಿದರ್ ಶ್ವೇತ ವರ್ಣೀಯ ಹಂಸೆಯು ತೆರದಿ !

ಶೌಚಾಲಯಮಿಲ್ಲದಿರೆ, ಶೌಚಕಾಗಿ ಶೌಚದ
ಪಾತ್ರೆಯೇ ಗತಿ. ಆಶ್ರಮಿಗಳ್ ತಂತಮ್ಮ

→

ಶೌಚವಂ ದೂರ ಒಯ್ದು ಶುದ್ಧೀಕರಿಪುದೇ
ನಿಯಮಕೆ ಪಥಂ. ಆಶ್ರಮವಾಸಕ್ಕೈದಿರ್ದ
ನವೋನವ ಹರಿಜನ ಕ್ರೈಸ್ತ ಬಂಧುವೊರ್ವನದಂ
ಅರಿತುಕೊಳದೆ ಅಚಾತುರ್ಯದಿಂ ಅವಜ್ಞೆಯಿಂ
ಪಾತ್ರೆಯನಲಿಯೆ ಉಳಿಸಿರೆ ಆಶ್ರಮದೊಡತಿಗದು
ಉಳಿಪತ್ತು ಶುದ್ಧೀಕರಣಕಾರ್ಯಕೆ. ಸತೀಮಣಿ
ಇದುಂ ಹರಿಜನ ಕ್ರೈಸ್ತನದೆಂದಂತು ತಾವುಂ
ಶುದ್ಧೀಕರಿಸೆ ಹೇಸಿದರ್ ಮನದಿ. ಆದೊಡೇಂ
ತಾವದಂ ನಿರ್ವಹಿಸದೆ ಬಿಡೆ ಗಾಂಧೀಜಿಯೇ
ಮುಂದೈದುವರ್ ಶುದ್ಧೀಕರಿಸಲೆಂಬುದು ದಿಟಂ.
ಉಭಯ ಸಂಕಟದಲಿ ನಲುಗಿದ ಕಸ್ತೂರಿ ಬಾ
ಶೌಚ ಪಾತ್ರೆಯಂ ಸಂಕಷ್ಟದಿಂ ಪೇಸಿಗೆಯಿಂ
ಅಸಹ್ಯಿಸಿ ಮುಖ ಕೆಂಪಾಗಿ ಕಣ್ಣು ಹನಿಯೂಡಿ
ಕೈಕೊಂಡು ಅಟ್ಟಣೆಯ ಮೆಟ್ಟಿಲಿಂದಿಳಿಯುತಿರೆ
ಎದುರಾದರ್ ಗಾಂಧೀಜಿ. ಮಡದಿಯ ಕಂಗಳಲಿ
ಫಳಫಳನೆ ಮಿನುಗುವಶ್ರುಜಲವಂ ಕಾಣುತ್ತೆ
ಅಚ್ಚರಿಯ ಕುಂಡದಲಿ ಮುಳುಗೆದ್ದರ್. ಕಸ್ತೂರಿ
ಬಾಪವರ ಮುಖಮುದ್ರೆಯಲಿ ಅತೀ ಅಸಹನೆಯ
ವಿಶೇಷವುಗುತಿರ್ದುದು ತಮ್ಮ ಮನಂಗೆಡಿಸಿಪುದು.
ಆಗಳ್ತೆ ಮಡದಿಗೆಂದರ್ ಗಾಂಧೀಜಿ "ಏನಿದು,
ನೀನಿಂತು ದುಃಖ ದುಮ್ಮಾನದಿಂ ಮಾಳ್ಪುದಂ
ಆಂ ಸಹಿಸಲಾರೆ!" ಉಚ್ಚ ದನಿಯಲಿ ಹೊರಬಿತ್ತು
ಗರ್ಜನೆ.

ಮನದ ಸಹನೆ ಕಟ್ಟೆಯುಂ ಒಡೆದಂತೆ

→

ನುಡಿದರ್ ಮಡದಿ 'ಅಂತಿಪ್ಪೊಡೆ ಕಳಿಪಿರೆನ್ನನುಂ
ಊರಿಂಗೆ, ನಿಮ್ಮ ಮನೆ ನಿಮಗಿರಲಿ !' ಅನುತಾಪ
ದುಃಖಗಳ ಗೋಳಿನಿಂ ಸ್ಫುರಿಸಿತು ಗದ್ಗದಿತ
ದನಿ. ಗಾಂಧೀಜಿಯುಂ ಕೋಪದ ಕಿಡಿ ಕಾರುತ್ತೆ
"ಹೆಣ್ಣಿಗೇಕಿಷ್ಟು ದುಷ್ಟ ದುರಹಂಕಾರ !" ಎನುತೆ
ದರದರನೆ ಪೊರಗೆಳೆತಂದರ್ ಬೀದಿ ಬಾಗಿಲಿಗೆ.
ಸತೀಮಣಿ ಕಂಗೆಟ್ಟು ಆತ್ಮಗ್ಲಾನಿಯಿಂ ಬಿಕ್ಕಿ
ಬಿಕ್ಕಳುತೆ ರೋಷ ದೈನ್ಯಗಳ ಗಣಿ ತಾನಾಗಿ
"ನಿಮಗೇಂ ಲಜ್ಜೆಯಿಲ್ಲವೆ ಪೋಗಂದೊಡೆಲ್ಲಿಗೆ
ಪೋದಪೆಂ ? ಇಲ್ಲಾರಿಹರೆನಗೆ ? ನಿಮ್ಮೊಡಾನು
ಬಂದುದು ಅವಮಾನ ಪಡಲೇಂ ? ಜನ ನೋಡಿದರೇಂ
ಗತಿ ? ದಾರಿ ಬಿಡಿ. ಒಳಗುಯ್ದು ಮಾನ ಉಳಿಸಿಕೊಳುವೆ."
ಆಗಳ್ ಗಾಂಧೀಜಿಯುಂ ನಾಣ್ಚಿ ಬಾಗಿಲ್ ಮುಚ್ಚಿ
ಒಳಗೈದರ್. ಅಂತೊಂದು ಘನ ಪ್ರಕರಣಮಂ
ವಿಶ್ಲೇಷಿಸಿ ತಮ್ಮಾತ್ಮಕತೆಯಲಿ ಉಲ್ಲೇಖಿಸುತೆ
"ಕಸ್ತೂರಿ ಬಾ ಎಂತು ಎನ್ನನುಳಿದಿರಲಾರಳೊ
ಅಂತಂತು ಆಂ ಅವಳನುಳಿದು ಇರಲಾರದಿದ್ದೆ"
ಎಂದಿಹರ್ ಗಾಂಧೀಜಿ ಪ್ರೇಮಾನುರಾಗದಿಂ.

ಅನುದಿನಂ ಪತಿಯ ಆದರ್ಶ ಜೀವನಕೆ ತಾಂ
ಪಕ್ಕಾಗಿ ಭಂಗ ಬನ್ನಗಳ ದಿವಿನಾದ ಕಹಿ
ರಸಮುಂಡು ವೈಮನಂ ಹಣ್ಣಾಗಿ ಮುದುಡಿಯುಂ
ಕಸ್ತೂರಿ ಬಾ ಸೇವೆಯಲಿ ನುರಿತು ಅರಿತು ಮಿಗೆ
ಧೀರ ಸತಿಯೆನೆ ಜಗಜ್ಜಾಹೀರಾಗಿ ಜೃಂಭಿಸಿ
ಜನಮನದಿ ರಂಜಿಸಿದರ್ ಪತಿಗಿಂ ಮಿಗಿಲಾಗಿ !

→

ಗಾಂಧೀಜಿಯು "ಟಾಲ್‌ಸ್ಟಾಯ್ ಫಾರಂ" ಎಂಬಾಶ್ರಮ
ಜೇರೊಂಪಡೆಡೆಯುಲಿ. ಎರಡುಂ ಧ್ಯೇಯೋದ್ದೇಶಗಳ್
ಒಂದೇ ವಿಧಿಯಾಗಿರೆ, ಅಲ್ಲಿಂದಿಲ್ಲಿಗೆ ನಿಚ್ಚ
ಓಡಾಟ ಮೇಣ್ ಆಶ್ರಮದ್ವಯಂಗಳಲಿಯುಂ
ನಿರ್ವಹಣೆಯು ಕಾರ್ಯಗತಿ ಮೇಣಾಂ ಸಮಾಜದ
ಸೇವೆಯುಂ ರಾಜ್ಯವ್ಯಾಪ್ತಿಯಾಗಿ ಹರಡುತಿತ್ತು
ಬೆನ್ನಹುರಿಯುಂ ಜಗ್ಗಿ ಮುರಿವ ತೆರದಿ, ನಿತ್ಯದ
ಬದುಕಿಗತಿಜಂಜಡವ್ನೈಸಿ. ಆದೊಡದರಿಂದೆ
ಪಡೆದ ಅನುಭವಾಮೃತ ಪೂರಕವಾಯ್ತು ಭಾರತ
ಸಾಮ್ರಾಜ್ಯದ ಮಹಾ ಸ್ವಾತಂತ್ರ್ಯ ಸಂಗ್ರಾಮಕ್ಕೆ.
ಸತ್ಯ-ಶಾಂತಿ-ಶಿಸ್ತುಗಳ ಪೂಮಾಲೆ ಧರಿಸಿ ಮಿಗೆ
ಸ್ವಾತಂತ್ರ್ಯ ಸಂಗ್ರಾಮಕೆ ಬೆಂಬಲಿಸುವ ಪುಣ್ಯ
ಘನವಾಯ್ತು. ಲೋಕ ಮೆಚ್ಚಿಗೆಗಳಿಪ ವರವಾಯ್ತು.

ಏತನ್ಮಧ್ಯೆ, ಅಚ್ಚರಿ ಸೂಸುತಿಹ ತೀರ್ಪೊಂದು
ಹೊರ ಬಿಳ್ದುದು ರಾಜ್ಯ ನ್ಯಾಯಾಲಯದಿಂ ಮಿಡು
ಹೃನ್ಮನಂ ಇರಿಯುವಂತೆ! ಪೊಚ್ಚ ಪೊಸ ತೀರ್ಪದು
ದೇಶೀಯರಲ್ಲದ ಜನ ಸಮುದಾಯಕೆ ಇರಿಯುವ
ತ್ರಿಶೂಲವಾಯ್ತು. ಕೊರಳ್ಗಿತ್ತ ಉರುಳಾಯ್ತು.
ಗಾಂಧೀಜಿಯುಂ ಕೇಳ್ದುದಂ ದಿವ್ಯ ಅಚ್ಚರಿಯ
ಕುಂಡದಲಿ ಮುಳುಗೆದ್ದು ಮಡದಿಗೆಂದರ್ ವದನ
ಮಂಡಲದಲಿ ತುಂಟನಗೆಯುಂ ಅರಳಿಸಿ "ಶುಭೇ!
ಭಾರತೀಯ ಸತ್ ಸಂಪ್ರದಾಯದಲಿ ಮತ್ತಮಾ
ಧಾರಾಪೂರ್ವಕ ಮೇಣ್ ಶಾಸ್ತ್ರೋಕ್ತ ವಿಧಿಯಿಂದೆ
ಆದ ಲಗ್ನಬಂಧನದ ಸಂಸಾರಮಿಲ್ಲಿನ್ನು

→

ನಿಶಿದ್ಧ ! ವಿವಾಹವದು 'ರಿಜಿಸ್ಟರ್' ಆಗದಿರೆ
ಮದುವೆಯಲ್ಲಂ ಮೇಣ್ ಅಂತೆಸಗಿದ ಮದುವೆಯಿಂ
ದಂಪತಿಗಳೆನಿಸರೀ ಸಂಸಾರಿಗಳ್ ! ಇದುಂ
ಅನೀತಿ-ಅಸಂಗತಂ. ನ್ಯಾಯಬದ್ಧಮಲ್ಲದ
ಮದುವೆಯುಂ ಅಮಾನ್ಯಮಿರೆ ಸಹಜೀವನಂ ನೀತಿ
ಬಾಹಿರಂ ! ಇಂತು ನ್ಯಾಯಾಲಯದ ಘೋಷಣೆಯು
ಮೊಳಗು ಹೊರಬಿಳ್ದತ್ತು ಕಾಯಿದೆಯು ಕಗ್ಗವಿಯಿಂ.
ಕಸ್ತೂರಿ ಬಾ ಪತಿಯು ಮಾತಿನಲಿ ತವಮಾಪೆಯು
ಸುಧಾಪೂತಿಯುಂ ಕಂಡವಲ್ಲದೆಯೇ ವಿಷಯ
ವಿಶೇಷಮೇನಂ ಕಾಣಲಿಲ್ಲವಾ ಗಳಿಗೆಯಲಿ.

ರಾಜ್ಯದಲಿರುತಿರ್ದ ಹಿಂದೂಗಳ್ ಮುಸಲರ್
ಮತ್ತಿತರರ್ ತಂತಮ್ಮ ಸಂಪ್ರದಾಯ ನಿಷ್ಠೆಯಿಂ
ನಡೆಸಿರ್ದ ಸಂಜೀವನ ಯೋಜನೆಗೆ ತೆಕ್ಕನೆ
ಕಲ್ಲು ಒಗೆದವೊಲಾಯ್ತು. ದಾಂಪತ್ಯ ಜೀವನೀಯ
ಗೌರವಮಿಲ್ಲಮೆನೆ ಮರಣ ಸಂಕಟವದು ಪ್ರಾಪ್ತ
ವಾಯ್ತು ಮನಮತಿಗಳ್ ಕುದಿಗೊಳ್ವವೊಲ್ !

ಸಂಜೆಯು

ಹೊಂಗದಿರ ಹೊನ್ನರಾಜಿಯಿಂ ಬೆಳಗಿ ಜಿನ್ರನೆ
ಜೀರ್ಕೊಳವಿಯಲಿ ರಂಗೆರಚೆ, ರಾಗಾನುರಾಗದಿ
ಪೊಂಬಿಸಿಲ್ ಕೋಲುಕೋಲಾಗಿ ಗಿಡು ತರು ಮಧ್ಯೆ
ತೂರಿ, ವಿಪಿನ ಭಾಮೂಂಧತೆಯೊಳ್ ನೆರೆ ಮಿರುಗುತೆ
ಸೆಳೆವುದು ಕಣ್. ಕನ್ನೈಳಲ್ ಪಸಲೆಯಲಿ ಹೊನ್ನೀರ್
ಹೊಯ್ದು ಸಗ್ಗ ಸಾಮ್ರಾಜ್ಯವ ಧರೆಗಿಳಿಸಿದವೊಲ್
ರಮ್ಯಾರುಣ ಜ್ಯೋತಿಯು ಹರವು ಇಳೆಯು ಮೇಲೆ ;

→

ಮಿಸುನಿಯಂ ಹಾಲೊಳರೆದು ಲೇಪಿಸಿದ ತೆರದಲಿ
ಸುರಮ್ಯತೆಯೆ ಎಲ್ಲೆಲ್ಲು, ಸಾಯಂ ಸ್ಫೂರ್ತಿಯಂ
ಚೋದಿಸುವೊಲ್. ಖೇಚರಗಳ್ ಗೂಡುಗಳರಸುತೆ
ಸುಳಿ ಸುತ್ತಿಸುತ್ತಿ ಹಾರಾಡಿ ಧರೆಗಿಳಿದು ಗಿಡು
ಮರಗಳಂ ಆಶ್ರಯಿಸಿ ರಾಗಾರುಣತಾನದಿಂ
ಸಾಂಧ್ಯಗೀತವನುಲಿಯುತಿರೆ ವಿವಿಧ ಕಂಠಗಳಲಿ
ಮೊಳಗಿದತ್ತು ಕರ್ಣಾನಂದಕರವಾಗಿ. ದಿಶೆ
ದಿಶೆಯಿಂದ್ಯೆವ ತಂಗಾಳಿಯುಂ ಬೀಸಿ ಬೀಸುತೆ
ಪುಷ್ಪಗಂಧ ಪರಿಮಳವಂ ತರುಬಿ ತಂದು ಘಂ
ಘಂಮನೆ ಮನಸೂರೆಗೈವೊಲ್ ಸಿಂಪಡಿಸುತಿರೆ
ಗಂಧಮಯವಾಯ್ತು ಸಾಯಂ ಸೊಬಗು. ಪಡುವಣದ
ನೀಲ ಭಿತ್ತಿಯ ಮೇಲೆ ರಂಗುರಂಗಿನ ಮುಗಿಲ್
ಮೋಡಗಳ ಅಂಚಿನಲಿ ಕುದಿದೆದ್ದುದೊ ಎಂದೆನೆ
ಚೆಂಗಾಂತಿಯ ಕಿರಣಂಗಳ್ ತೂರಿ ಚೆಂದದಿಂ
ಹೊಸ ಮಿಸುನಿಯಂಚಂ ವಿರಚಿಸಿದತ್ತು ಸುಂದರ
ಶೈಲಿಯಲಿ. ಅಸ್ತಮಾನ ಶೋಭಾ ಸೌಂದರ್ಯ
ಶಾಲೀನ್ಯತೆಗಿಂಬುಗುಡುವಂತೆವೊಲ್ ಮೋಡದ
ಗುಡಿಗೋಪುರಂಗಳ್ ಮೆರೆದುವು ರವಿಯ ಸುತ್ತಲ್
ಕೆನ್ನೀಲಿಯ ಪ್ರಭಾಳಿಯಂ ವಿರಚಿಸಿ.

ಅಂದಿನ
ತಮ್ಮ ಕಾರ್ಯ ಕಲಾಪವಂ ಪೂರೈಸಿದ ಬಳಿಕ
ಒಳಗಡೆಗೈತಂದರ್ ಗಾಂಧೀಜಿ. ಮುಗುಳುನಗೆ
ಅರಳ್ದ ಮುಖಬಿಂಬದಲಿ ತರುಣರಸಾಂಗಿನಲಿ
ತುಂಟತನದ ಕಳೆಬೆಳಗಿರೆ ಅಚ್ಚರಿ ಕುಂಡಲಿ

→

ಮುಳುಗೆದ್ದರಾ ಮಡದಿ.
"ಕೇಳ್ ಶುಭೆ! ಆಗಳ್ತಿ
ಪೇಳ್ದಿನಲ್ತೆ ನ್ಯಾಯಾಲಯದ ತೀರ್ಪಂ ನಿನಗೆ?
ಅದರ ಪ್ರಕಾರ ನಾವಿನ್ನು ದಂಪತಿಗಳಲ್ಲ
ಈ ರಾಜ್ಯದಲಿ! ನಮ್ಮಯ ಸಹಜೀವನಮಿದುಂ
ನ್ಯಾಯ ಬಾಹಿರಮಕ್ಕು! ಹಾಸ್ಯಾಸ್ಪದಮಕ್ಕು!
ಅಂತುಮಲ್ಲದೆಯುಂ ಸಹ ಬಾಳ್ವೆ ನಿಷಿದ್ಧಮಕ್ಕು!"

ಪತಿಯ ಹಾಸ್ಯಭರಿತವಾಣಿಯಂ ಕೇಳ್ದ ಸತಿ
ಅಚ್ಚರಿಯ ನೋಟದಿಂ ನೋಡುತಿರೆಯಿರೆ ನಕ್ಕು
ನುಡಿದರಾ ಗಾಂಧೀಜಿ ಮತ್ತೆ, "ಶುಭೆ! ನೀನಿದಂ
ಪರಿಹಾಸ್ಯಮೆನ್ನದಿರ್."
ಏಗಳುಂ ನಿಮ್ಮೊಂದು
ಪೊಸ ರೀತಿಯ ಆವಿಷ್ಕಾರಮಿರ್ಪುದಲ್ತೇ?"

"ಇದೆನ್ನಯ ಆವಿಷ್ಕಾರಮಲ್ತು. ಇದಿಲ್ಲಿರ್ಪ
ನ್ಯಾಯಾಲಯದ ಕಟ್ಟು ಕಟ್ಟಳೆಯ ವಿಪ್ಲವಂ!
ಈ ನವ್ಯ ಕಾಯಿದೆಯ ಪ್ರಕಾರ ನೀನೆನ್ನ
ಸತಿಯಲ್ಲ. ನಾನಿನ್ನ ಪತಿಯಲ್ಲ. ಏನೆಂಬೆ?"
ಪತಿಯ ಸರಸಂ ಅರ್ಥವಾಗದಿರೆ ನೋಡಿದರ್
ಮತ್ತೆ ಬೆಪ್ಪು ಬೆರಗಾಗಿ.
"ಕೇಳ್ ಸುಭಗೆ! ಇಂದಿನ
ಸಮಾಚಾರಮಿದೆನ್ನ ಬರಿ ತಮಾಷೆಯೆನದಿರ್.
ಇಲ್ಲಿನ ಪ್ರಭುತ್ವಂ ಕಂಡುಹಿಡಿದಿಹ ಸುಸಂಗತಿ!"
ಪತಿಯ ಮುಖಬಿಂಬ ಕೆಂಪಡರಿ ರಂಗುರಂಗಾಯ್ತು.
ಅಸಹನೆ ಅಸಮಾಧಾನಗಳಿಂ ನುಡಿದರ್ "ಸರಿ, ಸರಿ. →

ಈ ಮಾತುಗಳಿಗಿನಿತಿಲ್ಲ ಅರ್ಥ !"
"ನಮ್ಮೆಲ್ಲರ
ಅಭಿಪ್ರಾಯಮಿದೇ. ಅದಂ ಪ್ರಭುತ್ವಮೊಪ್ಪದು"

"ಅದಕೇನು ಉತ್ತರಮೊ ನಿಮ್ಮ ಮನಃಕಲ್ಪದಲಿ ?
ಭಾರತೀಯರ್ ಒಪ್ಪುವರೇನಿದನ್ ಎಲ್ಲರ್
ಸಹಿಸುವರೆ ಕಣ್ಮುಚ್ಚಿ ?"
"ಸಾವದಂ ನಂನಮ್ಮ
ದೃಷ್ಟಿಕೋನದಿಂ ನೋಡಿ ಒಗ್ಗೂಡಿ ವಿಚಾರ
ವಿಮರ್ಶೆಗೈದ ಬಳಿಕ ನಿರ್ಣಯಂ. ಇದರೊಳ್
ಸಾಮೂಹಿಕ ಪ್ರಜ್ಞೆಯರಳ್ವುದೆ ಮುಖ್ಯಮೆಂಬೆಂ."

"ಅಂತೆನಲ್ ಸ್ತ್ರೀಜನಮಿದರೊಳ್ ಪಾಲ್ಗೊಂಬುದೇಂ
ಚೆನ್ನು ?"
"ಕೇಳ್, ಮಂಗಳೆ ! ವೈವಾಹಿಕ ಜೀವನಕೆ
ಬೆಲೆಯಿಲ್ಲವೆನಲ್, ಸ್ತ್ರೀಪುರುಷರೊಡಗೂಡುತ್ತೆ
ಪ್ರತಿಭಟಿಪುದೆ ಒಳಿತಲ್ತೆ ?"
ಕಸ್ತೂರಿ ಬಾ
ತನ್ನೊಳ್ ವಿಷಯಮಂ ನೆರೆ ತರ್ಕಿಸುತೆ ಚರ್ವಣ
ಚರ್ವಿತಗೊಳಿಸಿದರ್. ದಂಪತಿಗಳಲ್ಲಮೆಂದೊಡದಂ
ನಾರೀಮಣಿಯರ್ ಒಗ್ಗೂಡಿ ಒಮ್ಮನದಿಂದೆ
ಪ್ರತಿಭಟಿಪುದು ಸೂಕ್ತ. ಭಾರತೀಯ ಸ್ತ್ರೀಯರ್
ಒಗ್ಗೂಡಿದೊಡೆ ದುರ್ಗಿಯ ಬಲ ಕೈಗೂಡುವುದು
ದಿಟಂ. ಹತ್ತು ಕೈಗಳಿರದೆಲ್ಲಿಯ ಆಗ್ರಹಂ ?
ಎಲ್ಲರೊಗ್ಗಿನಿಂ ಹೋರ್ವುದೇ ಸರ್ವತ್ರ ಸದಾ
ದಿಟ್ಟ ಸಾಧನಕೆ ಸುಗಮದಾರಿ ಎನಿಸೆ ನೆಚ್ಚಿ →

ಮೆಚ್ಚಿದರ್ ಸತೀ ಕಸ್ತೂರಿ ಬಾ. ಪತಿಯೊಡಂ-
ಗೂಡುತ್ತೆ ಸ್ತ್ರೀಪುರುಷರೊಗ್ಗಿನಿಂ ಆಗ್ರಹಿಸಿ
ವಿರೋಧಿಸುವ ಸಂಯೋಜನೆಗೆ ಪುರಪುಗೊಟ್ಟರ್.

ಗಾಂಧೀಜಿ ತನ್ನೊಳ್ ತರ್ಕವಿತರ್ಕ ಹೂಡಿ ಮನ
ಮಥಿಸಿ ಅನುಯಾಯಿಗಳ ಗೋಷ್ಠಿಯಂ ನಡೆಸಿದರ್,
ಮುಂದೇನೆಂಬ ವಿಚಾರ ವಿಪ್ಲವದಿ ಮುಳುಗೇಳೆ.
ಸುವಿಚಾರ ಗೋಷ್ಠಿಯೊಳ್ ಎಲ್ಲರೊಗ್ಗಿನಲಿ ರಾಜ್ಯದ
ಪ್ರಭುತ್ವಕೆ ಪ್ರತಿಭಟನೆ ಸೂಚಿಸುವ ದಿಟ್ಟ
ನಿರ್ಣಯಂ ಪೊದಳ್ದುದು ಒಮ್ಮನದಿ. ಪ್ರಭುತ್ವದ
ನಿಷ್ಠೂರ ನ್ಯಾಯಮಂ ಬಲವಂದು ವಿರೋಧಿಸೆ
ಸುಜ್ಞಾನದ ಮೂಸೆಯಲಿ ಪೊದಳ್ದ ಅಮೂಲ್ಯತರ
ಅಪರಂಜಿಯೆನೆ ಮೂಡಿತು "ಸತ್ಯಾಗ್ರಹ" ಸತ್ಯದ
ಆಗ್ರಹ ಸ್ವರೂಪಿಯಾಗಿ. ಪ್ರಥಮ ಪ್ರಜ್ಞಾನದ
ತಾಂತ್ರಿಕ ಫಲವದು ಪ್ರಥಮತಃ ಪ್ರಯೋಗಕೆ
ಸಿದ್ಧಮಾದತ್ತು ತಂತಮ್ಮ ಹಕ್ಕುಗಳಿಗಾಗಿ.
ಸತ್ಯಾಗ್ರಹಕಿಳಿಯುವ ಮುನ್ನ ಮೊದಲಂಕಮೆನೆ
ಸಾಮೋಪಾಯದ ಪೂಜೆ ಸಲಿಸಿದರ್ ಎಲ್ಲರುಂ
ಒಗ್ಗೂಡಿ. ಕಿವುಡು ಸರಕಾರ ಕುರುಡಾಗಿರಲ್
ಯಶಸ್ಸು ಅಡವಿಪಾಲೈದು ಮನಂಗೆಡಿಸಿದತ್ತು.
ನ್ಯಾಯವಂಚಿತರ್ ನೆರೆ ಮುನಿದು ಜೀವಸಗೊಂಡು
ಸತ್ಯಾಗ್ರಹಾಸ್ತ್ರಮಂ ಕೈಕೊಂಡರ್ ಲಗುಬಗನೆ.
ರಾಜ್ಯದೆಡೆಯೆಡೆಯಿಂದ್ಯೆದುದು ಜನರ ಹಿರಿದಂಡು.
ಜನಕೋಟಿಯ ಉತ್ಸುಕದಾವೇಶಮಂ ಕಂಡು
ಕಾಣುತೆ ಜನಗಣಮನದ ನೋವು ಪಿಡಿಗಳರಿತು

→

ಸತ್ಯಾಗ್ರಹದ ಕಣಕಿಳಿದ ಸತ್ಯಾಗ್ರಹಿಗಳಂ
ತಿಳಿದು ತಿಳಿಯದವೊಲ್ ಅಲಕ್ಷಿಸಿತು ಸರಕಾರ.
ಹೊಡೆದು ಬಡಿದು ಹಿಂಸಿಸಿ ಜೇಲಿನ ಕಡುಕತ್ತಲ
ಮನೆಗೆ ನೂಂಕಿದುದು ಬಲವಂದು. ಅಧಿಕಾರ ದಂಡ
ಕೂರಗತಿಗೆತ್ತಿರೆ ಕರುಣೆ ದಯೆಗಳ್ ದೂರವೆ
ಉಳಿದುವು. "ಮಾರಿಟ್ಜ್ ಬರ್ಗ್" ಸೆರೆಮನೆಯಲಿ ಸ್ತ್ರೀ
ಜನರ ಬಂಧನ. ಕಠಿಣ ಶಿಕ್ಷೆಯಲಿ ಕಠಿಣ ಕೆಲಸ.
ಕಠಿಣಾತಿಕಠಿಣವೇ ಎಲ್ಲ. ಅರೆ ಬೆಂದ ಅನ್ನ.
ಸಾರಿಲ್ಲದ ಸಾರುಮನೆ ಕೈಹಚ್ಚಲಾಗದ
ಆಹಾರ. ಕಸ್ತೂರಿ ಬಾ ಉಪವಾಸದಲಿಯೆ
ದುಡಿದುದಣಿದು ಬಳಲಿ ನಲುಗಿ ಸೋಲ್ತು ಹಣ್ಣಾದರ್.
ಅಧಿಕಾರಿಗಳ ಒತ್ತಡವಿರ್ದುದು ಅದೆ ಅನ್ನ
ಸಾರು ಉಣ್ಣಿಮೆಂದು. ಸತಿ ಕಸ್ತೂರಿ ಬಾ ನಸು
ಅಸಮಾಧಾನದಿಂ ನಿರಾಕರಿಸಿ ಪಾಲ್ಪಣ್ಣು
ಕೊಡಿಮೆಂದು ಕೋರಿದರ್, ತಮ್ಮ ಅಸಹಾಯಕತೆ
ಸೂಸಿ. ಆದರಾ ಅಧಿಕಾರ ದರ್ಪದ ಮುಂತೆ
ಕೋರಿಕೆಗೆ ಬೆಲೆಯಿಲ್ಲವಾಯ್ತು. ಕಸ್ತೂರಿ ಬಾ
ಕದಾನ್ನವನುಣ್ಣುವ ವಿಚಾರಂ ಕೈಬಿಟ್ಟು
ಪಾಲ್ಪಣ್ಣುಗಳಲ್ಲದೇಂ ಒಲ್ಲೆನೆಂದರ್ ಮತ್ತೆ.
ಧೂರ್ತ ಅಧಿಕಾರಿವರ್ಗವದು ದರ್ಪದಿಂ
ನಿಷ್ಠುರದಿಂ ರೋಷದಿಂ ಕಟ್ಟು ನಿಟ್ಟುಸಿರ್ವಿಟ್ಟು
"ಇದನುಣ್ಣದಿರೆ. ಬೇರೇನಿಲ್ಲ" ಎಂದೊದರಿದರ್
ಉಚ್ಚ ದನಿ ಹರಿಸಿ. ಪರಮ ಸಾಧ್ವೀ ಕಸ್ತೂರಿ
ಬಾ ದಿವ್ಯ ನಿರ್ಲಕ್ಷ್ಯದಿಂ ದೃಢ ಭಾವದಿಂ

→

ನಿರಾಹಾರಿಯಾಗುಳಿದು ಕಠಿಣತರ ಕಾರ್ಯಂ
ಎಡೆಗೆಡದೆ ನಿರ್ವಹಿಸಿ ಮೆರೆದರಭ್ಯುದಯಮಂ.
ಆದರಾ ಪರಿಶ್ರಮ, ಗಾಳಿ ಬೆಳಕುಗಳ ಅಭಾವ,
ಕೊಳಕು ಕವಿದಿರ್ದ ಕಗ್ಗವಿಯ ವಾಸ, ಹಿಗೆ ಹಸಿವು
ತೃಷೆಗಳ ಹಿಂಸೆ ಎಲ್ಲವುಂ ಒಗ್ಗೂಡಿರಲ್
ನರಕಮುಮವನಾಯ್ತು ಜೇಲಿನ ಕಠಿಣ ಜೀವನಂ.
ಸಂದುವು ಕೆಲ ದಿನಮಾನು. ನಿರಾಹಾರದಿಂ
ಕಾಲಹರಣಂಗೈದ ಕಸ್ತೂರಿ ಬಾ ಬಳಲಿ
ಬೆಂಡಾಗಿಯುಂ ಸಹಚರಿಗಳೊಡಂ ಕಠಿಣ ಶಿಕ್ಷೆಯ
ಅಂಕದಲಿ ಶಾಂತ ಭಾವದಿಂ ದುಡಿಯುತಿರ್ದರ್
ಎಂದಿನೊಲ್. ಕೈಕಾಲು ಸೋಲ್ದು ದೇಹ ಕುಸಿದ್ರೊಲ್
ಕ್ಷೀಣಿಸಿದುದು. ಮಲಗುವೆನೆ ಸೆಜ್ಜೆಯುಮಿಲ್ಲ. ಹೊದಿಯೆ
ಕಂಬಳಿಯುಮಿಲ್ಲ. ಉಣಲ್ ಉತ್ತಮ ಆಹಾರವು
ಇಲ್ಲವೆನೆ ವಿಷಮ ಸ್ಥಿತಿಗೇರ್ದುದು ಸ್ಥಿತಿಗತಿ.
ಸಹಚರ್ಯದೊಳಿರ್ದ ಇತರ ಸತ್ಯಾಗ್ರಹಿಗಳ್
ತತ್ತರಿಸಿದರ್ ಮನಃಚಿತ್ತ ಬೆಂದು ಬೇಸಾಗಿ.
ಸುದ್ದಿಯುಂ ಎಲ್ಲೆಡೆಗಳಲಿ ಪರ್ವಿ ಪ್ರಜೆಗಳ್
ಭುಗಿಲೆಳ್ದು ಪ್ರತಿಭಟನೆ ಗಲಾಟೆ ಗದ್ದಲಂ
ಕೊನೆಮುಟ್ಟಿದುವು. ಛಿಃ ಮಾರಿ, ಧಿಕ್ಕಾರಗಳ್
ದಿಶೆದಿಶೆಯುಂ ಮುಟ್ಟೆ ಧೀಂಕಿಟ್ಟುವು ಎಡೆವಿಡದೆ.
ಕಠಿಣ ಸುದ್ದಿಯುಂ ಭಾರತವರ್ಷಮಂ ಮುಟ್ಟಿ
ಅಲ್ಲಿಯುಂ ಪ್ರತಿಭಟನೆಯ ಕಾವು ಗಗನಮಂ
ಮುಟ್ಟಿದತ್ತು. ಎಲ್ಲೆಡೆಯುಂ ಹಾಹಾಕಾರದ
ಬಿಸಿಯುಸಿರ್ ಹರಿದತ್ತು ಉಷ್ಣೋಷ್ಣ ವಾಯುವಿನ

→

ಸುಯ್ಲ್ಲನೊಲ್. ಜೇಲಿನ ಅಧಿಕಾರೀ ವರ್ಗವದು
ಮನಮಿಡುಕಿ ಎರ್ದೆಗೆಟ್ಟು ಗಡಬಡಿಸಿ ಸಿಡುಕಿನಿಂ
ತಾಮಿತ್ತ ಆಹಾರಮಂ ತಿನಲ್ ಒತ್ತಂಕೆ
ಹೇರಿದರ್ ದರ್ಪದಿಂ ಜೋರಿನಿಂ ಕೆಂಗಿಡಿಯ
ಕಾರಿದರ್ ಕಂಗಳಲಿ. ಆಗಳುಂ ಮಣಿಯದಿರೆ
ನಯವಿನಯ ಪ್ರದರ್ಶನಂಗೈದು ಒಳ್ನುಡಿಯ
ನಲ್ಮಾತುಗಳ ಸರಿ ಹರಿಸಿ ಪ್ರಯತ್ನಿಸಿಯುಂ
ವಿಫಲತೆಯನೊಪ್ಪಿ ಮೊಗವಿಳಿದು ವಿಧಿಯಿಲ್ಲದೆಯೆ
ಪಾಲ್ಪಣ್ಣುಗಳನೀಯೆ ಒಪ್ಪಿದರ್ ; ಕಸ್ತೂರಿ
ಬಾ ಸೋಲ್ದು ತೀರ ಬಳಲಿ ಸುಣ್ಣವಾದ ಮೇಲೆ.
ಅನ್ನೆ ಬರಮುಪವಾಸಮಿರ್ದ ಕಸ್ತೂರಿ ಬಾ
ಬೆದರಿ ಕೊರಗಿದರಿಲ್ಲ. ಪಿಂಜರಿದು ಬಿಡುಗಡೆಯ
ಬೇಡಿದರಿಲ್ಲ. ದೃಢ ಚಿತ್ತದಿಂ ಭಾವನಾ
ವೇಶದಿಂ ಕಾರ್ಯನಿಷ್ಠೆಯ ದಿವ್ಯ ಪ್ರೇಮದಿಂ
ಕಠಿಣ ಕಾರ್ಯಮಂ ನಿರ್ವಹಿಸಿದರ್ ತಮ್ಮ
ಕಳೆದುಳಿದ ಶಕ್ತಿಯಂ ಕ್ರೋಢೀಕರಿಸಿ. ಅಃ,
ಕಠಿಣ ಪರಿಶ್ರಮವದೆನೆ ಸಾಮಾನ್ಯಮಲ್ಲ. ಸತಿ
ಕ್ರಮವತ್ತಾಗಿ ಕಾರ್ಯಕ್ರಮವೆಸಗಿ ನೆಟ್ಟ
ನಿಡು ನೋಟದಿಂ ನೋಳ್ಪ ಕಂಗಳಿಗೆ ಅಚ್ಚರಿಯ
ನೆರೆ ಉಕ್ಕಿಸಂತೆ, ಸಹನೆಯೇ ಮೂರ್ತಿಯೈದಿದ
ರಮಣೀಮಣಿ ಸಹಿಸಿಯೇ ಸಹಿಸಿದರ್ ತಾಳ್ಮೆಯಿಂ.
ದುಡಿದರ್ ನಿರಾಹಾರದಿಂ.ಓರಗೆಯ ನಾರೀ
ಮಣಿಯರಿಂಗೆ ಮೇಲ್ಪಂಕ್ತಿಯಾಗಿ ಬದುಕಿ ಬಾಳಿ,
ಧೂರ್ತ ಪ್ರಾಧಿಕಾರಿಗಳ ಮನದಚ್ಚರಿ ಕಟ್ಟಿ

→

ಒಡೆಸಿ ಕಣ್ ತೆರೆಸಿದ ಮಹಾನ್ ಮಹಿಳೆ ಕಸ್ತೂರಿ
ಬಾ. ಬಿಡುಗಡೆಯ ದಿನಂ ಬಾಗಿಲೊಳ್ ಕಾದಿರ್ದ
ಗಾಂಧೀಜಿ ಮಡದಿಯಂ ಆದರದಿಂ ಸ್ವಾಗತಿಸಿ
ಸ್ಥಿತಿಗತಿಯಂ ಕಂಡು ಮನನೊಂದು "ನೀನಿಂದು
ವೃದ್ಧೆಯೊಲ್ ಕಣ್ಗೆಸೆಯುತಿರ್ಪೆ" ಎಂದರ ತೀವ್ರ
ಕಳವಳ-ಕಳಕಳಿವೆರಸಿದ ದನಿಯಲಿ.

"ಇರಲಿ, ಬಿಡಿ.
ಸೆರೆಮನೆಯ ವಾಸಂ ಪರಿಪಕ್ವಗೊಳಿಸಿತೆನ್ನ
ಮನಂ."

ಮಡದಿಯೆಂದ ಅನುಭವರಸ ವಾಣಿಯದು
ಮನಂಗೆತ್ತು ಹೃತ್ಪಕ್ಷಿ ಮುದಗೊಳೆ ಕ್ಷೇಮನಿಧಿ
ಇಂದು ಕ್ಷಯಿಸಿದೊಡಮದನುಂ ಮತ್ತೆ ಗಳಿಪುದು
ಸಾಧ್ಯಮೆಂದು ಸಮಾಧಾನಗೊಂಡರ್ ಗಾಂಧೀಜಿ.
ಮೊದಲ ಯತ್ನದ ಅನುಭವ ಬಲ್ತು ಪಣ್ಗೊಂಡ ಮನ
ಮತಿಯರಳಿದೊಡದೆ ದ್ರವ್ಯಂ ಎಂಬೊಂದು ನಿರ್ಣಯಂ
ಮನದುಂಬಿದರ್ ಹರುಷ ಪೂರ್ಣಹೃದಯ ಕುಂಡ
ಉಕ್ಕಿಹರಿದ ಪಾಂಗಿನಲಿ.

ಮಾತಾಮಯಿ ಕಸ್ತೂರಿ ಬಾ ಮನೆಗೆ ಮರಳಿಯುಂ
ಅಂದಿನ ದೈಹಿಕಾರೋಗ್ಯ ಮರಳಿ ಬಾರದೆಯೆ
ನರಳಿದರ್ ಅಶಕ್ತತೆಯ ಇಕ್ಕುಳದಲಿ ಸಿಲ್ಕಿ.
ದೇಹಯಷ್ಟಿಯೊಣಗಿ ಬಿದಿರ ದೆಬ್ಬೆಯಾದತ್ತು
ವೈದ್ಯರ ಆವೊಂದು ಔಷಧಿ ಚಿಕಿತ್ಸೆಯುಂ ಸೈ
ಗೂಡದಿರೆ ಚಿಂತೆಗೆತ್ತರ್ ದಂಪತಿಗಳ್. ಆ
ವರ್ಷಮಾನವೊಂದು ಕಳೆದುದು ಅಂತಿಂತು.

→

ಸುಖದುಃಖಳುಂಬುತೆ ಜೀವನೋದ್ವಿಗ್ನತೆಯು
ಭಾವದಲಿ ಬೇವು ಬೆಲ್ಲಮುಂ ತುಂಬಿ ಆಶ್ರಮ
ದ್ವಯಂಗಳ ನಿರ್ವಹಣೆ ನಡೆದತ್ತು ಎಂದಿನ
ಮಾಳ್ಕಿಯಲಿ ಸಂಕಟದ ಸುಯ್ಲಾಡಿಸುತ.

ದೀರ್ಘ
ವಿರಾಮದ ಬಳಿಕೊರ್ಮೆ ಹಿಂದಿನ ಅನಾರೋಗ್ಯ
ಮರುಕಳಿಸಿ ರೋಗ ರುಜೆಯು ಮುದ್ರೆಯನೊತ್ತಿ
ರುಗ್ಣ ಶಯನಕೆ ತಳ್ಳಿದುದು ವಿಧಿ. ಕಸ್ತೂರಿ ಬಾ
ಬಳಲ್ದು ಸೋಲ್ದು ಬಾಡಿ ಬೆಂಡಾದರ್ ತೊಟ್ಟು
ಕಳಿದ ಹೂವಿನೊಲ್ ಮಿಗೆ ಬತ್ತಿ. ಆತಂಕಿತ
ಹೃನ್ಮನಗಳ ಯಾತನೆಯಿಂ ನೊಂದು ನೀರಾದ
ಗಾಂಧೀಜಿಯುಂ ಕರೆದೊಯ್ದರ್ "ಜೋಹಾನ್ಸ್‌ಬರ್ಗ್"
ಚಿಕಿತ್ಸಾಲಯಕೆ. ತಮ್ಮ ಸ್ನೇಹ ಪ್ರೇಮಗಳ
ಸಂಬಂಧೀಯ ಹಿರಿಯ ವೈದ್ಯರ ಚಿಕಿತ್ಸೆಯಲಿ
ಇರಿಸಿದರ್, ಆರೋಗ್ಯ ಭಾಗ್ಯಮಂ ಬಯಸಿ. ದಿನ
ಮಾಸ ಕಳೆದುವು ಎಂದಿನವೊಲ್ ಚಿಕಿತ್ಸೆಯುಂ ನೈ
ಗೂಡದೆಯೆ. ಕುಸುಮ ಕೋಮಲ ಕಸ್ತೂರಿ ಬಾ ತೀವ್ರ
ಅಸ್ವಸ್ಥತೆಯಿಂ ನರಳುತಿರ್ದರ್ ರೋಗಗಳ
ಪಿಚಂಡಿ ಕರದಲಿ ಸಿಲ್ಕಿ. ದಿನಮಾನಗಳೆನಿತೊ
ಸಂದುವು ಅನುಪಯುಕ್ತಮಾಗಿ. ರೋಗವಿಳಿಪ
ಬದಲ್ ಉಗ್ರಗೊಳ್ಳತೊಡಗಿರೆ ಕಂಗಾಲಾದರ್
ವೈದ್ಯರ್. ಅನುದಿನಂ ಶಕುತಿ ಕುಂದಿ ನೆತ್ತರಾರಿ
ಸೊರಗಿದರ್ ಕಸ್ತೂರಿ ಬಾ. ಕ್ಷೀಣಿತ ಗತಿಯಲಿ
ಉಸಿರಾಡುತ ಕರುಣಾಯಿತ ಸ್ಥಿತಿಯಲಿರುತಿರೆ
ಚಿಕಿತ್ಸಾಲಯದ ವೈದ್ಯ ಶಿಖಾಮಣಿಯುಂ, ತನ್ನೊಂದು →

ವೈದುಷೀಯ ಚಿಕಿತ್ಸಾವಿಧಾನಂ ರೋಗಿಯು ಮೈಗೂಡದಿರ್ಪುದತಿ ನಿಶ್ಯಕ್ತಿಯಿಂದೆ. ಇಂ ತಾಳ್ವುದುಚಿತವಲ್ತೆಂದು ತನ್ನ ಮನದೊಳ್ ಬಗೆದು, ಗಾಂಧೀಜಿಯು ನೆಕ್ಕಟಿಗೆ ಕರೆದೊಯ್ದು ಪೇಳ್ದರ್,

"ರೋಗಿಯುಂ ಅತೀ ಕ್ಷೀಣಿತ ದೆಶೆಯುಲಿರುತಿರಲ್ ಚಿಕಿತ್ಸೆಯುಮೆನ್ನ ಮೈಗೂಡದು. "ಭೀಫ್ ಟೀ' ಯುಂ ಸೇವಿಸದೆ ಗತ್ಯಂತರವಿಲ್ಲ. ಅಲ್ಲದೊಡೆ ರೋಗಿಯುಂ ಬದುಕುಳಿವ ಸಂಭವವಿಲ್ಲಂ. ಎನ್ನ ಸಲಹೆಯುಂ ಮಾನಿಸದೊಡೆ ಚಿಕಿತ್ಸೆಯುಂ ವ್ಯರ್ಥ ! " ಕಟ್ಟುನಿಟ್ಟಾಗಿ ನುಡಿದ ವೈದ್ಯರ ಮಾತಿನಿಂ ಗಾಂಧೀಜಿ ದುಃಖದಿಂ ಚಿಂತೆಯಿಂ ಕಡುನೊಂದು ಮಡದಿಯ ಬಳಿಗೈದುತೆ ವೈದ್ಯರಭಿಪ್ರಾಯಮಂ ತಿಳಿಪಿ "ಈಗೇಂಗೈವೆಂ ? ಆರೋಗ್ಯಪ್ರಯುಕ್ತ ನೀನದಂ ಸಂಸೇವಿಸಿದೊಡೆ ದೋಷಮಿರದು. ಮಿನ್ನೆ ಎನಿತೆನಿತೊ ರೋಗಿಗಳ್ ಸಂಸೇವಿಸಿ ರೋಗಂ ಹರಿಸಿ ಸೊಗದಿಂದಿರ್ಪರ್. ಇದನೊರ್ಮೆ ನಿನ್ನೊಳ್ ತಿಳಿದು ನೋಡೈ. ನೀನೊಪ್ಪಿದೊಡೆನ್ನ ಅಭ್ಯಂತರ ಏನಿಲ್ಲಂ. ಏಂವೇಳ್ವೆ ?" ಎನಲ್ ಕಸ್ತೂರಿ ಬಾ ಅದಂ ಕೇಳ್ದು ಅತೀ ಪರಿತಾಪದಲಿ ಮನಮರುಗಿ ಕರಗಿ ಜಿಗುಪ್ಸೆಯಿಂ ಮೊಗದೊಳ್ ಒಗರು ಸೂಸುತೆ

"ಹೀನಮಪ್ಪ ವಿಷಯುಂ ಕೇಳ್ವುದೆ ಕಷ್ಟಮಿರೆ ಇಂ ಸೇವಿಪುದೆಂತಾನುಂ ? ಆನೊಲ್ಲೆನದಂ ಜೀವ ಉಳಿಯದಿರೆ ಪೋಗಲಿ" ಎಂದರತಿ ಕ್ಷೀಣಿತ ಧ್ವನಿಯಲಿ. ಗಾಂಧೀಜಿಯಾಗಳೆನಿತೊ ಶಾಕಾಹಾರಿ →

ಜನರ್ ರೋಗ ವಿಮುಕ್ತಿಯಂ ಪಡೆಯೆ 'ಭೀಪ್ ಟೀ'
ಸೇವಿಸಿರ್ಪರ್. ರೋಗವಶದಿಂ ಕುಡಿಯುವುದರೊಳ್
ದೋಷವಂಟದು. ನೀನಿದನೊಪ್ಪಿದೊಡೊಳ್ಳಿತೆನೆ
ತಪ್ಪಿಲ್ಲ. ನೀನೊಪ್ಪದಿರೆ ವೈದ್ಯರೊಪ್ಪರ್ ಚಿಕಿತ್ಸೆಯಂ
ನೀಡಲ್" ಎನಲನುನಯದಿಂ. ಕಸ್ತೂರಿ ಬಾ ಮೆಲು
ಮೆಲ್ಲನೆ ತಲೆಯಲುಗಿಸುತೆ.
"ಆನುಂ ಸತ್ತೊಡಂ
ಚಿಂತೆಯಿಲ್ಲ. ಮಾಂಸದ ಕಷಾಯವನೊಲ್ಲೆ. ನೀವ್
ಎನ್ನನಿಂತೆ ಕರೆದೊಯ್ಯಿರಿ ಮನೆಗೆ" ಎನಲದೇ
ವೇಳೆಯೊಳಲ್ಲಿಗೆಯ್ತಂದ ವೈದ್ಯರ್ "ಆಯ್ತೀಗಳೆ,
ಕರೆದೊಯ್ಯಿರಿ" ಎನುತ್ತೆ ಪೊರವಂಟರ್ ಕೋಪದ
ಕಿಡಿಹಾರಿಸಿ.
ಕಸ್ತೂರಿ ಬಾ ದೈನ್ಯಗತಿಯಲಿ
ನೋಡಿದರ್ ಪತಿಯ ಮೊಗಮಂ. ದುಃಖಸಂಕಟದ
ನೋವಿನಿಂ ಕುಗ್ಗಿರ್ದ ಗಾಂಧೀಜಿ ಅನುನಯದ
ದನಿಯಲಿ ಮಡದಿಗೆಂದರ್ "ಜಡಿಮಳೆ ಸುರಿಯುತಿದೆ
ಪೊರಗೆ. ಅರ್ಧತಾಸಿನಲಿ ನಿಲ್ದಾಣಂ ನಾವ್
ಸೇರದಿರ್ದೊಡಿಂದಿಲ್ಲ ಬೇರೊಂದು ಬಂಡಿ.
ಈಗಳ್ತೆ ಪೊರಡುವುದೆ ಒಳ್ಳಿತೆಂಬೆ."
"ಆಗಲಿ,
ಮನೆ ಮುಟ್ಟಿದೊಡೊಳ್ಳಿತು. ಮನೆಯ ವಾತಾವರಣ
ಈಯುವುದೆನಗೆ ಶಕ್ತಿ ಆರೋಗ್ಯ ಎಲ್ಲವುಂ.
ಇಂ ಪೋಗ್ವದೆ ಸರಿ."
ರೈಲು ನಿಲ್ದಾಣಮಂ ಸೇರೆ

→

ಬಂಡಿಯೊಂದಂಬಡೆಯುಲೆಂದು ಸುರಿಯುವ
ಜಡಿಮಳೆಯಲಿ ಅಲೆದಲೆದು ಬಂಡಿಯುಂ ಪಡೆದ
ಗಾಂಧೀಜಿ ದುಃಖಭಾರದಿಂ ಕುಗ್ಗಿ ಕಂಗೆಟ್ಟಿರೆ
ಹರಿದುದಶ್ರುಜಲಂ ಕಪೋಲಪಾಲಿಯುಮೇಲೆ.
ಪತಿಯ ಸಂಕಟಮರಿತ ಸತೀಮಣಿ ಮನನೊಂದು
ರೋಗ ಬಾಧೆಯುಲಿ ಬೆಂದು ನಲುಗಿ ಬಳಲಿ ಬಾಡಿ
ಸೋಲ್ದೊಡಂ ಧೈರ್ಯ ಪ್ರದರ್ಶನಂಗೆಯ್ಯುತ್ತೆ,

"ನೀವ್ ಮನದೊಳ್ ಚಿಂತಿಸದಿರಿಂ. ಎನಗೇಂ ಹಾನಿ
ತಟ್ಟದು. ಅನಾಥೋ ದೈವ ರಕ್ಷಕ ಎಂಬೊಂದು
ನಲ್ನಾತು ನೀಮರಿಯಿರೇಂ ? ದೇವರೊಳ್ ಭಾರ
ಇಟ್ಟರಾಯ್ತು." ಎಂದರ್ ಕ್ಷೀಣಿತ ದನಿಯಿಂದಲಿ.
ಸತಿಯ ಕೆಚ್ಚಿನನುಡಿಯನು ಕೇಳುತೆ ಗಾಂಧೀಜಿ
ಹೃದಯದ ಕಳಕಳಿಗೆ ತಾವೆ ನಾಣ್ಚಿ ಒಡಲಿನ
ದುಃಖ ಸಂಕಟಮಂ ಬದಿಗೊತ್ತಿ ಅಣಿಗೊಂಡರ್
ಪೊರಡೆ. ಮಳೆಯು ಸರಿ ಸುರಿಯುತಿರ್ದುದು ಎಡೆಬಿಡದೆ.
ಅಂಬರಮೆ ತೂತಾಯ್ತೆನೆ ಸುರಿವ ಮಳೆ ಸರಿಯಂ
ನೆಟ್ಟ ನಿಟ್ಟಾಲಿಯಿಂ ನಿಟ್ಟಿಸುತೆ ನೋಡಿದರ್
ಗಾಂಧೀಜಿ. ಮನದಿ ಚಿಂತಾದ್ರವ್ಯ ಹೆಪ್ಪಿಟ್ಟು
ಘನೀಭೂತಮಾದಂತೆವೊಲ್ ಉಳಿಯು ಹೋದುದು
ನಿಮಿಷಮೊಂದು. ತಾಳ್ವೆನೆನಲ್ ಸಮಯಮಿನಿತಿಲ್ಲ.
ಚಿದಾಕಾಶದಲಿಯುಂ ಸುರಿಯುತಿತ್ತು ಮಳೆಯು ಸರಿ,
ಗುಡುಗು ಮಿಂಚುಗಳ ಅಮಿತ ಕೋಲಾಹಲ ತುಂಬಿ.
ಮತಿಗೆಟ್ಟು ಮನಂಗೆಟ್ಟು ಕಂಗಾಲಾಗಿರಲ್
ಸಮಯೋಚಿತ ಸಲಹೆ-ಸಹಾಯಮೀಯುವ ಗೆಣೆಯ

→

ಬಂಧುಗಳ್ ಆರಿಲ್ಲ ಸನಿಹದೊಳ್. ಮಡದಿಯುಂ
ಜೀವನ್ಮರಣಗಳ ಕಡು ಸಂಕಟದಲಿ ಸಿಲ್ಕಿರೆ
ಕಟ್ಟುಸಿರ್ ಎದೆಯೊಳ್ ತಡೆಗಟ್ಟಿದೊಲ್ ಸಂಕಟ-
ಸಂಕಷ್ಟದಲಿ ಹರಿಯುತಲಿರ್ದುದು ನೋಳ್ಪ ಕಣ್
ಕನಿಗೂಡುವ ತೆರದಲಿ. ಒಡನೊಡನೆ ತನ್ನೊಂದು
ಕೈಚೀಲದ ಸಹಿತ ಪತಿಯುಂ ಶಿಶುವನು ಎತ್ತಿ
ಕೊಂಬೊಲ್ ಸುಲಭದೊಳ್ ಎತ್ತಿಕೊಂಡೊಯ್ದರಾ
ಕೈಗಾಡಿಗೆ. ರೋಗ ಪರವಶತೆಯಿಂ ಮೈಮುದುಡಿ
ನೆತ್ತರಾರಿ ಬಳಲಿ ಬತ್ತಿ ಬಿದಿರ ದೆಬ್ಬೆಯೊಲ್
ಸೀಗಡ್ಡಿಯಾದ ದೇಹವನು ಗರಿ ಹಗುರವಿರೆ
ಒಡಲುರಿ ಧಗಧಗಿಸಿದುದು ಗಾಂಧೀಜಿಗೆ. ಒಡನೆ
ದುಃಖಾಶ್ರುವಿನಿಂ ತುಂಬಿ ತುಳುಕಿದುವು ಕಣ್ಣುಗಳ್.
ಮುಖಬಿಂಬ ರಂಗು ತಳೆದುದು ದುಃಖವೃತ್ತಿ. ಸತಿ
ಕಸ್ತೂರಿ ಬಾ ಪತಿಯು ದುಃಖಸಂಕಟವನರಿತು
ಮನಮರುಗಿ ಕಾರುಣ್ಯ ದ್ರವ್ಯ ಕರಗಿ ನುಡಿದರ್,

"ಚಿಂತಿಸದಿರಿ. ದೇವರ ದಯವಿರ್ಪುದೆಮ್ಮ ಕಡೆಗೆ."
ಗಾಂಧೀಜಿ ತನ್ನ ತಾಂ ಸೈಪಿಸುಂ ದುಃಖಾಶ್ರು
ಸೂಸಿದುದು ಹೇಡಿತನಮಂ ಪ್ರದರ್ಶಿಸಿದೆನೇ
ಎನಿಸಿ ನಸು ನಾಣ್ಚಿದರ್ ತನ್ನೊಳ್. ಹೊರಗಡೆ ಜಡಿ
ಮಳೆ ಸುರಿದಿದೆ ಎಡೆಬಿಡದೆ. ನಿಲ್ದಾಣಮಂ ಮುಟ್ಟಿ
ದೇವರೇ ಗತಿಯೆನುತೆ ಮಳೆಯೊಳ್ ಮಡದಿಯಂ
ಹೊತ್ತು ನಡೆದರ್ ರೈಲಿನ ಬಂಡಿಗೆ. ಅಶಕ್ತತೆ
ತುಂಬಿದ ಶರೀರ ನಡುಗುತಿರ್ದುದು ಗಡಗಡನೆ.
ಗಾಂಧೀಜಿ ಮೈಯುಂ ಒಣಬಟ್ಟೆಯಲಿ ಮೆಲ್ಲನೆ

→

ಒತ್ತಿ ಉಜ್ಜಿ ಒರಿಸಿ ಒಣಗಿಸೆ ಪ್ರಯತ್ನಿಸುತ
ಶುಶ್ರೂಷೆಗೈದೊಡಂ ಚಳಿಗಾಳಿಯುಂ ಭರಿಸಿ
ಸೈರಿಸದಾಯ್ತು ಮಡದಿಯು ಸೂಕ್ಷ್ಮನ್ಮೈ. ಗಾಂಧೀಜಿ
ಮತ್ತೇಂ ಕೇಡುಕೊ ಎನಿಸಿ ಬೆದರಿದರ್ ತಮ್ಮೊಳ್.
ಒಡಲ ಸಂಕಟ ಧೈರ್ಯದೆಳೆಯುಂ ಜಗ್ಗುತಲಿರೆ
ಶಿಲಾಮೂರ್ತಿಯೊಲ್ ಕುಳಿತರ್ ಸತಿಯ ಬಳಿಯಲಿ.

ಆಗಳಾ ಮಡದಿ ಪತಿಯ ದುಃಖಿತ ಹೃದಯದ
ಪರಿತಾಪವನರಿತು ಬಲುನೊಂದು ಮೆಲು ನುಡಿದರ್
ಕ್ಷೀಣಿತ ದನಿಯಲಿ "ನನಗೇನಾಗದು ನೀವೇಂ
ಚಿಂತಿಸದಿರಿ."

ಸತೀಮಣಿಯ ನುಡಿಯನಾಲಿಸಿದ
ಗಾಂಧೀಜಿ ಮರುನುಡಿಯೆ ಬಾಯಿ ಬಾರದಾದರ್.
ಮನದ ಕಿಂಡಿಯೊಳ್ ಆಶಾಕಿರಣ ಮೂಡಿದುದು
ದುಃಖ ಸಂಕಟದ ಕಾಳ ತೆರೆಯುಂ ಓಸರಿಸಿ:

ಹೇ, ಮನೋಹರೇ! ದಿವ್ಯ ಆಶಾ ರಾಣಿಯೇ!
ನಿಶೆಯ ಕಗ್ಗಪ್ಪಿನ ಮುಸಿಯುಂ ಬೆಳಗೆ ಮೂಡುವ
ನಕ್ಷತ್ರಗಳಂತೆವೋಲ್ ನೀಂ ಬಹೆ ನಿರಾಶೆಯುಂ
ಜಡಿಕುಟ್ಟೆ ಅಳಿಸೆ ? ನಿನ್ನಯ ಚಿರಾಮೃತಮಯ
ಪಾಶದಿಂದಲ್ತೆ ಮೃತ್ಯುಪಾಶವಂ ಅಡಿಗಡಿಗೆ
ಹಿಂತಿಕ್ಕುವೆ ಭುವನ ತಿಕ್ತತರ ಜೀವನದಿಂದೆ.
ಬಡತನದ ಕಣ್ಣಿಗೆ ಮಹಾ ಸಂಪತ್ತಿನ ಸವಿ
ಗನಸು ನೀನು ! ದ್ರೋಣಗಿರ್ಯಾಶ್ರಮದ ಚಿರವಿರಹಿ
ಗಂಧರ್ವನ ಪರಿತಾಪದ ಮುಂದೆ ಸಂದೇಶ
ಸಾರಿ ಮೇಘರಾಜನ ಪಾತ್ರ ವಹಿಸುವೆ ನೀನು !

ಹೇ, ಆಶಾ ವಿಲಾಸಿನಿಯೆ ! ನೀನಲ್ತೆ ಜಗತ್
ಪ್ರಾಣವಾಹಿನಿ ? ನರಳ್ವೆಡೆಗಳ ತಣ್ಪಿನಾಗರ ?
ಅಃ, ಕುದಿವೆದೆಗೆ ತಣ್ಪಿನ ತನಿಯುಳಿಸುತಿಪ್ಪೊಲ್ !

ಇಂತೆಂದು ಚಿಣ್ಣ ಆಶಾಕಿರಣದ ನೆರವಿಂ
ಗಾಂಧೀಜಿ ತಮ್ಮ ಹೃದಯ ಭಾರಮಂ ಇಳುಹಿ
ಶ್ರೀರಾಮ ಧ್ಯಾನದಲಿ ಮನವಿಟ್ಟರ್ ಮಿಣ್ಣನೆ.
ಪಯಣದ ಪಥದಲಿ ಪ್ರಕೃತಿಯ ವರ ಸೌಂದರ್ಯ
ದೃಶ್ಯ ವೈಶಾಲ್ಯದಲಿ ರಮಣೀಯವಾದ ಗಿರಿ
ಬೆಟ್ಟ ಪರ್ವತಂಗಳ ಮುಂಪ್ರಾಂತ್ಯ ವನವಾರ್ಧಿ
ವಿವಿಧ ವರ್ಣವರ್ಣಾಂತ ರಂಗುಗುವ ತಳಿರಿನ
ಶೋಭಾಶೈಲಿ ವಿಜೃಂಭಿಸಿರೆ ಇಕ್ಕೆಲಗಳಲಿ
ನೋನೋಡಿ ತೋಷಿಸುವನಿತು ಸ್ವಾಸ್ಥ್ಯವಿಲ್ಲದೆಯೆ
ಇರ್ದೊಡಂ ಆನಂದಪ್ರದಮಾದುದು ನೋಳ್ಪ
ಕಣ್ಗೆ. ಚಿಲ್ಲನೆ ಮೈನಡುಗಿಸಿತ್ತು ತನಿಗಾಳಿ
ಛಪ್ಪನೆ ಸುಸುಳಿ ಮುದ್ದಿಸಿದುದು ಮೈಮನಂ.
ಗವಾಕ್ಷಿಯ ಮುಚ್ಚುತೆ ಚಳಿಗಾಳಿಗೆ ತಡೆಯಿಟ್ಟ
ಗಾಂಧೀಜಿ ಕಣ್ಮುಗಿದು ರಾಮಧ್ಯಾನ ರಸದಲಿ
ಮುಳುಗೆ ಭಕ್ತಿ ಘನಿಸಿತು ಹೃತ್ಕೋಶಂ ತುಂಬಿ
ನರನಾಡಿಗಳಿಗೆ ಹರಿವಂದದಲಿ. ಪಥವೆಂತು
ಕಳೆದುದೊ, ಸಮಯವೆಂತು ಉರುಳ್ದುದೊ ನಿಶಿಯೆಂತು
ನಕ್ಷತ್ರಮಾಲೆಯುಂ ಸೂಡಿದಳೊ ಅರಿಯದಾಯ್ತು
ಪೊತ್ತಿನ ಕಣ್ಮಾಯದಾಟಂ. ಪತಿಯೊಡನೆ ಆಶ್ರಮ
ಧಾಮವಂ ಮುಟ್ಟಿ, ಚಿಕಿತ್ಸೆಯ ಕಠಿಣತಮ ಹಿಂಸೆ
ಹಿಂದುಳಿದು ನೆಮ್ಮದಿ ಲಭಿಸಿತು ಮನಮಂಡಲಕೆ.

→

ದುರ್ವಿಧಿಯ ಲೀಲಾ ಖೇಲನದ ಪರಮ ಹಿಂಸೆಗೆ
ಸಿಲುಕಿ ತತ್ತರಿಸಿರ್ದ ಜೀವಪ್ರವ್ಯ ಬಳಲ್ದು
ಬಾಡಿ ಬೆಂಡಾಗಿರೆ ನೋಳ್ಪ ಕಣ್ಣಾಲಿ ಕಂಗಿ
ದ್ರವಿಸಂತು ಸಂಕಟಪ್ರದಂ. ಸಾವು ಬದುಕಿನ
ಹೋರಾಟದಲಿ ಹಣ್ಣು ಹಣ್ಣಾಗಿದ್ದ ಸತಿಯಂ
ಕ್ರಮವತ್ ಪ್ರಕೃತಿ ಚಿಕಿತ್ಸೆಗೊಳಪಡಿಸಲುಕೆ
ಮುಂದಾದರ್ ಗಾಂಧೀಜಿ. ತಾನದರೊಳ್ ಉತ್ಕೃಷ್ಟ
ಪರಿಣತಿಯಂ ಪಡೆಯದೆಯೆ ಇರ್ದೊಡಂ ಗತಿಯಿಲ್ಲ.
ಹಾಲ್ಹಣ್ಣುಗಳ ಉತ್ತಮ ಆಹಾರದ ಪೂರೈಕೆ,
ಜೊತೆ ಜೊತೆಗೇ ಪ್ರಕೃತಿ ಚಿಕಿತ್ಸೆಯ ವ್ಯವಧಾನಂ
ಒಗ್ಗೂಡಿದತ್ತು. ಗಾಂಧೀಜಿಯುಂ ಪ್ರಥಮತಃ
ಧನ್ವಂತರಿ ತಾನಾದರ್ ರೋಗಿಯ ಚಿಕಿತ್ಸೆಗೆ.
ಪತಿಯ ಶುಶ್ರೂಷೆಯನತಿ ಪ್ರೇಮದಿಂ ಅಮಿತ
ಶ್ರದ್ಧೆಯಿಂ ನಡೆಸಿರೆ ದೈವಾನುಕೂಲನೊದವಿ
ಅದೃಷ್ಟವಶದಿಂದೆ ರೋಗ ಹರಿದುದು ಮಂತ್ರ
ಮಾಯದಾಟದೊಲ್. ಗಾಂಧೀಜಿ ದಂಪತಿಗಳ್
ಆನಂದವಾರ್ಧಿಯಲಿ ಮುಳುಗೆದ್ದು ತೇಲಿದರ್
ಮನಃಚಿತ್ತ ಮತ್ತಾಗುವನ್ನ. ತದನಂತರಂ
ಸತಿ ಪತಿಗಳ್ ಮನವಿಟ್ಟರ್ ಪ್ರಕೃತಿ ಚಿಕಿತ್ಸೆಯಲಿ.

ಆಶ್ರಮಿಯ ಸಂಜೀವನಂ ನಳನಳಿಸಿದುದು
ವಸಂತೋದಯದಿ ಮಾಂದಳಿರ ಸೊಂಪು ಪೆರ್ಚುವ
ಮಾಸ್ಕಿಯಲಿ. ನೀಲಿಮಾ ನಭೋಂಗಣದ ತಾರಕಿತ
ಸೌಂದರ್ಯನಿಧಿ ಜಾಜ್ವಲ್ಯಮಪ್ಪಂತೆ, ನವ
ವಿಭಾವರಿಯ ಸಂಪದ ಚಂದ್ರೋದಯದ ದಿವ್ಯ

ಪ್ರಭೆಯಿಂ ತೊಳಗಿ ಬೆಳಗುವ್ರೊಲ್ ಸತ್ಯ ಸೌಂದರ್ಯ
ರಾಶಿಯಲಿ ಮೆರೆದತ್ತು. ಸಹ ಕಾರ್ಯಕರ್ತರೆನೆ
ಆಗಮಿಸಿದನೇಕ ಮಿತ್ರ ಬಂಧುಗಳ್ ಮೇಣ್
ವಟು ಜನರ್ ಆಶ್ರಮಕ್ಕೈದರ್ ಸಹಜೀವನದ
ಪುಣ್ಯಯೋಗಕೆ. ಒಮ್ಮನದೊಮ್ಮತದಿಂ ಎಲ್ಲ
ವಗೆಯು ಕಾರ್ಯಕಾರಣದಲಿ ಮುಂದ್ಯೈವರ ಕೂಟ,
ಮಹಾಕಾಂಕ್ಷೆಯು ಮಹತ್ತರ ಕಾರ್ಯದ ಹೃದಂ.
ದೀರ್ಘಚಿಂತನಾಲಹರಿಯು ಪಾತ್ರದಲಿ ದಿವ್ಯ
ಸಾಮಾಜಿಕ ಕಲ್ಮಷ ಮೇಣ್ ರಾಜಕೀಯದ
ಕಲ್ಮಷ ಮತ್ತಂ ವರ್ಣಭೇದ ನೀತಿಯು ಕ್ರೂರ
ನಿಷ್ಠುರ ವಗೆಯು ಧೋರಣೆ ಬಡತನದ ವಿರುದ್ಧ
ಹೋರಾಟ ಧೃತಿ ಎಲ್ಲವುಂ ಸಮ್ಮಿಳಿತವಿರೆ
ಕಾರ್ಯಕಲಾಪಗಳಿಂಗೆ ಕೊರವಿಲ್ಲ. ನೊಂದವರ್
ಬೆಂದವರ್ ದಿಕ್ಕೆಟ್ಟವರ್ ಯಾವತ್ಕಾಲಂ
ಬರುತಿರೆ ಹಸಿಗಣ್ಣಾಗಿ ನಿತ್ಯ ಸಮಸ್ಯೆಗಳ
ಸುರಿಮಳೆಯೆ ! ಗಾಂಧೀಜಿಯು ಭುಜ ಭಾರವಂತಿರೆ
ಮಡದಿ ಕಸ್ತೂರಿ ಬಾ ಶಿರೋಭಾರವೇ ಬೇರೆ.
ಮಾತೃಪದದ ಹಿರಿಮೆ ಭುವನ ಹೃದಯದಿ ಪರಮ
ಪ್ರೇಮದ ವಿದ್ಯುತ್ ಪ್ರವಾಹವಂ ಚೋದಿಸುತೆ
ಚಿರ ಮಧುರರಸಲಹರಿಯನು ಹರಿಸಿ ಮನೋಲ್ಲಾಸ
ನಿಧಿಯೈದಿದ ಮಾತಾಮಯಿ. ಅತಿ ಪರಿಶ್ರಮದಿಂ
ಶರೀರ ಬಳಲಿದೊಡಾತ್ಮಶಕ್ತಿಯದು ಬಳಲದು.

ಆಗಳಾ ಸತ್ಯ ಸಾಕ್ಷಾತ್ಕಾರದಿಂ ನಿತ್ಯ
ಸಮುಜ್ವಲ ಜ್ಯೋತಿರ್ಕಿರಣಂಗಳ್ ಉದ್ಭವಿಸಿ

→

ಮನಂಗೊಳೆ ನವಸಪ್ತಸ್ವರಶಾಲಿನಿಯೆನಿಸಿ
ಬಾಳ್ ಬದುಕು ಸುರಸುಂದರವಾಯ್ತು. ಮಹಾತ್ಮ
ಗಾಂಧೀಜಿ ಮುಂದೆ ತಮ್ಮಯ ಆತ್ಮಕತೆಯಲ್ಲಿ :
ದಾಂಪತ್ಯ ಜೀವನದ ವಿಷಯದೊಳ್ "ಮದುವೆಯಿಂ
ಪತ್ನಿಯು ದಾಸಿಯಲ್ಲಂ. ಪತಿಯನರಿತು ಸರ್ವತ್ರ
ತಮ್ಮ ಹಕ್ಕು, ಬಾಧ್ಯತೆಯೊಳ್ ಕಾರ್ಯಭಾರಮುಂ
ಹಂಚಿಕೊಂಬುವ ಪರಮ ಸಹಚರಿ. ಸಸ್ನೇಹಮಯಿ.
ದಾಂಪತ್ಯದೊಳ್ ಮೇಲು ಕೀಳಿಲ್ಲ. ಈರ್ವರುಂ
ಸರಿಸಮಾನರ್" ಎಂದಿಹರ್ ಆತ್ಮ ಪ್ರೇಮವಂ
ಚೆಲ್ಲಿಸೂಸುತೆ.

ಆಫ್ರಿಕಾ ದೇಶದ ಪ್ರಜಾ

ವರ್ಗಕೆ ಸಲಿಸಿದ ಅನುಪಮ ಸೇವೆಯುಂ ಮೆಚ್ಚಿ
ಅಲ್ಲಿನ ಜನತತಿಯುಂ ಆತ್ಮ ಸಂತೃಪ್ತಿಯಿಂ
ಭಕ್ತಿಗೌರವಗಳಿಂ ಇತ್ತ ಬಿರುದು 'ಮಹಾತ್ಮ'
ಅನ್ವರ್ಥ ನಾಮಧೇಯವಾಗಿ ಚಿರಸ್ಥಾಯೀ
ಸ್ಥಿತಿಯಲುಳಿದು ಕೊನೆವರಂ ವಿಶ್ವವಿಖ್ಯಾತ
ಕೀರ್ತಿ ಶಿಖರವಂ ಏರಿ 'ಮಹಾತ್ಮ ಗಾಂಧೀಜಿ'
ಎಂಬುದದು ಸುಪ್ರಸಿದ್ಧವಾಗಿ ಅಮರತ್ವಂ
ಪಡೆದ ಶ್ರೀಮಂತ ಚೇತನ ದಿವ್ಯ ಧೀಮಂತ
ಭಾವನೆಗಳ ಗಣಿಯಾದ ಮಹಾತ್ಮರ ಜೀವನ
ಕ್ರಮವಂ ಅನುಸರಿಸಿದ ಕಸ್ತೂರಿ·ಬಾರವರ
ಪರಮ ಚೇತನಂ ಹೊಂಬೆಳಕಾಗಿ ಮನಃಪುಷ್ಪ
ಅರಳಿ ದಳವಿರಿದು ಗಗನಕ್ಕೇರ್ದು ಧನ್ಯವಾಯ್ತು. !
ಅಸಂಗ್ರಹ-ಅಪರಿಗ್ರಹಗಳಲ್ಲಿ ಪಕ್ಕಾಗಿ

→

ಆಸೆ ಪ್ರತ್ಯಾಸೆಗಳ ತೊರೆದು ಕಾಮುಕಾಮನೆಯಂ
ತುಚ್ಛೀಕರಿಸಿದ ಮಾತಾಮಯಿ ಕಸ್ತೂರಿ ಬಾ !
ದೀನ ದಲಿತರಲಿ ಕನಿಕರಿಸಿ ಸಾಮಾಜಿಕರ
ಸೇವೆಯಂ ಆತ್ಮತೋಷದಿಂಗೈದ ರಮಣೀಮಣಿ !

ಅತ್ತಲಾ ಬ್ರಿಟಿಷ್ ಪ್ರಭುತ್ವದ ಇಕ್ಕಳದಿ
ಸಿಲ್ಕಿದ ಪರಮ ಭಾರತೀಯರ್ ದಿನನಿಚ್ಚಂ
ಸಂಕಷ್ಟ ಸಂಕಟಗಳ ರಣಗೋಳಿನ ಘೋರ
ಕಾಳಾಗ್ನಿಯಲಿ ಸುಟ್ಟುರಿಯುತಿರಲ್ ಅಲ್ಲಿಂದೆ
ಬ್ರಿಟಿಷ್ ಪ್ರಭುತ್ವದ ಬಿಗಿಗಟ್ಟುನಿಟ್ಟುಗಳ
ಅಸಹ್ಯಕರ ಆಳ್ವಿಕೆಯಲಿ ಹಿಂಡಿ ಹಿಪ್ಪೆ ಕ್ಷುದ್ರತೆ,
ಗುಂಡಿಟ್ಟು ಕೊಲ್ವ ಕ್ರೂರತೆ, ತಿರಸ್ಕಾರ ಧೋರಣೆ
ತೀವ್ರ ಪೆರ್ಚುತಲಿರ್ದ ಅವಧರಿಸ ಭಂಗವಂ
ಉಲ್ಲೇಖಿತ ಪತ್ರಮಾಲೆಯುಂ ಬರೆವುದು ಅನು
ದಿನಂ. ಆರ್ಥಿಕದಾರಿದ್ರ್ಯ, ಅಕ್ಷರದಾರಿದ್ರ್ಯ
ಜ್ಞಾನದಾರಿದ್ರ್ಯ, ಸ್ವಾತಂತ್ರ್ಯದಾರಿದ್ರ್ಯಗಳ
ಉಪಟಳವನುಂ ಸಹಿಸಲಸಾಧ್ಯವಿರೆ ಸಂಕಟ-
ಸಂಕಷ್ಟವನೊರೆಯುತೆ ಗೋಪಾಲಕೃಷ್ಣ ಗೋ-
ಖಲೆಯವರ್ "ಈಗಳಿಲ್ಲಿ ನಿಮ್ಮವಶ್ಯಕತೆಯುಂ
ಬಹಳವಿರ್ಪುದು. ರಾಷ್ಟ್ರದ ಗೋಳಂ ತೊಡೆಯುವೊಡೆ
ನೀನೀಗಳ್ತೆ ಇಲ್ಲಿಗೈತಂದೆಮ್ಮೊಡಗೂಡಿ
ಕಾರ್ಯ ನಿರ್ವಹಿಪುದು" ಎಂಬ ಕಳಕಳಿಯ ಕರೆ
ನೀಡಿದರ್ ತಮ್ಮೊಂದು ಸುದೀರ್ಘತರ ಪತ್ರದೊಳ್.
ಬ್ರಿಟಿಷರ ಧೂರ್ತತನವನೆದುರಿಸಿ ರಾಷ್ಟ್ರೀಯ
ದುರ್ದೆಸೆಯನಳಿಸುವೊಂದು ಸಂಯೋಜನೆಯೆಂತು

→

ಕೈಗೂಡಿಪುದೆಂಬ ನಲ್ ಚಿಂತನೆಯು ಬಲಿ ಪಲಿ
ಸೆರೆಸಿಲ್ಕಿ ಮನಮಥಿಸಿಮಥಿಸಿ ನೆರೆ ಮುಳುಗಿದರ್
ಗಾಂಧೀಜಿ. ಸಂಯೋಜನೆಯುಂ ರೂಪಿಸಿಕೊಳ್ವ
ದಿಶೆಯೊಳೆನಿತು ಜಾನಿಸಿದೊಡಂ ಮುಗಿಯದ ಚಿಂತೆ.
ಬ್ರಿಟಿಷರೆನೆ ಸಾಮಾನ್ಯವಲ್ಲಂ. ರಣಯುದ್ಧ
ಕಾಂಡದಲಿ ವೀರಮಲ್ಲರಿರ್ದ ಕಡುದರ್ಪದ
ಜೋದರಂ ಸರಿದಾರಿಗೆ ತರ್ಪುದತಿ ವಿಶೇಷ
ಎನಿಸಿಯುಂ ತಮ್ಮ ಕರ್ತವ್ಯಭಾರಮಂ ನೆನೆನೆನೆದು
ಗಾಂಧೀಜಿ ರಾಷ್ಟ್ರೀಯ ಕಾರ್ಯಕರ್ತರ ಕರೆಗೆ
ಓಗೊಟ್ಟರ್ ಭಾರತ ಜನನಿಗೆ ತಲೆಯುಂ ಮಣಿದು.
ಆತುರಾತುರಕಾತರಂಗಳ್ ಪೆರಸಿದ ಮನ
ಮತಿಗಳ್ ಎರೆಂಕೆಯನೊದರಿ ಪಾರ್ದುವಾಗಳ್ತೆ
ಭಾರತ ಧರಿತ್ರಿಯ ಸುರಮ್ಯಹೃದಯಾಬ್ಧಿಯ
ಸ್ವರ್ಣಕಲಶ ಪಾತ್ರೆಗೆ. ಗಾಂಧೀಜಿಯ ಕುಟುಂಬ
ಮಾತೃಭೂಮಿಯ ದಿವ್ಯದರ್ಶನಾಕಾಂಕ್ಷೆಯಲಿ
ಅಣಿಗೊಂಡುದು ಪೊರಡಲ್. ಆಗಳೀಂ ಆಫ್ರಿಕದ
ಜನರಾಶಿಯ ಮನೋಗತಿಯಲಿ ಮೂಡಿದ ಕರುಣ
ಕಾತರಂ? ಬಹುಕಾಲದ ನೇಹದ ಪ್ರೀಣಿತೀ
ಆತ್ಮೀಯ ಅನುಬಂಧಮಂ ಕಡಿದುಕೊಳೆ ಒಡಲ
ಸಂಕಟಂ ಭುಗಿಲೆದ್ದು ಬಂಡೆಳ್ದು ಬಂದರಾ
ಗಾಂಧೀ ದಂಪತಿಗಳ ಪರಮಪರ್ಶನಂ ಬಯಸಿ.
ಪರಸ್ಪರ ಸಂದರ್ಶನೀಯಮಾದ ದರ್ಶನ
ಲಾಭದಲಿ ಸುಖದುಃಖಗಳ ಹೊಳೆಯೆ ಹರಿದತ್ತು.
ಇಬ್ಬಣದಲಿ ಆತ್ಮದೈಸಿರಿಯುಂ ಉಕ್ಕುಕ್ಕಿ
ಹರಿದಂತೆಪ್ರೊಲ್. ಎಲ್ಲರಂ ನಕ್ಕು ನಗಿಸಿ ಮಿಗೆ

ಸಲ್ವಾತುಗಳನಾಡಿದರ್, ಹರಸಿ ಬೀಳ್ಕೊಳಿಸಿದರ್,
ಅನನ್ಯ ಪ್ರೇಮದಿಂ ಗಾಂಧೀಜಿ ದಂಪತಿಗಳ್.

ಸಾವಿರದೊಂಭೈನೂರ ಹದಿನಾಲ್ಕನೆಯ ಇಸವಿ
ಜುಲೈ ಹದಿನೆಂಟನೆಯ ತೇದಿ. ದಕ್ಷಿಣ ಆಫ್ರಿಕಾ
ಖಂಡವಂ ಬಿಟ್ಟು ಭಾರತ ಭುವಿಗೆ ಪಿಮ್ಮರಳುವ
ದಿನ ! ಅಂದಿಂದಿನ ಜನಾನುರಾಗಿ ಹೃದಯ
ಸುಖದುಃಖಗಳನುಂಡು ಸ್ನೇಹರಸಮಂ ಪೀರ್ದು
ಮೈದುಂಬಿದ ಗೆಳೆತನಂ ಬದಿಗೊತ್ತಿ ಪೋಪುದೆನೆ
ಹೃತ್ಕಲಶ ಭಾರಾತಿಭಾರಂ. ಸತೀಮಣಿ
ಕಸ್ತೂರಿ ಬಾ ಗಳಿಸಿದ ಜನಾನುರಾಗವದು
ಅಪಾರನೆ. ಒಡವೆ ವಸ್ತ್ರಗಳ ಕೈಗಾಣಿಕೆಯ
ಸಹಿತ ಬಂದರು ಜನರ್ ತಂಡೋಪತಂಡದಲಿ.
ದ್ರವ್ಯರೂಪದಲ್ಲೈದ ಕೈಗಾಣಿಕೆಯುಂ ಲಕ್ಷ
ರೂಪಾಯಿಗಳಿಗೆ ಏರಿ ಒದವಿವತ್ತು. ಬೇಡ
ಬೇಡೆಂದೊರೆದೊಡಂ ಕೇಳರಾ ಜನಕೋಟಿ.
ಕೈಮುಗಿದು ಕಾಲ್ಪಿಡಿದು ಹರಸಿ ಕಾಣಿಕೆಗಳಂ
ಈಯುದೆಯೆ ಪೋಗರ್. ಕಡುದುಃಖದ ಕಂಠಂ
ಬಿಗಿದು ಗದ್ಗದಿಸುತಿರೆ ಧ್ವನಿ, ತೊಯ್ದುವು ನಯನ
ದ್ವಯಗಳ್. ಅತುಲ ಪ್ರೇಮದಿಂ ಬೀಳ್ಕೊಡಿಗೆಯುಂ
ಸಾದರ್ಗೈದು ಜನಗಣಮನ ತಣಿವನ್ನ. ನೆರೆಪ್ರೀತಿ
ಗೌರವ ವಿಶ್ವಾಸಗಳ್ ರಂಜಿಸಿದುವು ಎಲ್ಲರ
ಪ್ರೇಮಮಯ ಬೀಳ್ಕೊಡಿಗೆಯ ಸಮಾರಂಭದಲಿ.
ಸ್ನೇಹಕೂಟದೊಳ್ ಹರಿದುದು ದುಃಖಾಶ್ರುಜಲ-
ನುಣ್ಗದಪುಗಳ ಮೇಲೆ. ಕರವಸ್ತ್ರ ಹೀರಿದುದು
ಕಂಬನಿಯನಿನಿದಿಸಿದಾಗಿ. ಸುಜನ ಪ್ರಿಯತೆಯಲಿ →

ರಾಗಾರುಣತಾಸಂ ಮಿಂಚಿದುದು ಮಿಂಚಿನಿಂದೆಲ್.
ಕೈಗಾಣಿಕೆಯಿತ್ತೈದ ದ್ರವ್ಯವಂ ಸಮಾಜದ
ಕಾರ್ಯಕ್ರಮಂಗಳುಪಯೋಗಕೆ ತಗುವ ತೆರದಿ
ಇಡಿಗಂಟಿನೆ ಹೂಡಿದರ್ ಆರ್ಥಿಕ ಕೋಠಿಯಲಿ.
ಅಪರಿಗ್ರಹ-ಅಸಂಗ್ರಹಗಳ ನಿತ್ಯ ನೇಮದೊಳ್
ಸಂಜೀವನಾನುಭವ ಘನಿಸಿರೆ ಮಹರ್ಷಿಯು
ಬದುಕಿನಲಿ ಆಳನೀಳವಂ ಅರಿದು ಮುಳುಂಗಿ
ಅಗ್ನಿಧಾಮದಿ ಬೆಂದು ಪುಟವಿಟ್ಟ ಮಿಸುನಿಯೈದ
ಮಹಾತ್ಮ ಗಾಂಧೀಜಿ ದಂಪತಿಗಳೊಪ್ಪ್ರದಿ
ಪೊರಡುವ ದಿವಸವದು ಬಳಿ ಸಾರಿ ಬರುತಿರಲ್
ಹೃತ್ ಕಲಶ ಭಾರಾತಿಭಾರಂ. ಸತೀಮಣಿ
ಕಸ್ತೂರಿ ಬಾ ಗಳಿಸಿದ ಜನಾನುರಾಗವದು
ಪತಿಗಿಂ ಮಿಗಿಲು. ಅಮೂಲ್ಯ ಸೇವೆಯುಂ ಪುಣ್ಯ
ಫಲಪ್ರದಮಾದತ್ತು ಸ್ನೇಹಾನುಬಂಧದಲಿ.
ಗಾಂಧೀಜಿ ದಂಪತಿಗಳುಂ ಅನನ್ಯಪ್ರೀತಿಯ
ಬೀಳ್ಕೊಡಿಗೆಯಿಂ ಆಫ್ರಿಕಾ ದೇಶಮಂ ಬಿಟ್ಟು
ಜಹಜು ಹತ್ತಿದರ್ ಭಾರತ ವರ್ಷಾಭಿಮುಖಿ
ಪಯಣಂ ಕೈಕೊಂಡು. ಸಹಸ್ರಸಹಸ್ರತಮ
ಅಭಿಮಾನಿಗಳ್ ಮುಗಿದ ಕೈಗಳ್ ಇರ್ವನಿತರೊಳ್
ಜಹಜು ಬಹುದೂರ ಸಾಗಿದುದು ಸಾಗರದ ಜಲ
ರಾಶಿಯಲೆಗಳ ಮೇಲೆ ತೇಲಿ.

ಭಾರತ ಜನನಿ

ಸಾನುರಾಗದಿಂ ತನ್ನ ಪ್ರಿಯಕುವರ ಮದನ
ಮೋಹನ ಗಾಂಧಿಯುಂ ಸಕುಟುಂಬಿಯಾಗಿ ಮರಳಿಬಹ
ದಿನವುಂ ನಿರೀಕ್ಷಣೆಯಲಿರುತಿರೆ ತೋಷದಿಂ ನ್ಯೈ →

ಮನಂ ಪುಳಕವಾದತ್ತು. ದಕ್ಷಿಣ ಆಫ್ರಿಕಾದೊಳ್
ಮಹತ್ತರ ಕಾರ್ಯಮಂ ನಿರ್ವಹಿಸಿ ದೀನಬಂಧು
ಎಂದೆನಿಸಿ, 'ಮಹಾತ್ಮ' ಬಿರುದಂ ಗಳಿಸಿ ತಾನು
ಸೇವೆಗೈತರುತಿಹ ಕುಮಾರನಂ ಆನಂದ
ಬಾಷ್ಪ ಉಕ್ಕಿ ಆತ್ಮೀಯ ಪ್ರೇಮದಿಂ ಶ್ರದ್ಧಾ
ಗೌರವದಿಂ ತುಂಬಿ ಹೃದಯ ಬಿರಿಯುವಂತಿರಲ್
ಹರ್ಷಘೋಷಂಗೈದು ಪೂಮಾಲೆಯನರ್ಪಿಸಿ
ಸ್ವಾಗತಿಸಿದಳ್ ಭಾರತ ಜನನಿ. ಆವಾವ
ಲೋಕದ ಜನವೊ ಎನೆ ಬೃಹದ್ ಜನರಾಶಿಯೆ
ನೆರೆದತ್ತು ಗಾಂಧಿದಂಪತಿಗಳಂ ಸ್ವಾಗತಿಸೆ.
ಬೆಳ್ಗುದುರೆಗಳ ಕೋಚ್ ಗಾಡಿಯೊಳ್ ಕುಳ್ಳಿರಿಸಿ
ಮೆರವಣಿಗೆಯಲಿ ಕರೆದೊಯ್ದರ್ ಬಿಡದಿಯ ಕುಟೀರಕೆ.
ಶ್ವೇತ ವರ್ಣೀಯರ ನೋಳ್ಪ ಕಂಗಳ್ ಬೆಕ್ಕಸ
ಬಡುವಂತೆ! ಮೇಣ್ ಕಟ್ಟುಸಿರ್ ತಿಣುಕುವಂತೆ.

ಗಾಂಧೀಜಿಯುಂ ರಾಷ್ಟ್ರ ಸೇವೆಯಂ ಕೈಕೊಳ್ಳೆ
ಆಶ್ರಮದ ಜೀವನಮೆ ಉತ್ತಮವೆನಿಸೆ ತಮ್ಮ
ಸಂಜೀವನೋಚಿತ ಕುಟಿಯೊಂದಂ ನಿರ್ಮಿಸಲ್
ನೆಲ್ದಾಣಕಾಗಿ ಅಲ್ಲಿ ಇಲ್ಲಿ ಅಲೆದು ಪುಡುಕಿ
ಎಲ್ಲಿಯುಂ ಮನವೊಪ್ಪದಿರಲ್ಕೈತಂದರ್ ತಮ್ಮ
ಪರಿವಾರದೊಡಂಗೂಡಿ ಅಹಮ್ಮದಾಬಾದಿಗೆ.
ಸವಿಗಾಳಿ ಸುಯ್ಯುಯ್ದು ಬೀಸಿಪುದು ದಶದಿಶೆಯ
ತನಿಯುಗುವ ನರುಗಂಪನು ತರುಬಿ ತಂದೆರೆಚಿ.
ಪಚ್ಚೆ ಪರ್ಣಾರ್ಣವದಲಿ ವಿವಿಧ ತಳಿರ್ಗಳು
ವರ್ಣವರ್ಣಾಂತು ನಳನಳಿಸಿ ರಂಜಿಸಿದತ್ತು

→

ಭೂಮಿಯಲಿ ಶವಗಳ ಬಣಂಬೆಯೊಟ್ಟಿ ! ಜನ-ಜನ-
ಜನವೇ ಜನ ! ಪಾರತಂತ್ರ್ಯದ ಬಾಳಿಗಿಂ ಸಾವು
ಲೇಸೆಂಬ ನೆಚ್ಚಿನಲಿ ಓಡೋಡಿ ಬಂದಪರ್ !
ಓರ್ವನುರುಳಿದೊಡೆ ಹತ್ತಾಗಿ ಮುನ್ನುಗ್ಗುವುದು
ಜನರಾಶಿ ! ಮಹಾತ್ಮ ಗಾಂಧೀಜಿಯುಂ ನೀಡಿದ
"ಮಾಡಿ-ಮಡಿ" ಆದೇಶವಂ ಶಿರೋದೇಶದೊಳ್
ಧರಿಸಿ. ಪೆಂಗಳಿಯರ್ ಪುರುಷವರ್ಗಮುಂ ವಿರಾರಿ
ಮುಂದೈದರ್ ಕೊಂಕಳ ಎಳೆ ಮಕ್ಕಳ ಸಹಿತ. ಸತಿ
ಕಸ್ತೂರಿ ಬಾ ಸ್ವಾತಂತ್ರ್ಯಯಜ್ಞದ ವೇದಿಯುಂ
ಏರಿ ನಿಲ್ಲಲಾಕ್ಷಣಮೆ ಪೋಲೀಸರ ಭೀಕರ
ಹಿರಿದಂಡು ಮುತ್ತಿದುದು ಕಸ್ತೂರಿ ಬಾರವರಂ !
ರಾಷ್ಟ್ರೀಯ ಪೋಲೀಸ್ ಅಧಿಕಾರಿ ಪೈಬಾಗಿ
ಕೈಮುಗಿದು "ಅಮ್ಮಾತಾಯಿ ! ನಿಮ್ಮಯ ಶರೀರದ
ಸ್ಥಿತಿಯುಂ ಹದಗೆಟ್ಟಿಹುದೀಗಳ್ತೆ. ಜೇಲಿನ
ವಾಸಮಂ ನೀಂ ತಾಳಲಾರಿರಿ. ಮತ್ತೆ ಕೈ
ಮುಗಿದು ಬೇಳ್ಪೆನಾಂ. ನೀವಿಂದು ಪಿಂದುಳಿದು ಈ
ರಾಷ್ಟ್ರದಾ ಅನುಪಮ ದ್ರವ್ಯವೆನೆ ಆಶ್ರಮ ಸುಖ
ವಾಸದೊಳ್ ಶಾಂತಿಯಿಂದಿರ್ಪುದೊಳ್ಳಿತು ಇದುಂ
ತೀವ್ರತರ ಕಠಿಣ ತಮಗೆ !"

ಆದೊಡೇಂ ಬೆಂಗಡೆ-
ಮುಂಗಡೆ-ಎಡಗಡೆ-ಬಲಗಡೆ ಎಲ್ಲೆಡೆಗಳಲ್ಲಿ
ದಿಗ್ಭಿತ್ತಿಗಳ ಬೆಸುಗೆ ಬಿರಿಪೊಲ್ ಒಕ್ಕೊರಲಿಂದೆ
ಪೊಣ್ಮುತಲಿಹ 'ವಂದೇಮಾತರಂ'! ಝೇಂಕಾರ
ಬಿಗಿಗಟ್ಟುವುದು ಕಾಂಗ್ರೆಸ್ಸಿನ ಧ್ಯೇಯಘೋಷಣೆಗೆ

→

ಮೇಣ್ ರಾಷ್ಟ್ರನಾಯಕ, ಪತಿವರ್ಯ ಮಹಾತ್ಮ
ಗಾಂಧೀಜಿಯ ಸ್ವಾತಂತ್ರ್ಯಯಜ್ಞವೇದಿಕೆಗೆ.
ಕಸ್ತೂರಿ ಬಾ ಅಧಿಕಾರಿಯ ಬೇಡಿಕೆಯನಿನಿತು
ಮಾನಿಸದೆ ಮನವೆ ರಾಷ್ಟ್ರಮಾತೆಗೆ ನಮಿಸುತ್ತೆ
ವಂದೇಮಾತರಂ ಘೋಷಣೆಗೆ ದನಿಗೂಡಿದರ್
ತನುಮನಗಳೊಂದಾಗಿ. ಪರಮ ಸಾಧ್ವಿಯ ದೇಹ
ಸ್ಥಿತಿಯುಂ ಉತ್ತಮವಿರದಕಾರಣಂ ರಾಜ್ಯ
ಪೋಲೀಸರೆದೆಯಲಿ ಅಳುಕು. ಬ್ರಿಟಿಷರೆರ್ದೆಯ
ಕರಂಡವಲಿ ಕಾರುಣ್ಯ ದ್ರವ್ಯಕೆಡೆಯಿಲ್ಲದಿರೆ
ಕಸ್ತೂರಿ ಬಾರವರಂ ನಿರ್ದಾಕ್ಷಿಣ್ಯದಿಂದಲಿ
ತಳ್ಳಿದರ್ ಜೇಲಿನ ಒಳಾಂತರ್ಗರ್ಭಗುಡಿಗೆ.
ಕಾಂಗ್ರೆಸ್ ಹಿರಿಯ ಕಾರ್ಯಕರ್ತರಂ ಸೆರೆಪಿಡಿದು
ಕೂಡಿರುತಿರೆ ಕಿರಿಯ ಸ್ವಯಂ ಸೇವಕರಿಂಗೆ
ಮಾರ್ಗದರ್ಶನ ಮಾಳ್ಪರಿಲ್ಲೆನಿಸುತೆ ತನ್ನ
ಮನದೊಳ್ ಮರುಗುವರ್ ಮಾತಾಮಯಿ ಕಸ್ತೂರಿ ಬಾ.
ರಾಷ್ಟ್ರದ್ಯಂತ ಅಲ್ಲೋಲಕಲ್ಲೋಲವಾಗಿ
ಆಲೋಡಿತ ಬದುಕು. ಜೀವನ ಶಾಂತಿಯುಂ ದೂರ
ದೂರವೇ. ಅರಾಜಕತೆ- ಅವ್ಯವಸ್ಥೆಗಳ್ ನೆರೆ
ನೆರೆದೊಪ್ಪಿರೆ ಬಿಳಿಯರಿಗೂ ತಲೆಭಾರವೆನಿಪ್ಪ
ಕಠಿಣ ಸಂಕಟ ಪರಿಸ್ಥಿತಿ ರಾಷ್ಟ್ರದೊಳ್ ; ಗಳಿಗೆ
ಗಳಿಗೆಯುಂ ಅಮಿತ ದುಃಖಸಂಕಟದ ಸುಳಿಯಲಿ
ಮುಳುಗಿ ಕೊಚ್ಚಿ ಹೋಪರ್. ರಾಷ್ಟ್ರೀಯ ಪರಿಸ್ಥಿತಿ
ಎಂತೆಂತು ಮಾತಾಮಯಿ ಕಸ್ತೂರಿ ಬಾರವರ
ದೇಹಸ್ಥಿತಿಯುಂ ಹದಗೆಡುತಲಿರುತಿರ್ದುದು

→

ಸರ್ವಾಂಗ ಸುಂದರಿಯಿಹ ಆಶ್ರಮವದು ಸ್ವರ್ಗ
ಧಾಮದವೋಲ್ ಪಸದನವಾಯ್ತು. ನೆರೆ ಆನಂದ
ಮಠವಾಯ್ತು. ಬೌದ್ಧಿಕ ಸದನವಾಯ್ತು. ರಾಷ್ಟ್ರೀಯ
ಕಾರ್ಯಕರ್ತರ ಕಾರಖಾನೆಯಾಯ್ತು. ಲೋಕದ
ಲೋಗರ್ಗೆ ಮಾದರಿಯದಾಯ್ತು. ಶ್ವೇತ ವರ್ಣದ
ಅಧಿಕಾರಿಗಳ ದರ್ಪ ಧೋರಣೆಯ ಮೇಲೆಸೆವ
ತರ್ಕವಿತರ್ಕಗಳ ಕೂರ್ಗಣೆಯ ಸಾಧನೆಗೊಂದು
ಕಛೇರಿಯುಮಾಯ್ತು. ಮೇಣ್ ಕಸ್ತೂರಿ ಬಾ ರವರ
ಧೀಮಂತಿಕೆಯ ಪುಷ್ಪಮಂಜರಿಯು ದಳವಿರಿದ
ಮೊಲ್ಲೆಯಾಯ್ತು ಮಿಗೆ ಗಂಧಪರಿಮಳಮಂ ಬೀರಿ.
ಗಾಂಧೀಜಿಯ ಸತ್ ಸಾಹಿತ್ಯ ಸೃಷ್ಟಿಗೆ ದೊರೆತ
ಪುಷ್ಟಿಗೆ ಕೊನೆ ಮೊದಲಿಲ್ಲಂ ; ಪರಮ ಮಸಿಯೊರತೆ
ಹರಿದುದು ದಿವಿನಾಗಿ. ಬ್ರಿಟಿಷ್ ಪ್ರಭುತ್ವದ ತಳ
ಪಾಯದ ನಿಡುಗಲ್ಲುಗಳಂ ಸಡಿಲ್ಚುವ ಧೀರ
ಧೀಮಂತ ಸಾಹಿತ್ಯ ರಸ ಸೃಷ್ಟಿಯಾದತ್ತು
ಸಾಬರಮತೀ ಆಶ್ರಮದಲಿ ಪೊಣ್ಮುತಲಿರ್ದ
ಸತ್ಯದ ಕಿರಣಗಳಿಂದೆ. ಗಾಂಧೀಜಿಯ ಪಜ್ಜೆ
ಪಜ್ಜೆಗಳನನುಕರಿಸುತಲಿರ್ದ ಸತೀಮಣಿಯು
ಎನಿತೆನಿತೊ ಬಾರಿ ಲಾಠೀ ಏಟುಗಳಂ ತಿಂದು
ಬಾಸುಂಡೆಯೆಳ್ದು ನೋವುಂಡು ನರಳಿಯುಂ ತಾಂ
ಪಿಂಜರಿಯಲಿಚ್ಛಿಸದ ಧೀರ ರಮಣಿ. ಅದೆನಿತು
ಬಾರಿ ಜೇಲಿನ ಅತಿಥಿಯಾದರೊ, ಕೊನೆಗವರುಂ
ಜೇಲಿನ ಕಡುಕತ್ತಲೆಯ ಕೋಣೆಯಲಿ ನ್ಯೈವಿಟ್ಟು
ಸಗ್ಗಮನಡರ್ದುದು ಭರತ ಮಾತೆಯ ಬಂದನ

→

ವಿಮುಕ್ತಿಯೆ ಗೆಲುವಾಗಿ ! ರಾಷ್ಟ್ರೋದ್ಯಮದ ದಿವ್ಯ
ಕಿಚ್ಚು ದುರ್ದಮನೀಯವಾಗಿರೆ ಎಲ್ಲಿ, ಯಾವೆಡೆ
ಸ್ತ್ರೀ ಕಾರ್ಯಕರ್ತೆಯರ ಕರೆಯದು ಕಿವಿಯಂ
ಪುಗುವುದೋ ತಾನಲ್ಲಿಗುಯ್ದು ಕಾರ್ಯವಾಹಿಸು
ಹುಚ್ಚು ಹೊಳೆಯಲಿ ಕೊಚ್ಚಿ ಪೋದವರ್ ಕಸ್ತೂರಿ
ಬಾ.

ಮೈಯ ನೆತ್ತರಿನ ಕಣಕಣಂ ರಾಷ್ಟ್ರೀಯ
ಸ್ವಾತಂತ್ರ್ಯೋದ್ಯಮದಲಿ ಧೈರ್ಯಸ್ಥೈರ್ಯದಿಂ ಕಿಚ್ಚಿನ
ಕಿಡಿಯೆಬ್ಬಿಸಿ ಸಾರ್ವತ್ರಿಕವಾಗಿ ಬೆಳೆದಿರುತಿರೆ
ರಾಷ್ಟ್ರದಾದ್ಯಂತಂ ; ಕಸ್ತೂರಿ ಬಾ ಕಂಗೆಟ್ಟು
ಹಿಂಜರಿದರೆ ? ತನ್ನಯ ಪ್ರಾಣಮಂ ಪಣವಿಟ್ಟು
ಪರಮ ದಿಟ್ಟತನದಿಂ ಮಾಡಿ ಮಡಿದರ್ ಪತಿಯ
ಕಣ್ಮುಂದೆ, ಮಾನಿನಿಯರಿಂಗೆ ಮೇಲ್ಪಂಕ್ತಿಯಾಗಿ.

ಸಾವಿರದೊಂಭೈನೂರ ನಲವತ್ತೆರಡರಲಿ
ಭುಗಿಲೆದ್ದ ಸ್ವಾತಂತ್ರ್ಯ ಚಳವಳಿ "ಭಾರತ ಬಿಟ್ಟು
ತೊಲಗಿ" "ಕ್ವಿಟ್ ಇಂಡಿಯಾ" ಸತ್ಯಾಗ್ರಹದಲ್ಲಿ
ಆಶ್ರಮವಂ ತೊರೆದು ಹಿಂಬಾಲಿಸಿದರ್ ಪತಿಯಂ.
ಭಾರತ ವರ್ಷದಾದ್ಯಂತ ಭುಗಿಲೆದ್ದ ಮಹಾ
ಸ್ವಾತಂತ್ರ್ಯ ಚಳವಳಿಯದು ಕೆಂಜೆಂಕೆಯ ತೆರದಿ
ಕೆನ್ನಾಲಿಗೆಗಳ್ ಚಾಚಿ ಕಬಳಿಸುತಲಿರ್ದುದು
ಕಡು ಕಿಚ್ಚಿನ ಜ್ವಾಲಾವಳಿಯುಂ ಮೀರಿ. ಹಾ !
ಬ್ರಿಟಿಷರ ಭಯಾನಕ ಸುಡುಗೋಲಿಗಳ್ ಗುಡುಗಿ
ಸಹಸ್ರ ಸಹಸ್ರ ನಿರಾಯುಧೀ ಜನ ಮಾನ್ಯರಂ
ಹೊಡೆದುರುಳಿಸಿ ರಕ್ತಾಕ್ತಗೊಳಿಸಿದುದು ಪವಿತ್ರ

→

ಸುಮನೋಹರವಾಗಿ, ಸುಸಮನವಮಾಧುರ್ಯದೈಸಿ
ಚಿತ್ರಕಾರನ ಕುಂಚಕೆ ವೈಯೂಂತಂತೆವೊಲ್.
ಅಲ್ಲಲ್ಲಿ ಎದುರೈದ ಹಾದಿಗರ್ ಮತ್ತಮಾ
ದೀನದಲಿತ ಜನರುಂ ಕಣ್ನೆಟ್ಟು ಮನವಿಟ್ಟು
ಗಾಂಧೀಜಿಯ ಪರಿವಾರಂ ಗಮನಿಸಿ ತಮ್ಮ
ಬುದ್ಧಿ ಬಲಕೀಸು ಕಜ್ಜವನೊರೆಯುತೆ ನೆಚ್ಚಿ
ಕುತೂಹಲದಿಂ ಚಿಂತನಾವೇಶದಿಂ ಕೂಡಿರೆ
ನೋಡಲೈದಲ್ಲಿಗೆ ಬಿಡಿಬಿಡಿಯಾಗಿ. ತಂಡ
ತಂಡವಾಗಿ. ತಮ್ಮೊಂದು ಉಜ್ವಲ ಭವಿಷ್ಯಂ
ನೆನೆದು ಹುರಿಗೊಂಡು ಎಳ ಚಿಂತನ ಮಂಥನಕೆ
ವಿಶೇಷತೆಯನೀಯುತೆ ಬುದ್ಧಿಯಿಲ್ಲಡೆಡೆಗದಂ
ವಿಕ್ಷೇಪಿಸುತೆ, ಮನಸಿನಗೋಚರ ಸ್ವರ್ಗದಲಿ
ವಿಹರಿಸಿ, ನಲ್ ಬದುಕಿನ ದಿವ್ಯಮಂಟಪವನ್ನೆ
ನಿರ್ಮಿಸೆ ನೆರಂಗೂಡಿದರ್ ಗಾಂಧೀಜಿಯ ವಿಮಲ
ವಿಪ್ಲವ ವಿಚಾರದೋಹನೆಗೆ ಸಂತೋಷದಿಂ.
ಆಶ್ರಮದ ನಿರ್ಮಾಣಕಾಗಿ ಆಯ್ದ ತಲದಲಿ
ಸಾಮಾನ್ಯ ಪರ್ಣಕುಟಿಯುಂ ಕಟ್ಟಲ್ ಕೂಡಿದರ್
ಬಹುಮಂದಿ. ಎಲ್ಲೆಡೆಯ ಸಹಾಯಕ ಹಸ್ತಗಳ್
ಕೂಡಿ ಬರೆ, ತನು ಮನ ಧನ ಸಹಾಯವದು ನೆರಂ
ಗೂಡಿದುದು ಹತ್ತು ಕಡೆಯಿಂದೆ. 'ಸಬರಮತೀ
ಆಶ್ರಮ' ಎಂದೆಂಬ ನಾಮ ಫಲಕವಧರಿಸಿ ಮೆರೆದುದು
ವೇದಕಾಲೀನ ಋಷ್ಯಾಶ್ರಮದ ಮಾಳ್ಕೆಯಲಿ.

ಸಬರಮತೀ ಆಶ್ರಮವದು ಮಹಾತ್ಮಾಗಾಂಧೀಜಿ
ಸಂಸಾರ ಮಾತ್ರಕ್ಕೆ ಮೀಸಲೇಂ ? ಗಾಂಧೀಜಿ

→

ವಿಶ್ವರಾಗಾತ್ಮಕ ಕುಟುಂಬಿಯಿರೆ ಸಹಕಾರ್ಯ
ಕರ್ತರುಂ, ಯುವಶ್ರೇಷ್ಠರುಂ, ರಾಷ್ಟ್ರ ಸ್ವಾತಂತ್ರ್ಯ
ಉದ್ಯಮಕೆ ತನುಮನಗುಡುವ ದೇಶಭಕ್ತರುಂ,
ರಾಜನೀತಿ ದುರಂಧರರುಂ ರಾಜಕೀಯ
ಪ್ರವೀಣರುಂ, ಹರಿಜನ ಪ್ರಿಯರುಂ, ಸಾಮಾಜಿಕ
ಸೇವಕರುಂ, ಮಹಿಳಾ ಸುವಿದ್ಯಾ ಪ್ರಚಾರಕರುಂ
ನ್ಯಾಯ ನೀತಿ ಕೋವಿದರುಂ, ಹರಿಜನರುಂ, ಮಿಗೆ
ಎಲ್ಲವಗೆಯ ನೋವುನಿಡಿಗಳನುಂಡು ನೊಂದು
ಸೀರಾದ ದೀನದಲಿತರುಂ ಬಂದಪರ್ ಅನು
ದಿನಂ ಸಾಲ್ಗಟ್ಟಿ. ಎಲ್ಲರ ನಿತ್ಯ ಕುಶಲೋಪರಿ
ಪೋಣಿತರ ವ್ಯವಸ್ಥೆಯ ಭಾರಂ ಕಸ್ತೂರಿ
ಬಾಪನ ಮೇಲೆ. ಪೆತ್ತೊಡಲ ಮಾತೆಯಳ್ಕರೆ
ತೋರ್ದು ಎಲ್ಲರಂ ಕರೆಕರೆದು ಪ್ರೀತಿ ವಿಶ್ವಾಸ
ನೇಹಗಳ ತೆಕ್ಕೆಯಲಿ ಭರಿಸುವರ್ ಸಮಾಧಾನ
ಸಹನೆಗಳ ಅಧಿದೇವಿ ತಾನೈದು! ಆಶ್ರಮದ
ನೀತಿ ನಿಯಮಾವಳಿಯನನುಬೋಧಿಸಲ್ ಪೊಳ್ತು
ಪೊಳ್ತಿನ ಪ್ರಕಾರದೊಳ್ ಪಟ್ಟಿಯಂಗೆಯ್ದು ತಲೆ
ಬಾಗಿಲಿನ ಬಳಿ ನೇತು ಹಾಕಿದರ್ ಗಾಂಧೀಜಿ.
ಆಶ್ರಮ ನಿವಾಸಿಗಳ ಮೇಣೆಲ್ಲ ಹೋಗಿ-ಬಹ
ರಾಷ್ಟ್ರೀಯ ಕಾರ್ಯಕರ್ತರ ಕ್ರಮ.ರಹಿತತೆಯ
ನಿಜಗೊಂಡಣಕೆ ಜ್ಞಾನದೀವಿಯನುರಿಸಿ ಒಳಗಣ್
ತೆರೆಸುವ ಪರಿಕ್ರಮದೊಳಾಶ್ರಮಿಗಳಾಯ ಬದುಕುಂ
ಸುಸುಂದರಮಪ್ಪಂತೆವೊಲ್ ರೂಪಿಸಿದರ್ ಗೊಡ್ಡು
ಮನಕೆ ಕಾಯಕಲ್ಪವನುಗೈಯುವ ಪಾಂಗಿನಲಿ.

→

ಚಣಾಚಣಂ. ಜೇಲಿನ ಕಠಿಣ ರೂಪದ ಬಾಳಿನ
ಗೋಳಿನಂಕದಲಿ ಗೆಯ್ದು ಸೋಲುಣ್ಣುತೆ ಹಣ್ಣು
ಹಣ್ಣಾಗಿ ರುಗ್ಣ ಶಯ್ಯೆಯನಡರ್ದಿದರ್. ದೇಹ
ಸೊರಗಿ ಎಲುಬಿನ ಹಂದರವಾದತ್ತು. ಚಿಕಿತ್ಸೆಯು
ಹಿಡಿಯದು ; ಪಥ್ಯವು ಒಗ್ಗದು. ಜೇಲಿನ ಅಧಿಕಾರಿ
ವರ್ಗಂ ಭಯ ಭೀತಿಯಿಂದಲಿ ಗೊಂದಲದಿ ಸಿಲ್ಕಿ
ಕಳವಳ-ಕಳಕಳಿಯಿಂ ಕಂಗೆಟ್ಟು, ಗಾಂಧೀಜಿ
ಇರುತಿರ್ದ ಆಗಾಖಾನ್ ಅರಮನೆಗೆ ಕಳಿಪುವುದು
ಹಿತವೆನಿಸೆ ಕಸ್ತೂರಿ ಬಾರವರಂ ಅಲ್ಲಿಂದೆ
ಆಗಾಖಾನ್ ಅರಮನೆಗೆ ಕರೆದೊಯ್ದರ್ ವೈದ್ಯರ್.

ತಲೆಬಾಗಿಲೊಳ್ ಎದುರ್ವೈದ ಮಹಾತ್ಮರ್ ಅತೀ
ಆಶ್ಚರ್ಯದಿಂ ಕಣ್ಣರಳಿಸಿ ನುಡಿದರ್ "ಇದೇಂ ?
ನೀನೆ ಕೇಳಿಕೊಂಡ್ಡೈದೆಯೊ ? ಅವರೆ ಕರೆತಂದರೊ ?"
ಆಗಳಾ ಮಡದಿ ನುಡಿವನಿತರೊಳ್ ವೈದ್ಯರೇ
ಮುಂಬರಿದು "ತಾಯಿ ಕೇಳ್ದಿರಿಲ್ಲಂ. ನಾನೆ ಕರೆ
ತಂದೆಂ. ಅವರ ದೇಹಸ್ಥಿತಿ ಕ್ಷೀಣಿತವಿರುತಿರೆ
ತಮ್ಮ ಬಳಿಯುಲಿಪ್ಪುದು ಒಳ್ಳಿತೆಂದಾಂ ಬಯಸಿದೆ."

ಪೆಸರ್ಗೆಂತಂತು ಇರಲಿಲ್ಲವಾ ಆಗಾಖಾನ್
ಅರಮನೆ ! ಕಾಲಕಾಲನ ಕೊಳಕೆಲ್ಲವುಂ ತುಂಬಿ
ಮುಗ್ಗುಲಿನ ವಾಸನೆಯು ಕಳೆಯುದನಿತು ಕಠಿಣಂ.
ಸೊಳ್ಳೆ, ನೊಣ ಗುಂಗುರ ಇಲಿ ಹೆಗ್ಗಣ ತಿಗಣೆಗಳ
ಆವಾಸಸ್ಥಾನಂ. ತಿಗಣೆ ಸೊಳ್ಳೆಗಳ್ ಹಗಲೇ
ಮುತ್ತುವುವು ಇಲ್ಲದಿಹ ನೆತ್ತರಂ ಹೀರಿಕೊಳೆ.
ನಿರ್ಲಕ್ಷ್ಯ ನಿರ್ದಯೆಗಳ ಅನನ್ಯ ಬಂಧಾರ →

ತುಂಬಿ ತುಳುಕುವ ಪ್ರಕಾಂಡಕಾಂಡದಲಿ ರಾಷ್ಟ್ರ
ಭಕ್ತರ ದಿವಿನಾದ ಸೇರ್ಪಡೆ, ಹೀನ ಖೈದಿಗಳೊಲ್.
ವೈದ್ಯೆ ಸುಶೀಲಾನಾಯರ್, ಸರೋಜಿನಿ ನಾಯ್ಡು
ಕಸ್ತೂರಿ ಬಾರವರ ಬಳಿಯಿದ್ದು ಆರೈಕೆಗೆ
ಮನವಿಟ್ಟರ್. ಜೇಲಿನ ಅಧಿಕಾರಿಯ ವಿಶೇಷ
ಪರವಾನಗಿಯುಂ ಇಲ್ಲದೆಯೆ ಹೊರಹಣುಕುವಂತಿಲ್ಲ.
ಮಾತ್ರೆ ಓಷಧಿಯುಂ ಎಟುಕದು. ನೆರೆ ಬೇಡಿಯುಂ
ಕಾಡಿಯುಂ ತಪುವುದೆನೆ ಮಾನಸಿಕ ಹಿಂಸೆಯದು
ದಿನನಿತ್ಯದ ಉಂಬಳಿ. ರಾಷ್ಟ್ರದ ಪರಿಸ್ಥಿತಿಯ
ಮೇಲೆ ಕಣ್ಣು ಹಾಯಿಸಲಾಗದೊಲ್ ಸುತ್ತಮುತ್ತ
ಮುಳ್ಳುತಂತಿಯ ಬೇಲಿ. ಗಾಂಧೀಜಿಯ ಕಿರಿಯ
ಪುತ್ರ ದೇವದಾಸ್ ಗಾಂಧೀ ಆಗಮಿಸಿದರ್ ಜನನಿಯ
ಅಸ್ವಸ್ಥತೆಯಂ ಕೇಳಿ. ಪೆತ್ತಮ್ಮೆಯ ಬಳಿಯೆ
ನಿಲ್ದು ಆರೈಕೆ ಚಿಕಿತ್ಸೆಯಂ ಕೈಕೊಂಡರತಿ
ಶ್ರದ್ದೆಯಿಂ. ಶೈತ್ಯೋಪಚಾರ ಪ್ರಕೃತಿ ಚಿಕಿತ್ಸೆ
ಪಥ್ಯೋಪಚಾರ ಯಾವತ್ಕಾಲಂ ನಡೆದತ್ತು
ಕೊರವಿಲ್ಲದೊಲ್. ಆದೊಡೇಂ, ಕಸ್ತೂರಿಬಾರವರ
ಆತ್ಮಪಕ್ಷಿ ಬಯಸಿರ್ದುದು ಸುದೀರ್ಘ ವಿಶ್ರಾಂತಿ.
ಸುತ್ತಮುತ್ತಲ್ ನೆರೆದ ತಮ್ಮವರ್ ದಯೆ ಕರುಣೆ
ಪ್ರೇಮಗಳ ಮಳೆಯಂ ಸುರಿಯುತಿರ್ದೊಡಂ ಧೂರ್ತ
ವಿಧಿಯೊಗೆದ ಪಾಶ ಪಿಮ್ಮರಳಲುಂಟೆ ? ಕಸ್ತೂರಿ
ಬಾರವರ ದೇಹಸ್ಥಿತಿಯುಂ ಕುಸಿಯುತಿರ್ದುದು
ಇಳೆಯ ಸಂಸಾರಯೋಗಮಂ ದೂರೀಕರಿಸಿ
ಎನಲ್ ಜೀವ ತುಡಿಯುತಿರ್ದುದು ಸುಗಳಿಗೆಗಾಗಿ

→

ಕಾದಿಪ್ಪ ಮಾಳ್ಕೆಯಲಿ. ಗಾಂಧೀಜಿಯುಂ ಮಡದಿ
ಕಸ್ತೂರಿ ಬಾರವರ ಅತಿಮಾನಸ ಪೂಜೆಯಂ
ಅರಿತುಕೊಳುತೆ ಇನ್ನಿಲ್ಲ ಉಳಿಗಾಲನೆಂಬುದಂ
ಮನದೊಳ್ ಬಗೆದು ನಿರ್ಲಿಪ್ತ ನಿರ್ಮೋಹ ನೇಮದಿ
ರಾಮಧ್ಯಾನದಲಿ ಮುಳುಗಿದರ್ ಜೀವನ್ಮುಕ್ತಿಯಂ
ಬಯಸಿ. ಕಸ್ತೂರಿ ಬಾ ಪತಿಸುತರ ಮೋಹಿತರ
ಬಂಧುಗಳ ಆಸೆಯಂ ತೊರೆದು ರಾಮಭಕ್ತಿರಸ
ಪಾನದಲಿ ಮುಳುಗಿ ಮೈಮರೆತಿರ್ದರ್ ಅಪೂರ್ವ
ಸಮಾಧಾನ ಶಾಂತಿಯಂ ಮನಗೊಂಡು. ಕೊನೆಗಾಲ
ಬಳಿಸಾರಿ ಬರೆ ಮನಃಪ್ರಜ್ಞೆಯಿತ್ತು ಹೊರಳಿಸಿ
ಅಂತ್ಯದರ್ಶನಕೆಂತೆಂತು ಎಲ್ಲರ ಕಡೆ ದಿಟ್ಟಿ
ಹರಿಸಿ ನೋಡಿ ಪ್ರಸನ್ನ ಭಾವದಲಿ ಕೇಳಿದರ್
ಮೆಲುಮೆಲ್ಲನೆ ಬಾಯ್ದೆರೆದು "ಬಾಪೂಜಿಯೆಲ್ಲಿ?
ಅಪೂರ್ವ ಅನನ್ಯತರ ಅಸ್ತಮಾನ ಶೋಭೆಯ
ಭಾವ ಹರಡಿರ್ದುದು ಮುಖದಮೇಲೆ. ಗಾಂಧೀಜಿ
ಮೈಬಾಗಿ ನೋಡಿದರ್, ಅಂತ್ಯ ಶಾಂತಿಯಲ್ಲದೆ
ಬೇರೊಂದಿಲ್ಲ. ಮಡದಿಯಂ ಎದೆಯಮೇಲೊರಗಿಸಿ
ಕುಳಿತರ್. ಪತಿಯದರ್ಶನ ಲಾಭದಿಂದರಳಿದುದು
ಸತಿಯ ಮುಖಬಿಂಬ. ಮತ್ತರೆಗಳಿಗೆಯಲಿ ಮುಚ್ಚಿದರ್
ಕಣ್ಗಳಂ. ಕಂಗಳಲಿ ಶೋಕಾಶ್ರು ತುಂಬಿರ್ದ
ಗಾಂಧೀಜಿ ಗದ್ಗದಿತ ಕಂಠದಲಿ ಹಾಡಿದರ್
ರಾಮಧುನಿ 'ರಘುಪತಿ ರಾಘವ ರಾಜಾರಾಂ ಪತಿತ
ಪಾವನ ಸೀತಾರಾಂ" ಒಡನೆ ಸುತ್ತುಮುತ್ತಿನ ದನಿಗಳ್
ಒಗ್ಗೂಡಿ ಹಾಡಿದುವು ಮನೆಯಮಾಡು ಧಿಂಕಿಡುವ

→

ತೆರದಲಿ. ಕಡು ದುಃಖದ ಬಾರ್ತೆ ಹಬ್ಬಿದುದು ಅರೆ
ಗಳಿಗೆಯೊಳ್ ಬಿರುಗಾಳಿ ಬೀಸಿದಂತೆ. ಆಗಳ್
ಜನರಾಶಿ ದುಃಖವಾರ್ಧಿಯುಲಿ ಮುಳುಗಿ ಧಾವಿಸಿ
ಬಂದರಂತ್ಯದರ್ಶನಕೆ. ರಣಗೋಳಿನ ಸೊಲ್ಲದು
ಗಗನಭೇರಿಯಾದತ್ತು ಸಹಸ್ರ ಸಹಸ್ರತರ
ಕಂಠಗಳಲಿ ಸೊಳಗಿ, ಬಿಳಿಯರ ಮೇಲಿನ ಕೋಪ,
ಗಾಂಧೀಜಿಯ ಮೇಲಿನ ಪರಿತಾಪ ಬಗೆಬಗೆಯ
ವೇಶವಾವೇಶದಲಿ ಪೊಣ್ಮಿದುದು ಒಡಲಿನುರಿ.

ಪಾಶ್ಚಿಮಾತ್ಯ ದಿಗ್ಭಿತ್ತಿಯುಲಿ ಪೊನ್ನೇಸರಿನ
ಚಿತೆಯೋ ಎನೆ ಕೆಂಕಮಾಗೆಸೆದುದು ಕನಕ ಕಾಂತಿ.
ಕೆಂಗೆಂಪಿನ ಗುಡಿಗೋಪುರಗಳೆದ್ದುವು ನಭೋ
ಭಿತ್ತಿಯ ಕೆನ್ನೀಲದೇಶದಲಿ. ಒಯ್ಯನೊಯ್ಯನೆಯೆ
ಚಲಿಸುತಿರ್ದುವು ಹೆಮ್ಮುಗಿಲಿನೋಳಿ. ಶತಶದ
ಪಕ್ಷಿ ಸಂಕುಲಂ ಹಾರಾಡಿ ಚೀರಾಡಿ ಭೂಮಿಯ
ಮೇಲೆ ಮುಖ ಮಾಡಿದುವು ದುಃಖ ಸಂಕಟದ ಬಹು
ಜನರ ಸೊಲ್ಲಿನ ಗೋಳನು ಕೇಳಿ. ಕಾಕಾ ಕರಿಸಿ
ಚೀರಿದುವು ಕಾಗೆಗಳ ಹಿಂಡು. ಶ್ವಾನಂಗಳುಂ
ಊಳಿಟ್ಟುವು ಪಶ್ಚಿಮಮುಖಿಯಾಗಿ. ಸುಳಿಗಾಳಿ
ಸುಯ್ದುಯ್ದು ಬೀಸಿವೀಸಿ ಚಿತಾಗ್ನಿಯನುರಿಸಿದಂ
ಧಗಧಗಿಸಿ ಕೆನ್ನಾಲಿಗೆಗಳ್ ಚಾಚಿಚಾಚಿ ನೆಕ್ಕಿ
ನೊಣೆವವೊಲ್.

ಆಗಾಖಾನ್ ಅರಮನೆಯುಲಿ ಮೈವಿಟ್ಟ
ಸತೀಮಣಿ ಕಸ್ತೂರಿ ಬಾರವರ ಪಾರ್ಥಿವ
ಶರೀರಯಷ್ಟಿಗೆ ಅದರ ಮಹಾ ಆವರಣದಲ್ಲಿ

→

ಚಿತೆ ಉರಿದು ದಹಿಸಿದುದು ರಾಷ್ಟ್ರೀಯ ಸ್ಮಾರಕಂ
ತಾನಾಗಿ !

ಓ, ತಾಯೆ ! ನಿನ್ನಮಲ ಚರಿತ್ರೆಗೆ,
ನಿನ್ನ ಪವಿತ್ರ ನಾಮಕೆ, ನಿನ್ನ ಉಜ್ವಲ ಚಿತ್ತ
ಶ್ರೀಗೆ, ನಿನ್ನ ಅನನ್ಯ ಶಾಂತಿ ಸಮಾಧಾನಗಳ
ದಿವ್ಯಾರಾಧನೆಗೆ, ನಿನ್ನ ಸುಹೃದಯದ ವಿಶ್ವ
ವೈಶಾಲ್ಯತೆಗೆ ಕವಯಿತ್ರಿಯ ವಿನಮ್ರ ನಮನಂ !
ಪುನಃ ಪುನಃ ನಮನಂ !

— o —

ಭೋಜರಾಜ

ಮಾಂಧಾತಾ ಚ ಮಹೀಪತಿಃ
ಕೃತಯುಗಾಲಂಕಾರ ಭೂತೋಗತ ಃ
ಸೇತುರ್ಯೇನ ಮಹೋದಧೌ ವಿರಚಿತಃ
ಕ್ವಾಸಾ ದಶಾಸ್ಯಾಂಕತಃ ।
ಅನ್ಯೇಚಾಪಿಯುಧಿಷ್ಠಿರ ಪ್ರಭೃತಃ
ಯತಾದಿವಂ ಭೂಪತೇ
ನೈಕೇನಾಪಿ ಮಂಗತಾ ವಸುಮತೀ
ಮುಂಜ ತ್ವಯಾ ಯಾ ಸ್ಯತಿ ॥

ಹೇ, ಮೃದು ಮಧುರ ರಸಮಯ ರಸಾಲ ರಂಜಿತ
ರಾಗವೇ! ಮನಮೋಹನೀಯ ರಾಗರಸವೇ!
ಛಂದೋಲಯರಹಿತ ಕಮನೀಯ ಕಂಠವೇ!
ಕಾಲಾನುಕಾಲದಿಂ ಬಾಳ್ ಬದುಕಿನ ಕರ್ಮ
ಕಾಂಡದಲಿ ಸುಖದುಃಖದನುಭೋಗದೊಳ್ ನಿನ್ನ
ದಿವ್ಯಕಲಕಂಠಧುನಿ ಹರಿಯಲೀ ಭವದಗಲ
ಶಾಂತರಸವಾಗಿ! ಕಾಲದೇಶಾಂಡಮಂ ಒಡೆದು
ಬ್ರಹ್ಮ ವೀಣೆಯ ತಂತ್ರಿಯಂ ಮಿಡಿಮಿಡಿದು ನಿತ್ಯ
ಅನಂತದ ಜಾಡಿನಲಿ ಲೀಯಮಾನವಾಗಲೀ
ಭವಸಾಗರದ ಭಂಗಮಂ ತೊಳೆಯುವ ಪರಿಯಲಿ.
ರಾಗತಾನಂ ಆನಂದಮೋದದ ಭಾವದಲಿ
ಹರಿಯಲೀ ಭವರೋಗಕೆ ಓಷಧಿಯಾಗಿ!
ಓ,
ರಾಗದುಲಿಯೇ! ಕರುಣ ಕಮನೀಯ ವೈಖರಿಯಲೀ
ರಾಗಾರುಣತಾನದ ಕಥಾನಕವದು ಕುರುಡು
ಕಂಗಳಿಗೆ ಚೆಂಬೆಳಕನೀವ ಮಾಳ್ಕೆಯಲಿ ನೆರೆ

→

ಉಕ್ಕಿ ಹರಿಯಲೀ ಧರೆಯಲಿ ಅನುಭವರಸ ಸೂಸಿ.

ಓ ! ಎನ್ನ ಕಾವ್ಯಕೃತಿ ಕಾಮಿನೀ ! ಅನುರೂಪ ಮೋಹಿನೀ ! ನೀನೇಂ ಬರಿದೆ ಬಂದಪೆಯಾ ಈ ಭವಧಿಯ ರಣಗೋಳಿಗೆ ? ಎಡವಿಡದ ಧ್ಯಾನದಲಿ ತವಿಸಿ ತವಿಸಿ ನಿನ್ನಮಲ ಪಾದ ಪದುಮಗಳಿಗೆ ತಲೆ ಮಣಿದು ಕೈಮುಗಿದು ಸೆರಗೊಡ್ಡಿ ಬೇಡುತಿಹೆ ನಿನ್ನದಯೆಯಂ ಕೋರಿ. ನಿನ್ನ ಸತ್ ಸಂಗವದು ಇಲ್ಲದೆಯೆ ಉಳಿಯ ಬಲ್ಲೆನೆ ಪೇಳ್ ಈ ಭವದಿ ? ನೀನೆನ್ನ ಪ್ರಾಣ. ನೀನೆನ್ನ ಹೃದಯ ದೀಪ್ತಿ. ನೀನೆನ್ನ ಆಜೀವನ ಅನುಪಮ ಸಂಗಾತಿ !

ಪುರಾಣೀಯ ಪರಿಪುಣ್ಯ ಕಾಲಮಾನದೊಳ್ ವರ ಭಾರತ ಸಾಮ್ರಾಜ್ಯ ಸಂಜೀವನೀ ವಾಹಿಯಲಿ ಸಿಂಧುಲ ಮಹಾರಾಜನುಂ ಪೆಸರಾಂತ ಪರಮ ಧೀಮಂತ ವ್ಯಕ್ತಿ ಎಂಬೊಂದು ದಿವ್ಯ ಸತ್ಕೀರ್ತಿ ಮಾಲೆಯ ಧರಿಸಿ ವಿಜೃಂಭಿಸಿದ ವರ ಧನ್ಯಾತ್ಮ ! ಉಜ್ಜಯಿನಿ ದೇಶವದು ಧನಧಾನ್ಯ ಜನ ತುಂಬಿ ಸಕಲ ಸಂಪದ್ಭರಿತಮಾಗಿ ನೆಲೆಗೊಂಡುದುದು ಬ್ರಾಹ್ಮಣೀ ನದಿಯ ತೀರದಲಿ. ಪರ್ವಿತ್ರದರ ಜಸಂ ರಾಜ್ಯದಾದ್ಯಂತ ರಾಕಾ ಶಶಾಂಕನಿಂ ಪರ್ವಿದಾ ತಿಂಗಳ್ ಬೆಳಕಿನ ಸೊದೆಯ ಸೋನೆ ಸೋರ್ದಪೊಲ್ ಬೆಳಗಿದತ್ತು ರಾಜ್ಯಕೋಶಮುಂ ಎನೆ, ಪ್ರೀತಿ ಗೌರವಾಡರದಿಂ ಸ್ನೇಹ ವಿಶ್ವಾಸ ಮೋದದಿಂ ಸೊಗದಿಂದಿರುತಿರ್ದರ್ ಪ್ರಜೆಗಳ್. ಎಲ್ಲಮಿರ್ದೇನಿಲ್ಲದ ಮಾಳ್ಕೆಯಲಿ ರಾಜನ →

ವಂಶೋದ್ಧಾರಕೆ ಸಂತಾನ ಪ್ರಾಪ್ತಿಯಾಗದಿರೆ
ಮಹಾರಾಜನುಂ ತನ್ನೊಳ್ "ಇನ್ನೆ ಬರಮಾನು
ಸತ್ಯವ್ರತಮಂ ಧರ್ಮನಿಷ್ಠೆಯುಂ ಪ್ರಜಾ
ಕ್ಷೇಮಮಂ ಮನಗೊಂಡು ಬಾಳ್ದಿನಗೆ ಇಂತೊಂದು
ದುಃಖ ಸಂಕಟವನಿತ್ತನೇಕೆನಗೆನ್ನ ಶ್ರೀ
ಪ್ರಭು ? ಎಂಬೊಂದು ದುಃಖದೊಳಿರೆ ಮನಗತಿಯುಂ ;
ಪೂಜೆ ವ್ರತಾದಿಗಳ್ ಎಡೆವಿಡದೆಯೆ ನಡೆದುವು
ಕಾಳಿಕಾ ಮಂದಿರದಲಿ. ಆಗಳಾವ ಪುಣ್ಯಫಲ
ಫಲಿಸಿ ದೈವಯೋಗಮುಡರಿ ಬಂದುದೊ ರಾಜ್ಯ
ಲಕ್ಷ್ಮಿಯುಂ ವರದ ಹಸ್ತದಿಂ ಹರಸಿದಳೊ ಎನೆ
ಸುಮುಹೂರ್ತವೊದವಿ ಬಂದು ಷೋಡಶ ಕಳೆಗಳಿಂ
ಬೆಳಗುವ ಸುಪುತ್ರರತ್ನ ಸಂಜನಿಸಿದಂ ಕಣ್
ಬೇಕಾಗಿ. ಸಂಜೀವನರಸ ಯೋಗಕ್ಕಾಗಿ.
ಆಚಂದ್ರಾರ್ಕ ಕೀರ್ತಿ ಪರಿಮಳಮಂ ಪಸರಿಸುವ
ಜ್ಞಾನನಿಧಿಯುಂ ತಾನೈಸಿ. ಅನನ್ಯ ತೇಜದಿಂ
ಪರಿಪೂರ್ಣ್ಯಯೋಗದಿಂ ಕಗ್ಗತ್ತಲೆಯುನಳಿಸಿ
ಒರ್ಮೆಗೇ ಬೆಳಗಿ ತೊಳಗುವ ದೀಪ ಶಿಖಿಯಂತೆ !
ರಾಜ ದಂಪತಿಗಳಿಗೆ ಸಂತಸದ ಪರಮಾನ್ನ
ಉಣಿಸಿ ಮನತಣಿಸಿದಂ. ಆಗಳೀಂ ರಾಜ್ಯದಲಿ
ಮರ ಗಿಡು ಬಳ್ಳಿಗಳ್ ನೆರೆ ಪೂತು ಮಘಮಘಿಸುತ
ಸುಗಂಧ ಸೌರಭಮಂ ಎರಚುವಂತೆ ನಳನಳಿಸಿ
ವಿಜೃಂಭಿಸಿಬುವು. ತೀಡಿದುದು ತಂಗಾಳಿ ಸುಮ
ಸೌರಭವನೆಡೆಎಡೆಗೆ ಸಿಂಪಡಿಸುವ ತೆರದಲಿ.
ಪಕ್ಷಿಲೋಕದ ಮಂಗಳಗಾನ ಹೊಮ್ಮಿದುದು ವಿಧ

→

ವಿಧ ರಾಗದಲಿ ಹಾಡಿ ಪಾಡಿ ಪೊಗಳುವ ತೆರಂ.
ಸಂತಾನಕಾಮಿ ಧರಣಿಪಂ ಸಂತೋಷದಿಂ
ರಾಜ್ಯದಾದ್ಯಂತ ಸಂತಸದುಕ್ಕೆವವಂ ನಡೆಸಿ
ಪ್ರಜೆಗಳಿಗೆ ಅನ್ನವಸನಾದಿಗಳಂ ದಾನ
ಗೈದು ಸಕ್ಕರೆಯಂ ಅಕ್ಕರೆಯಿಂದೆ ಹಂಚಿದಂ.
ಗುರು ಬ್ರಾಹ್ಮಣರಿಗೆ ಗೋದಾನ ಭೂದಾನಗೈದು
ಕಾಣಿಕೆಯನಿತ್ತು ಸತ್ಕರಿಸಿದಂ ; ಮನತುಂಬಿ
ಹೃದಯತುಂಬಿ ಸಂತಸದ ಕಲಸವೆ ನೆರೆ ತುಂಬಿ.
ಆಗಳೇನೆಂಬೆ ರಾಜ್ಯದ ಪ್ರಜೆಗಳ ಮನದ
ಮೋದವಂ ? ಕುಣಿಕುಣಿದು ನಲಿದರ್ ; ಹಾಡಿಪಾಡಿ
ತರತಾಳವಿಕ್ಕಿ ಪುತ್ರ ರತ್ನನ ಶುಭಜನನಂ
ಸಾರಿದರ್. ರಾಜ್ಯ ವ್ಯಾಪ್ತಿಯಲಿ ಸಿಹಿ ಹಂಚಿದರ್
ತಂತಮ್ಮೊಳ್, ಎಲ್ಲೆಡೆಯುಂ ಸುಗ್ಗಿಯು ಸಾರ್ದತ್ತು
ಪುತ್ರೋತ್ಸವದ ಶುಭಾಂಗವಾಗಿ. ಸರಾಗದಿಂ
ಸಂಭ್ರಮ ಸಡಗರಗಳ್ ಒಗ್ಗೂಡಿರೆ ತಳಿರ್
ತೋರಣಗಳ್ ರಾರಾಜಿಸಿದುವು ಮನೆ ಮನೆಯಲಿ
ಮೇಣ್ ಹಾದಿ ಬೀದಿಗಳಲಿ ಪರ್ಬದ ತೆರದಲಿ.
ದೇಗುಲಗಳಲಿ ವಿಶೇಷ ಪೂಜಾ ವ್ರತಗಳ್
ನಡೆದುವು. ವರ ನಗಾರಿಗಳ್ ಢಣಢಣನೆ ಕುಟ್ಟಿ
ಬಾರಿಸಿದುವು, ಎಡೆವಿಡದೆ ಅಡಿಗಡಿಗೆ ಪಗಲಿಡಿ.
ಅಂತಿಂತು ಪುತ್ರವರ್ಯನ ಆಗಮನದಿಂದೆ
ಸಂತಸದುಕ್ಕೆವ ನಡೆದು ಸುಕುಮಾರ ಪುಣ್ಯನಿಗೆ
ಭೋಜರಾಜನೆಂದು ನಾಮಕರಣಗೈದರು
ಪೆತ್ತವರ್ ಬಹುಜನ ಹಿತಚಿಂತಕರ ಕೂಟದೊಳ್.

ಸುಸುಂದರ ಶಿಶುರತ್ನ ಶುಕ್ಲಪಕ್ಷದ ಚಂದ್ರನ
ಮಾಳ್ಕೆಯಲಿ ಬೆಳೆಯುತಿರ್ದಂ ವ್ಯೋಮನ ತುಂಬಿ.
ಕಾಲವೆಂತುರುಳ್ದುದೋ ಅರಿಯದ ಮಾಳ್ಕೆಯಲಿ
ಬಾಲಕನ ಆಟಪಾಟಂಗಳಂ ಮನಗೊಂಡು
ಸಂತೋಷದಂಬುಧಿಯಲಿ ಮುಳುಂಗಿ ಈಸಾಡಿ
ನಲಿಯುತಲಿರೆ ಕಳೆದುವು ಐದು ಸಂವತ್ಸರಗಳ್
ಸರಾಗದಲಿ. ತೋಷವನವಿತತೋಷಗೊಳಿಸುವ
ಬಾಲಲೀಲೆಯ ಮನಮೋಹಕತೆಯಲಿ ಶಿಶು ಭೋಜ
ರಾಜನುಂ ನಲಿದಾಡುತಿರೆ ಸಗ್ಗವೆ ಧರೆಗಿಳಿದುದು
ರಾಜದಂಪತಿಗಳಿಗೆ.

ಬಳಿಕಂ ಕಂದನಂ ಗುರು
ಕುಲಕೆ ಕಳಿಸಿ ವಿದ್ಯಾಧಿದೇವಿಯ ಸೇವೆಯೊಳ್
ನಿಲಿಸಿದಂ ಪಿತ ಸಿಂಧುಲ ಮಹಾರಾಜಂ ಮಿಗೆ
ಭವ್ಯ ಭವಿಷ್ಯದ ಹಾರೈಕೆಯಿಂ. ಗುರುಕುಲದಲಿ
ಮುಂಜರಾಜನ ಕುವರ ಜಯಂತನುಂ ಇರುತಿರೆ
ಈರ್ವರುಂ ಆನಂದ ಮೋದದಿಂ ಕಲಿಕೆಯಲಿ
ಮನವಿಟ್ಟರ್ ಗುರುವರ್ಯನ ದಿವ್ಯ ಜ್ಞಾನದ
ಹೊನಲಿನಲಿ ಮುಳುಗಿ. ಕಾಲಕ್ರಮದಲಿ ಕುವರಂ
ಸಕಲ ವಿದ್ಯಾ ಪಾರಂಗತನಾಗುತಿರೆ ಸಿಂಧುಲ
ಮಹಾರಾಜಂಗೆ ಭವಿಷ್ಯದ ಚಿಂತೆ ಕಾವಳಿಸಿತು
ಮನವಂ. ಕುವರನಿನ್ನು ಬಾಲಕನಿರೆ, ತನ್ನೊಳ್
ರಾಜ್ಯದ ಹಿತವಂ ಮೇಣ್ ಕಂದನ ಶ್ರೇಯಸ್ಸಂ
ಕುರಿತು ಪರ್ಯಾಲೋಚಿಸಿ ಅನನ್ಯ ಭಾವನಾ
ವೇಶದಲಿ ಸೆರೆಸಿಲಿ ಭವಿಷ್ಯದ ವೇದಿಯಲಿ

→

ಅಂಡಲೆದು ತರ್ಕಭಾರದೊಳ್ ಕುಗ್ಗಿ ಕುಸಿವೊಲ್
ತೋರ್ದತ್ತು, ವಿವೇಚನಾಹೀನ ಸೋದರನಂ
ಮನದಲಿ ನೆನೆದು. ಕುಮಾರ ಭೋಜರಾಜಂ ಪ್ರಾಪ್ತ
ವಯಸ್ಕನಾಗದ ಮುನ್ನ ಪಟ್ಟಾಭಿಷೇಕಮಂ
ಗೈದು ಗಾದಿಗೇರಿಸಿದೊಡೆ ಭಾತೃ ಮುಂಜಂಗೆ
ರೋಷದ್ವೇಷಗಳುದಿಪುದು ದಿಟಂ, ಅಂತುಮಲ್ಲದೆ
ಕುವರಂಗೆ ಅಪಾಯುವೊದಗುವ ಸಂಭವವಿಹುದು.
ನಲ್ಮೆಯ ಕುಮಾರ ಕಂಠೀರವಂ ಧೀಮಂತ
ಧೀರ ಸುಜ್ಞಾನಿಯಿರ್ದೊಡಂ ರಾಜ್ಯದ ದಿವ್ಯ
ಸಿಂಹಾಸನವನೇರಿ ಅಭಿಷಿಕ್ತ ದೊರೆಯೈಸಿ
ರಾಜ್ಯವಾಳುವೊಡೆ ಕಾಲಪಕ್ವವಾಗದೆಂತು ?
ಇತ್ತಲ್ ದಿನದಿನಮೆನ್ನಾಯುಂ ಸವೆಯುತಿಹುದು.
ಇನ್ನು ಮಿನ್ನು ಬಹುಕಾಲಮಾನು ಬದುಕುಳಿವುದು
ಅಸಾಧ್ಯಂ. ಈಗಳ್ತಿ ಕುವರನ ಪರಿಪೋಷಣೆ
ಮೇಣ್ ಭವ್ಯ ಭವಿತವ್ಯದ ಹೊಣೆಯಂ ಮುಂಜಂಗೆ
ವಹಿಸುವುದೆ ಯೋಗ್ಯಕ್ರಮುವೆಂದು ಬಗೆಯೊಳ್ ತಾಂ
ಬಗೆದು ದೃಢ ನಿರ್ಧಾರಗೈದನ್. ತರುವಾಯಿ,
ವೃದ್ಧ ಮಹಾ ಮಂತ್ರಿ ಮಹೋದಯನ ಮುಂತೆ ತನ್ನ
ಮನೋನಿರ್ಧಾರಮಂ ತಿಳಿಪಿದಂ. ಅದರ್ಕಾ
ಮಂತ್ರಿ ಬುದ್ಧಿ ಸಾಗರನುಂ ಖಿನ್ನಮನದಿಂ
ಪರಿಭಾವಿಸುತೆ ನಿಟ್ಟುಸಿರ್ ಬಿಟ್ಟಂ. ಆದೊಡಂ,
ಸುಯೋಚಿಸಲುರೆ ಅನ್ಯಮಾರ್ಗಮಿಲ್ಲೆಂಬುದನು
ಅರಿತು ತರ್ಕವಿತರ್ಕದೊಳ್ ಮನವ ತೊಡರ್ಚಿ
ಮುಂಜರಾಜನುಂ ನಂಬಲರ್ಹನಲ್ಲಮೆಂದೆನೆ

→

ಬಾಯಿ ಬಾರದೆ ಬಿಣ್ಣನೊಪ್ಪಿದಂ ತನ್ನಾತ್ಮ
ಘೋಷಕೆ ವಿರುದ್ಧಮಪ್ಪಿ. ಮೊಳೆತುವು ದುಃಖಾಶ್ರು
ಹೃದಯ ಕುಂಡಲಿಯುಲಿ, ತಾನರಿಯದಂತೆಪೊಲ್.

ಸಿಂಧುಲ ಮಹರಾಜಂ ಮಂತ್ರಿಗೆಂದಂ "ಅಯ್ಯಾ,
ಅಮಾತ್ಯರೆ, ಮುಂಜರಾಜಂಗೆ ಪಟ್ಟವನು ಕಟ್ಟಿ
ಎನ್ನ ಕಂದನಂ ಅವನ ನಲ್ಮೆಯ ಉಡಿಯೊಳಿರ್ಸ್ಕಿ
ಪರಿ ಪೋಷಕನನ್ನಾಗಿಸಿದೊಡೆನ್ನಯ ಧರ್ಮ
ಸಂಧತೆಗೆ ಭಾತೃ ಬಾಂಧ್ಯವಕೆ ಲೋಕಲಜ್ಜೆಗೆ
ಧಕ್ಕೆಯಿನಿತಿಲ್ಲಂ. ಧನಲೋಭ ರಾಜ್ಯಲೋಭ
ಅಧಿಕಾರಲೋಭ ಬಲು ಹೀನಂ. ಮನುಜಂ ಲೋಭ
ಪರವಶನಾದೊಡೆ ಕುಟುಂಬ ದ್ರೋಹ ಬಗೆಯೆ
ಹಿಂಜರಿಯನೆಂದೊಡದು ತಪ್ಪಲ್ಲ. ಮುಂಜನುಂ
ಲೋಭಪರವಶನಪ್ಪುವ ಮುನ್ನಮೆಯೆ ಎನ್ನಯ
ರಾಜ್ಯಮಂ ಒಪ್ಪಿಸಿದೊಡೆ ಲೋಭದ ಪರಾಕಾಷ್ಠೆ
ಎಂಬುದಿಲ್ಲ."

ಸಿಂಧುಲ ಮಹರಾಜನ ಹೃದಯ
ಕುಂಡದಿಂ ಪೊದಳ್ದ ಪರಮ ಹಾರೈಕೆಯದು
ಸಮಂಜಸಮೆನಿಸಿಯುಂ ಮುಂಜನ ಕುಬುದ್ಧಿಯಿಂ
ಮನಂಗೆಟ್ಟು, ತಳಮಳಿಸಿದುದು. ತಾನುಂ ವಯೋ
ವೃದ್ಧನಿರ್ದು ಅಸಹಾಯಕತೆಯಲಿರೆ ತನ್ನಯ
ಸದುದ್ದೇಶದ ಸಲಹೆ ಏನಿರ್ದೊಡದು ವ್ಯರ್ಥ,
ಎಂಬರಿಕೆಯೊಳ್ ಮನವಿಟ್ಟು ಕಿನಿಸಿಗೆಯಿರುತಿರೆ
ತೋರ್ಪಡಿಸದಪೊಲ್ ಎಚ್ಚರವಹಿಸಿದಂ. 'ಹ್ಞೂಂ'
ಎನ್ನದೆಯೆ ಗತಿಯಿಲ್ಲ. ಪೇಣನ್ಯಮಾರ್ಗವದು

→

ಇಲ್ಲಿನೆನೆ ಒಡಲಾಳದಲಿ ದುಃಖದುಗುಡಗಳ
ಕಾಳ ಪನ್ನಗಂ ಬುಸ್ಸನೆಳ್ದಿರೆ ತನ್ನನುಂ
ತಾಂ ಸೈಪುದು ಕಗ್ಗಂಟಾದತ್ತು. ನುಡಿವೆನೆನೆ
ಚಿತ್ತಪ್ರೊಸ್ಪದು. ಗಂಟಲೊಣಗಿತು ಒಡಲ್ಗಿಚ್ಚು
ಧಗಧಗಿಸಿ. ದೈವರಕ್ಷೆಯಿರ್ದೊಡೆ ದೊರೆಯಿಚ್ಛೆಯು
ಕೈಗೂಡುವುದು ದಿಟಂ, ಎಂಬ ಹಾರೈಕೆಯಿಂದೆ
ನೆಲ್ನುಡಿ ಹೊರಬಿಳ್ದುದು “ಪ್ರಭೋ, ನಿನ್ನಿಚ್ಛೆಯೇ
ಎನ್ನಿಚ್ಛೆ. ದೈವರಕ್ಷೆಯುಮಿರ್ದೊಡೆ ಧರ್ಮರಕ್ಷೆ
ರಾಜ್ಯರಕ್ಷೆಗಳಿಗೆ ಚ್ಯುತಿಯಿಲ್ಲ. ನೀಂಗೈದೆಲ್ಲಾ
ಧರ್ಮಕಾರ್ಯಮಂ ರಕ್ಷೆಯನೀವುದು ನಿನ್ನ ವಂಶೋ
ದ್ಧಾರಕಂಗೆ.”

ಮಂತ್ರಿಮಹೋದಯನ ಪ್ರತ್ಯುತ್ತರಂ
ಮನೋದಧಿಗೆ ಸ್ವಾಂತನವ ನೀಡೆ ಮಹಾರಾಜನುಂ
ಮತ್ತೆಂದನ್,

“ಅಯ್ಯಾ, ಸತ್ಕುಲೋದ್ಭವನೇ,
ನಿನ್ನ ಪಡಿನುಡಿಗೆ ಮೆಚ್ಚಿದೆಂ. ಕುವರ ಭೋಜಂ
ಪ್ರಾಪ್ತ ವಯಸ್ಕನಾಗುವನ್ನ ಸುರಕ್ಷೆಯನಿತ್ತು
ಸುವಿದ್ಯಾ ಪಾರಂಗತನನ್ನಾಗಿಸಿದ ಬಳಿಕ
ಭೋಜರಾಜ ಕುಮಾರನಿಂಗೆ ರಾಜ್ಯಾಭಿಷೇಕ
ಗೈದು ಜೇಷ್ಠ ಪುತ್ರಂಗೆ ರಾಜ್ಯವನೀವೊಂದು
ಧರ್ಮ ಚಿಂತನೆಗೆ ಸಲ್ವುದೆನ್ನಯ ಶುಭಾಶಯಂ.”

“ಅಪ್ಪುದಪ್ಪುದು ಮಹಾರಾಜ! ನಿನ್ನಾಶಯಂ
ಫಲಿಸಲೆಂದಾಂ ಹಾರೈಸಿ ಕುಲದೈವದೊಳ್ ನೆರೆ
ಪೂಜೆ, ಸಲಿಸುವೆಂ.”

→

ಅಂತೆಂದ ಹಿರಿ ಅಮಾತ್ಯನ
ನುಡಿಯಿಂದೆ ಸಂತುಷ್ಟನಾದ ಸಿಂಧುಲ ಮಹಾ
ರಾಜನುಂ ಸಹೋದರ ಮುಂಜನಂ ಬರಮಾಡಿ
ಪ್ರೇಮಾದರದ ಸುರಿಮಳೆಯುಂ ಕರೆದು
"ಕೇಳೆನ್ನ
ಸೋದರನೆ, ನೀನೀಗಳೆ ರಾಜ್ಯಾಭಿಶಕ್ತನಾಗಿ
ರಾಜ್ಯಭಾರಮಂ ನಿರ್ವಹಿಸಿ ಧರ್ಮದಿಂ ನ್ಯಾಯ
ನೀತಿಯಿಂ ರಾಜ್ಯಪರಿಪಾಲನೆಯಂಗೈದು
ಉಜ್ಜಯಿನಿ ರಾಜ್ಯಮಂ ಆಳ್ದು ತೊಳಗಿ ಬೆಳಗೈ !
ದೈವಾನುಗ್ರಹಬಲದಿಂದೆನ್ನ ಕುಮಾರಂ
ಮುಂದೆ ಪ್ರವರ್ಧಮಾನಕ್ಕೈದ ಬಳಿಕವಂಗೆ
ರಾಜ್ಯಭಾರಮಂ ನೀಡಿ ಜ್ಯೇಷ್ಠ ಕುವರನಿಂಗೆ
ರಾಜ್ಯಮೆಂಬುವ ಧರ್ಮಮಂ ಪಾಲಿಪುದು. ಕೇಳ್,
ಅನ್ನೆಬರಮೆನ್ನ ಕುವರನಂ ನಿನ್ನ ಕಂದನ
ಮಾಳ್ಕೆಯಲಿ ಪರಿಪಾಲಿಪುದು ನಿನ್ನ ಕರ್ತವ್ಯ."

ಅಂತು ಅನುನಯದಿಂದೊರೆದ ಸೋದರ ಸಿಂಧುಲ
ಮಹಾರಾಜನ ಉದಾತ್ತತನದಿಂ ಸಂತುಷ್ಟ
ಮನೋಭಾವದಿಂದೊಪ್ಪಿ ಆತ್ಮಾನಂದದಿಂ
ಸಂಭ್ರಮದೈಶ್ವರ್ಯದಿಂ ಪುಟಿದ ಸೆಂಡಿನೊಲ್
ಕಾರ್ಯೋನ್ಮುಖನಾಗಲ್, ಪಟ್ಟಾಭಿಷೇಕವದು
ವಿಜೃಂಭಣೆಯಿಂದಲಿ ನಡೆದುದತಿ ಮೋಜಿನಲಿ.

ಮುಂಜರಾಜವರ್ಯಂ ತೋಷದಿಂ ಮೋದದಿಂ
ಸ್ನೇಹ ಪ್ರೇಮಗಳ ಸುರಿಮಳೆಯಂ ಸುರಿಸಿ ಎಲ್ಲ
ಬಂಧು ಬಾಂಧವರಂ, ಅಧಿಕಾರಿಗಳಂ ಮೇಣ್
ಪ್ರಜಾವರ್ಗಮಂ ಸತ್ಕರಿಸಿದನ್. ಹೃದಯ →

ಧಾತ್ರಿಯುಂ ಆನಂದೋಲ್ಲಾಸದ ಹೆದ್ದೆರೆಗಳಿಂ
ತುಂಬಿ ತುಳ್ಳುಲಾಡಿತು ಚೆಲ್ಲಿ ಸುರಿವನ್ನ.
ಸಿಂಧುಲ ಮಹರಾಜಂ ರಾಜ್ಯದ ಭವಿಷ್ಯಮಂ
ಮುಂಜರಾಜನ ಕರಕಮಲಗಳಿಗಿತ್ತು ತಾನುಂ
ವಿಶ್ರಾಂತಿ ಜೀವನಂ ಬಯಸಿ ಪುಣ್ಯಾಶ್ರಮ
ದಾಣದಲಿ ನೆಲೆಸಿದಂ ನಿಶ್ಚಿಂತೆಯಿಂ. ತನ್ನ
ಧರ್ಮಜೀವನಂ ತೊಳಗಿ ಬೆಳಗಿ ಪ್ರಜೆಗಳ ಬಹು
ಮೂಲ್ಯ ಸನ್ಮಾನ್ಯತೆಯೊದವಿ ತೋಷದನುಭೋಗ
ಯೋಗದಲಿ ಕಳೆದುದು ಕೊನೆಗಾಲಂ, ಶಾಂತಿಯಿಂ.

ಕಾಲಕ್ರಮದೊಳ್ ವಯೋಧರ್ಮಕೆ ಶರಣಾಗಿ
ರುಗ್ಣಶಯ್ಯೆಗಡರಿರೆ ದೇಶದ ಭಿಷಗ್ರತ್ನರ್
ಮೇಣ್ ಪಂಡಿತೋತ್ತಮರ್ಗೈದು ಔಷಧೋಪಚಾರ
ನಡೆಸಿಯುಂ ಚಿಕಿತ್ಸೆ ಮೈಗೂಡದಾಯ್ತು. ಆಗಳ್,
ಮುಂಜರಾಜನೊಡಂ ನುಡಿದನೆಂತೆನೆ

"ತಮ್ಮಾ,
ಮುಗಿದುದೆನ್ನಯ ಆಯುರ್ವರ್ಷನಂ. ಆನಿನ್ನು
ಬದುಕಲಾರೆಂ. ಕೇಳ್, ಕುವರನೆನ್ನ ಅಭೋದ
ಮುಗ್ಧ ಬಾಲಕಂ. ನೀನವಂ ಕರುಣೆ ದಯೆಗಳ
ಸುಖಾಶ್ರಯಮಿತ್ತು ಪರಿಪಾಲಿಕುಂ. ಒಳ್ಳಿತಕ್ಕೆ
ನಿನಗೆ." ಎನುತೆ ಮರಣಗತಿಗೆ ಶರಣನಾದನಾ
ವೃದ್ಧ ಮಹಾರಾಜ ಸಿಂಧುಲಂ; ದೂರದೂರದ
ಸಗ್ಗಿಗರ ನಾಡಿನ ಪಥಂವಿಡಿದು.

ಬಹುಕಾಲ
ಧರ್ಮದಿಂ ನ್ಯಾಯದಿಂ ರಾಜ್ಯವಾಳ್ದು ತನ್ನಯ
ಪ್ರಜೆಗಳ ಮೆಚ್ಚಿಗೆಗೆ ಗೌರವಕೆ ಸತ್ ಪಾತ್ರ →

ನೆನಿಸಿದ ಮಹಾರಾಜನಗಲಿಕೆಯಿಂ ಸಂಕಟ
ದುಃಖದಿಂ ಅತ್ತು, ಗೋಳಾಡಿ ಪ್ರಜಾವರ್ಗಂ
ಬೀಳ್ಕೊಟ್ಟರ್ ಪಾರ್ಥಿವ ಶರೀರ ಸಂಪುಟವಂ,
ಹೃದಯದಾಯಿ ಶ್ರದ್ಧಾ ಗೌರವದಿಂ. ಕುಮಾರ
ಭೋಜರಾಜನುಂ ಪೆತ್ತವ್ವೆಯ ಕಂಬನಿಗಳಂ
ನಲ್ಮೆಯಿಂ ತೊಡೆದು ಸಂತೈಸಿ ಪಿಂತಿರುಗಿ ನಡೆದು
ಗುರುಕುಲವ ಸೇರಿದಂ ಸೋದರ ಜಯಂತನೊಡಂ.
ದೇವನಗರಿಯಿಂದೈದ ದೇವಕುವರನತೆರಂ
ಪರಮ ತೇಜೋರ್ಭರಿತ ಭೋಜರಾಜ ಕುವರಂ
ಗುರುಕುಲ ಸುಶೋಭಿತನೆನೆ ರಾರಾಜಿಸಿ ಕೀರ್ತಿ
ಮಾಲೆಯುಂ ಧರಿಸಿ ಗುರುವಿನ ಮೆಚ್ಚುಗೆಯುಂ ಪಡೆದು
ಧನ್ಯನೆನಿಸಿದಂ. ಗುರುಕುಲದೊಳಿರುತಿರ್ದೆಲ್ಲ
ಓರಗೆಯ ಚಿಣ್ಣರುಂ ಮೆಚ್ಚಿದರ್. ಪ್ರಜೆಗಳ್
ಮೆಚ್ಚಿದರ್. ಬಂಧು ಬಾಂಧವರ್ ಮೆಚ್ಚಿದರ್ ತಮ್ಮ
ಮುಂದಿನ ಮಹಾರಾಜನಂ. ಬಾಲ್ಯದಂಚನಿಂ
ದಾಂಟದೆಯೆ ಕೀರ್ತಿವೆತ್ತ ಧೀರೋದ್ದಾತ ಸುತ
ಮಿಸುನಿಯ ಸಲಾಕೆಯೊಲ್ ತಾನಿರ್ದನ್. ಕೋಮಲ
ಶರೀರದಲಿ ವಿದ್ಯುತ್ ಪ್ರವಾಹ ಚರಿಸಿದತ್ತು .
ಹೃದಯ ಕಳಶ ಪ್ರಭೆಯುಂ ಚೆಲ್ಲಿ ಸೂಸುವೊಲ್.
ಕತ್ತಲೆಯ ಕೊಲೆಗೈವ ಕಾಂತಿ ಪ್ರವಾಹವದು
ಶಾಂತಿ ಪ್ರಭಾಳಿಯೊಲ್ ಸುತ್ತುವರಿಯಲ್ ಬಾಲ
ವಟುವರೇಣ್ಯನುಂ ಶೋಡಷಕಳೆಗಳಿಂದೆ ನೆರೆ
ಬೆಳಗಿದಂ.

ಧರ್ಮಪ್ರಭುವಿನ ಮರಣದ ಬಳಿಕ

→

ಮುಂಜರಾಜನುಂ ಮೈವೆರ್ಚೆ ದರ್ಪದಿಂ ಮತಿ
ಗೆಟ್ಟು ಲಜ್ಜೆಬಿಟ್ಟು ರಾಜ್ಯ ಸೂತ್ರಮಂ ಬಿಗಿ
ಮುಷ್ಠಿಯಲಿ ಕಟ್ಟುರದಿಂ ಪಿಡಿದಂ. ದುಮ್ಮಾನದಿಂ
ದುರಾಸೆ ದುರ್ಬುದ್ಧಿಗಳ್ ಘನಿಸಿದುವು. ಭವಿಷ್ಯದಲಿ
ತನ್ನ ಮಾರ್ಗಮಂ ನಿಷ್ಕಂಟಕಗೊಳಿಸಿಕೊಳ್ಳೆ
ಮುಂದಾಗಿ ವಯೋವೃದ್ಧ ಮಹಾಜ್ಞಾನವೃದ್ಧ
ಬುದ್ಧಿ ಸಾಗರ ಮಂತ್ರಿ ಮಹೋದಯನಂ ಮಂತ್ರಿ
ಪದವಿಯಿಂ ಉಚ್ಛಾಟಿಸಿ ತನ್ನಾಪ್ತನಿರ್ದಾ
ಕುಮತಿಯೊರ್ವನಂ ನಿಯಮಿಸಿದನ್ ವರ ಅಮಾತ್ಯನ
ಪೀಠಕ್ಕೆ. ಹಾಹಾಕರಿಸುತಿಹ ಜನಕೋಟಿಯುಂ
ಲಕ್ಷಿಸಿದನಿಲ್ಲ. ಮುಂಜಮಹಾರಾಜನ ರಾಜ್ಯದ
ಆಶೆಯು ಕಣ್ ಕೆರಳಿತಟ್ಟಹಾಸದಿ ಕೆಂಗಿಡಿ
ಕಾರಿ. ರೋಮಾಂಚನಂಗೊಂಡುದುದು ಮೈಮನಂ.
ದಿನದಿನಂ ರಾಜ್ಯಾಡಳಿತವದು ಹದಗೆಟ್ಟು
ಪಥಗೆಟ್ಟು ಹಾಳಾಗುತಲಿರೆ ಬುದ್ಧಿ ಸಾಗರ
ಮಹೋದಯನುಂ ನಿತ್ಯವಿದ್ಯಮಾನವಲೋಕಿಸಿ
ದುಃಖದಿಂ ನೆರೆ ಕಳಕಳಿಯಿಂ ನೊಂದು ನೀರಾಗಿ
ಬಾಯ್ಬಿಡಲ್ ಬಾರದೆಯೆ ಮಿಣ್ಣನಿರುತಲಿರ್ದಂ.
ರಾಜ್ಯಸಭೆಗೆತ್ತು ಮಂತ್ರಾಲೋಚನೆಯುಂ ತಾಂ
ಗಮನಿಸುವನ್ ಪರಮಾಸ್ಥೆಯಿಂದೆ.

ದಿನ ನಿತ್ಯದ
ಕಾರ್ಯಕ್ರಮಗಳ್ ಗತಿತಪ್ಪಿದುವು ಸೂತ್ರ ಹರಿದ
ಗಾಳಿಪಟದವೊಲ್. ರಾಜ್ಯದಾದ್ಯಂತ ಅಶಾಂತಿ
ಅಸಮಾಧಾನಂಗಳ್ ಮುಂಜಿಳಿದುವು ಮುಳ್ಳಿನ

→

ಕಳ್ಳಿಯೊಲ್. ಅಧರ್ಮ ನೀತಿಗಳ ಬೆಳೆಸಿನಿಂ
ಮಳೆಬೆಳೆಗಳ್ ಕ್ಷಯಿಸಿ ಬಡತನದ ರಣಗೋಳ್
ಆಕ್ರಮಿಸಿದತ್ತು ರಾಜ್ಯದಾದ್ಯಂತ. ದಾರಿದ್ರ್ಯ
ದೇವತೆಗಳುಂ ಉತ್ತಾಲನರ್ತನಗೈಯ್ಯುತಿರೆ
ಒಡಲ ಪಸಿನೆಯುಂ ಹಾಹಾಕರಿಸಿ ಧಗಧಗಿಸಿ
ಉರಿದತ್ತು ಪ್ರಜೆಗಳ ಕಂಗಳಲಿ ಕೋಡಿಹರಿಸಿ.
ಆದರಾ ಧೂರ್ತ ಮುಂಜರಾಜನ ಗಮನ ಪಕ್ಷಿ
ಹಇದ ದಿಕ್ಕೇ ಬೇರೆ. ಕಡು ಸ್ವಾರ್ಥದಿಂ ತುಂಬಿ
ಮಿಜಿಮಿಜಿಗುಡುವ ಚಿತ್ತ ಕೊಳಕು ಕೆಸರಾದತ್ತು.

ಆಸ್ಥಾನದೊಳೊರ್ಮೆ ವಿದ್ವನ್ಮಣಿಗಳ್ ತುಂಬಿರೆ
ಆಗಮಿಸಿದನೊರ್ವ ಘನ ಪಂಡಿತವರ್ಯನುಂ,
ಪರಮ ಜ್ಯೋತಿಷ್ಯ ವೇದವಿದ್ಯಾ ಪಾರಂಗತ
ಮೇಣ್ ಜ್ಞಾನ ವೃದ್ಧನಿರುತಿರ್ದವಂಗೆ ಸಭಾ
ಗೌರವಂ ಅದ್ಭುತ ಪ್ರಕಾರದೊಳ್ ಸಂದುದು
ವಿದ್ವನ್ಮಣಿಗಳ ಸ್ವಾಗತದಿಂದೆ. ತನ್ನೊಡಲ
ಸಂತಸಂ ಸೂಸಿ ಉಚಿತಾಸನವನಿತ್ತು ನೆರೆ
ಉಪಚರಿಸಿದಂ ಮುಂಜರಾಜ. ಪಂಡಿತೋತ್ತಮಂ
ಮುಂಜರಾಜನಂ ಕುರಿತು ಅನುನಯದಿ ನುಡಿದಂ,

"ಎಲೈ ರಾಜೇಂದ್ರ ! ನಿನ್ನ ಜೀವನದಾದ್ಯಂತ
ನಡೆದುದೆಲ್ಲಮಂ ಮುಖದರ್ಶನ ಮಾತ್ರದಿಂದೆ
ವಿವರಿಸಲು ಬಲ್ಲೆಂ. ನೀಂ ಇಚ್ಛಿಸಿದೊಡಾನೀಗ
ನಿನ್ನ ಪ್ರಶ್ನೆಯುಂ ಬೇಳ್ಪೆಂ."

ಮುಂಜರಾಜನುಂ
ಅಚ್ಚರಿಯ ಕುಂಡದಲಿ ಮುಳುಗೆದ್ದು ಕೆಕ್ಕರಿಸಿ →

ಕಣ್ಣಿಟ್ಟು ನೋಡಿ ತನ್ನೊಳೇ ಪರಿಭಾವಿಸಿದಂ
ನಸುನಿದ್ರೊಳ್ತು. ಮುನಿಯುಂ ಪರಿಕಿಸುವೊಡೆ ನಲ್ ಸಮಯ
ಎಂಬ ನಂಬುಗೆಯೊಳ್ ಮನವಿಟ್ಟು ಕೇಳಿಸಿದಂ,
"ಆಯ್ತು, ಗುರುಗಳೇ ! ನೀಂ ಎನ್ನ ಪೂರ್ವೇತಿಹಾಸಂ
ತಿಳಿಪುದು; ಪರಾಮರಿಸುವೆನೆನೆದನುಂ."

"ಅತೀ ಕೌತೂಹಲಭರಿತ ಮುಂಜರಾಜನ ಚಿತ್ತಮಂ
ಮೇಣ್ ಮನಃಕಲ್ಪಮಂ ತಣಿಸುವಂತು ಮಿಗೆ
ಉತ್ತೇಜಿತಗೊಳಿಸುವಂತು ರಾಜನ ಪುಟ್ಟಿನಿಂದೆ
ಅನ್ನೆಬರಂ ನಡೆದ ಪೂರ್ವಾಪರ ವಿಚಾರಮಂ
ತಿಳಿಪಿದಂ ಸರಾಗದಲಿ. ಮುಂಜಮಹಾರಾಜ
ಬೆಪ್ಪು ಬೆರಗಾಗಿ ಕೇಳ್ದುದಂ ನಲ್ಮೆಯಿಂದಲಿ
ಕರಗಳ ಮುಗಿಡಂ ಗೌರವಾದರದಿಂ.

"ರಾಜ !
ಲೋಕದೊಳ್ ಲೋಗರೆನ್ನ ವಿದ್ವತ್ತೆಯಂ ಮೆಚ್ಚಿ
ನೆಚ್ಚಿ ಸರ್ವಜ್ಞನೆಂಬ ಬಿರುದಿತ್ತು ಗೌರವ
ಭಕ್ತಿ ಪ್ರೇಮಗಳಿಂದೆ ಆದರಿಸಿಹರ್. ಕೇಳ್,
ಕಲಿತ ವಿದ್ಯೆಯುಂ ಪಂಡಿತರಲಿ ಗ್ರಂಥಗಳಲಿ
ಉಳಿಮೊಡೇಂಬಹುದು ? ಎನ್ನ ವಿದ್ಯೆಯುಂ ಈ
ರಾಜ ಸಭೆಯೊಳ್ ಪ್ರದರ್ಶಿಸಲೆಂದೈದೆನಿಲ್ಲಿಗೆ
ನೀಂ ಇನ್ನೇಂ ಬಯಸಿಡೊಡಮದಂ ಸಾಂಗಗೊಳಿಪೆಂ.
ಆವಾವ ಆಸೆ ಆಕಾಂಕ್ಷೆಗಳ್ ಇರ್ದೊಡಂ
ತಿಳಿಪಿ ಪ್ರಶ್ನಿಸೈ ರಾಜೇಂದ್ರ!"

ಮುಂಜರಾಜಂ
ದಿವ್ಯಾಶ್ಚರ್ಯಾವೇಗದ ಝುರಿಯಲಿ ನೆರೆ ಕೊಚ್ಚಿ

→

ಹೋಹ ಪಾಂಗಿನಲಿ ಕೈಪರೆಗುಟ್ಟಿದರ್ ಇಡೀ
ಸಭಾಭವನ ಧಣಧಣಿಸುವೊಲ್. ಸಭೆ ಹರಿಸಿದುದು
ಮತ್ತೆ ಮತ್ತೆ ಹರ್ಷದ ಹೊನಲ್. ಕಣ್ ಮಿಟುಕಿಸದೆ
ನೋಡಿದುದು ಕೊರಳ್ ಆನಿಸಿ. ಎಂದೂ ಕಣ್ಣಿಂದೆ
ಕಂಡು ಕಾಣದಾ ಕಿವಿಯಿಂ ಕೇಳಿ ತಿಳಿಯದಾ
ವಿಚಾರವನರಿತು ಉಸಿರ್ಗಟ್ಟಿದ ಮೂಳ್ಕೆಯಲಿ.
ಆಗಳಾ ಮುಂಜ ಮಹಾರಾಜನುಂ ಹೃದಯದ
ಹರ್ಷಾಬ್ಧಿಯಲಿ ಮುಳುಗಿ ಪಂಡಿತಂಗೆ ಧನಕನಕ
ರಾಶಿಯುಂ ದಕ್ಷಿಣೆಯಿತ್ತು ಪ್ರಶಂಸಿದಂ, ಬಾಯಿ
ಬಿರಿವ ತೆರದಿ. ಪಂಡಿತ ವರ್ಗಂ ಅನುಮೋದಿಸಿ
ದಿವ್ಯ ಆನಂದ ಮೋದದಿಂ ಪೊಗಳಿ ಪಾಡಿದರ್
ಮತ್ತೆ ಮತ್ತೆ.

ವೃದ್ಧಮಂತ್ರಿ ವಿದ್ಯಾಸಾಗರಂ
ಸಮಯೋಚಿತ ಪರಿಜ್ಞಾನದಿಂ ಮುಂಜರಾಜಂಗೆ
ಬಿನ್ನಯಿಸಿದಂ "ಮಹಾರಾಜ ! ಈತನೊಡನೆಮ್ಮ
ಭೋಜರಾಜನ ಜಾತಕಮುಂ ತೋರ್ಪು ಫಲಮುಂ
ಅರಿದೊಡೊಳ್ಳಿತು."

ಒಡನೊಡನೆ ಸಭೆಯ ವಿದ್ವನ್ಮಣಿ
ಮಹೋದಯರುಂ "ಅಹುದಹುದು. ಮಹಾರಾಜ ! ನೀಂ
ಜಾತಕಮುಂ ತೋರಪೇಳ್ಕುಂ !" ಎಂದರೊಗ್ಗಿನಿಂ.
ಮುಂಜರಾಜನುಂ ವೃದ್ಧಮಹಾ ಮಂತ್ರಿವರ್ಯನ
ಮನದಾಸೆಯುಂ ಮಾನಿಸದೆ ತುಂಬಿದ ಸಭೆಯುಲಿ
ನಿರಾಕರಿಸಲ್ ಬಾರದೆ ಚಿತ್ತದಲಿ ಅಗಾಧ
ಮುಜುಗರಮುಂ ಭರಿಸಿ ತಳಮಳಿಸಿಯುಂ ತನ್ನ

→

ತಾಂ ಹತ್ತಿಕ್ಕಿ ಅವಕೃಪೆಯುಂ ತೋಱಗೊಡದೆ
ದೂತನಂ ಕಳಿಪಿದಂ ಬಾಲಕನಂ ಕರೆತರಲ್.
ಅಱಮನೆಯ ದಿವಿನಾದ ಜಗಜಗಿಸುತಿಹ ರಥಂ
ಪೊನ್ನ ಕಿರುಗೆಜ್ಜೆಯ ಸಱಗಳಂ ಗುಲುಗುಲಿಸಿ
ಹೊಱಟುದುದು ಗುರುಕುಲಕೆ. ಕೆಚ್ಚಿನ ಚತುರಾಶ್ವಗಳ್
ಕೆನೆಯುತ್ತೆ ನಾಗಾಲೋಟದಿಂದೋಡುತಿರೆ ವನ
ಗಿರಿಗಳ್ ಮಱುದನಿಗೊಟ್ಟುವು ನಿಶ್ಶಬ್ದ ತಾಣವಲಿ.
ಗುರುಕುಲದಲಿರ್ದ ಭೋಜರಾಜ ಕುಮಾಱನುಂ
ಅಱಮನೆಯ ದೌವಾರಿಕಂ ತಂದಿರ್ದ ಪೊಂದೇರ್
ಕಂಡು ಕೇಳಿದಂ “ಏಂ ವಿಶೇಷ ? ಏಕೆನಗೀ
ತುರ್ತುಕರೆ ?”

ದೌವಾರಿಕನುಂ ವಿಷಯ ಚಿಂತಾಮಣಿ
ಏನೆಂಬುದಂ ಮಾನಕೆ ತಗುವಂತೊರೆದು “ಈಗ
ಪೊರಡೈ ಕುಮಾಱ. ಆಸ್ಥಾನದೊಳ್ ಎಲ್ಲರುಂ
ಕಾದಿಹರ್ ನಿನ್ನನುಂ ಕಾಣಲೆಂದು.”

ದೂತನ
ಮಾತಿಂಗೆ ಪ್ರತಿ ನುಡಿಯದೆ ಪೊನ್ನ ತೇರಿನೊಳ್
ಕುಳಿತಂ ಅನುಜ ಜಯಂತನೊಡಗೂಡಿ. ಪಯಣಂ
ತೀರ್ಚೆ ಅಱಮನೆ ಸಭಾಂಗಣವ ಬೊಕ್ಕೊಡನೆಲ್ಲ
ಗುರು ಹಿರಿಯರಿಂಗೆ ಜ್ಯೋತಿಷ್ಕಮುನಿಗೆ ಮತ್ತಮಾ
ಮುಂಜರಾಜಂಗೆ ವಿನಯದಿಂ ಕೈಮುಗಿದಂ
ಭೋಜರಾಜ ಕುಮಾಱ. ಅಃ, ರಾಜ ಕಳೆಯುಕ್ಕಿ
ಜ್ಯೋತಿರ್ಕಿಡಿಯವೊಲ್ ನಿಂದ ಬಾಲಕನು ಕಂಡು
ಜ್ಯೋತಿಷ್ಕ ಮಹೋದಯನುಂ ಕಣ್ಣನೆ ಚಲಿಸವೆ

→

ನೋಡಿ ಕಣ್ ಮುಗಿದಂ. ಹೃನ್ಮನಂ ತುಂಬಿ ಉಕ್ಕಿ
ಕೋಡಿವರಿದ ಪರಮಾನಂದಲಹರಿ ತಣಿಸಿದುದು
ಮನ ಮತಿಗಳಂ ಮಾಗಿಯ ಮುಗಿಲ್ ಮಂಜು ಮುತ್ತಿ
ಮುಧ್ದಿಟ್ಟವೊಲ್ ! ಪಂಡಿತಂ ಭೋಜರಾಜನ
ಮುಖಾವಲೋಕನದಿಂದೆ ಭವ್ಯ ಭವಿತವ್ಯಮಂ
ಅರಿತು ಅಮಿತಾನಂದ ಭೋಗದಿಂ ಮುದಗೊಂಡು
ಹರ್ಷದಿಂ ಮುಂಜರಾಜನಿಗೆ "ಅಯ್ಯಾ, ಎನ್ನ
ಪ್ರಭುವೇ ! ಈ ರಾಜಕುಮಾರನ ಸೌಭಾಗ್ಯ
ಅಪಾರ. ಅದಂ ವರ್ಣಿಸೆ ಸಾಕ್ಷಾತ್ ಬ್ರಹ್ಮನುಂ
ಪಿಂಜರಿವುದು ದಿಟಂ. ಅಂಥ ಭಾಗ್ಯವಂತನಂ
ಕೇವಲ ಉದರ ಪೋಷಣೆಗೆಂದು ಅತ್ಯಲ್ಪ
ವಿದ್ಯೆಯಂ ಕಲಿತ ಈ ಪಾಮರಂ ಬಣ್ಣಿಪನೆ ?
ಆದೊಡಂ ಮಹಾರಾಜ, ನಿನ್ನಯ ಆಜ್ಞೆಯಂ
ಶಿರಸಾವಹಿಸಿ ಅಲ್ಪಸ್ವಲ್ಪಮಂ ವಿವರಿಪೆಂ.
ಈಗಳಿವನಂ ಅಧ್ಯಯನ ಕೇಂದ್ರಕೆ ಕಳುಹಿಸಿಬಿಡೈ."
ಎಂದಂ.

ಅದಕ್ಕೊಪ್ಪಿದ ಮುಂಜರಾಜನುಂ
ಕುವರನಂ ಗುರುಕುಲಕೆ ಕಳುಹಿಸಲ್, ಪಂಡಿತೋ-
ತ್ತಮನ್ ರಾಜನಂ ಕುರಿತಿಂತೆಂದಂ "ಪ್ರಭುವೇ,
ಭೋಜರಾಜಂಗೆ ಅತ್ಯುತ್ತಮ ಭವಿಷ್ಯಮಿರ್ಪುದು.
ಮುಂದೆ ಐವತ್ತೈದು ಸಂವತ್ಸರಗಳ್ ಏಳು
ಮಾಸಗಳ್ ಮೇಣ್ ಮೂದಿನಂ ಕೂಡಿಮಂದು ಬಹು
ದೀರ್ಘಕಾಲಂ ಗೌಡ ದೇಶವುಂ ಸೇರಿದಂತೆ
ದಕ್ಷಿಣ ರಾಜ್ಯಮಂ ಆಳುವಂ, ಇದು ನಿಕ್ಕುವಂ."

→

ಆ ಪಂಡಿತಮಹಾಭಾಗನ ಮಾತಗಳ ಕೇಳ್ದು ಮುಂಜರಾಜನ ಮುಖದ ವರ್ಚಸ್ಸು ಕಳೆಗೆಟ್ಟು ಧೃತಿಗೆಟ್ಟು ಬಾಡಿ ಬತ್ತಿದತ್ತು. ಕಡುಬೇಸಗೆಯು ಕಟ್ಟಾಸುರನೋಲಿದ ನದಿಯೊಲ್. ಆದೊಡದನುಂ ಸಭೆಗೆ ತೋರಗೊಡದಿರಲಿಚ್ಚಿ ಮರೆಸಿ ಮಿಗೆ ಕೃತಕಾನಂದ ಬುಗ್ಗೆಯುಹರಿಸಿ ಪ್ರಸನ್ನತೆಯ ಮುಖವಾಡಂ ತೊಟ್ಟು ಪಂಡಿತಂಗೆ ಇನ್ನೀಸು ಸಂಭಾವನೆಯನಿತ್ತು ಕಳುಪಿದಂ. ಮತ್ತಮಾ ಸಭೆಯುಂ ವಿಸರ್ಜಿಸಿ ತೆರಳಿದಂ ಅಂತಃಪುರಕೆ. ಭ್ರಮಿತ ಮನಮತಿಗಳಲಿ ತನ್ನ ಭವಿಷ್ಯವಂ ಜಡಿ ತುಂಬಿ ಮುಂತೇನೆಂಬ ಚಿಂತೆಯುಲಿ ನರಳಿದಂ ಮುಂಜರಾಜ. ಸಂಕಟ ದುಃಖಗಳ ಭಾರದಿಂ ತಲ್ಲಣಿಸಿದುದು ಪ್ರಾಣ. ಆನೀಗಂ ಕರ್ತವ್ಯ ಚ್ಯುತನಾದೊಡೆ ಭವಿಷ್ಯಮೆನ್ನ ತಲಿಕೆಳಗೆನೆ ತಪ್ಪಲ್ಲ. ಲೋಕದೊಳ್ ಅಪವಾದ ಬಪ್ಪುದೆನೆ ಬೆದರಿ ಕುಗ್ಗಿ ಕುಸಿದೊಡೆ ಎನಗಿಲ್ಲ ಉತ್ತಮ ಭವಿಷ್ಯಂ. ಇನ್ನೆಗಂ ಮಹರಾಜನಿರ್ದಾನು ಬೀದಿಪಾಲಪ್ಪುದರ ಬದಲ್ ಸಾವು ಹಿತಮೆಂದು ಸಿಂಹಗಾಂಭೀರ್ಯದಿಂ ಅತ್ತಿತ್ತಲ್ ಶತಪಥ ತುಳಿಡಾಡಿ ತನ್ನತಾಂ ಸೈಪಿ ದೃಢ ಮನದಿಂದೆ ಮುಂ ಕಾರ್ಯಮಂ ನಿರ್ಧರಿಸಿದನ್ ಮುಂಜರಾಜಂ. ದೌವಾರಿಯನಟ್ಟಿ ತನ್ನಾಪ್ತ ಗೆಳೆಯನಿರ್ದಾ ವಂಗದೇಶಾಧಿಪತಿಯಂ ಕರೆಸಿದಂ. ವತ್ಸ ರಾಜನುಂ ಬಲಿಷ್ಟಂ; ದೃಢಿಷ್ಟಂ. ಎಲ್ಲಮಗೆ

ವಗೆಯು ಕರ್ಮಾಕರ್ಮಗಳಿಂಗೆ ಭುಜಂಗುಡುತೆ
ಹಠದಿಂ ಛಲದಿಂ ನಿರ್ವಹಿಸುವ ಘಟಾನುಘಟಿ.
ಗೆಳೆಯ ಬಂಧುವಂ ಕಂಡೊಡನೆ ಆತ್ಮೀಯತೆಯು
ಪ್ರೇಮದಿಂ ನಲ್ಮೆಯಿಂ ಸತ್ಕರಿಸಿ ಉಪಚರಿಸಿ
ಸಂತುಷ್ಟಪಡಿಸಿದ ಬಳಿಕ ಎಕ್ಕಟಿಗೆ ಕರೆದು
ತನ್ನ ಭವ್ಯ ಭವಿತವ್ಯಕೊದಗಿದ ಸಂಕಟ-
ಸಂಕಷ್ಟಗಳನೊರೆದು ಕಿವಿಯೊಳ್ ಪಿಸುಗುಟ್ಟುತೆ
ತನ್ನ ತಂತ್ರಮಂ ಪೇಳ್ದು ಇದನುಂ ನೀನಿಂದೆಸಗಿ
ನಿನ್ನ ಪ್ರಿಯ ಸಖನಂ ಕಾಪಿಡೆಂದು ಭಾವೋ
ದ್ವೇಗದಿಂ ಬೇಡಿದಂ.
ವತ್ಸರಾಜ ತನ್ನೊಳ್
ಯೋಚಿಸಿ ಪರಿಭಾವಿಸಿ ಏಂಗೈಯ್ವೆಂಬೊಂದು
ಕಡು ಸಂಕಟದಿಂ ನಿಂತ ನಿಲುವಿನೊಲ್ ಸ್ತಂಭೀ
ಭೂತನಾಗೆ ಒಡಲಳ್ಕೆ ಬಳ್ಕಿದ ಮುಂಜನುಂ
ಸುಖೀ ಪರಿಹಾರ ಸೂಚಿಸಿ ಬೇಡುತವನಂ
ಪುರಿದುಂಬಿಸಿ ಕೊಂಡಾಡಿ ಇಂದಿನ ರಾತ್ರಿಯೇ
ಭೋಜನುಂ ಬಲ್ಮೆಯಿಂ ಕರೆತಂದು ತಂತ್ರದಿಂ
ಭುವನೇಶ್ವರೀ ಅಟವಿಗುಯ್ದಲ್ಲಿಯೆ ಶಿರಶ್ಛೇದ
ಗೊಳಿಸಿ ರುಂಡಮಂ ತಂದೆನಗೆ ತೋರವೇಳ್ಕುಂ.
ನೀಂ ತಳ್ವದೆಗೈವುದಿದಂ ಕೇಳ್ ವತ್ಸರಾಜ !"

ಆ ಕರ್ಣ ಕಠೋರತರ ಮಾತಂ ಕೇಳ್ದು ಮೈ
ನಡುಗಿ ದಿಗ್ಭ್ರಮೆಯಿಂದೆ ಯೋಚನೆಯಿಲೆ ಸ್ತಬ್ಧಗೊಳೆ
ಮನಮುಸುಗಿ ನೀರಾಗಿ ನೊಂದು ಪಡಿನುಡಿಯೆ ತುಟಿ
ಬಿರಿಯುದಾಯ್ತು. ಮೈಮುರವಟ್ಟವೊಲ್ ಮಿಣ್ಣನಾದಂ.

→

ಮುಂಜ ರಾಜನವನಂ ಚೋದಿಸಿ ಪರಿಬೋಧಿಸಿ
ಬೆನ್ತಟ್ಟಿ ಚಪ್ಪರಿಸಿ ಚಿಂತೆಗೀಗ ಸಮಯಂ
ಇಲ್ಲವೆನುತೆ ಮತ್ತೆಮತ್ತೆನೋಣ್ಮತ್ತೆ ಅನನ್ಯ
ಪ್ರೇಮ ಸ್ನೇಹದಿಂ ಒತ್ತಾಯಿಸಿ ಪುರಿದುಂಬಿಸಿ
ಆಜ್ಞೆಯಿತ್ತಂ.

ವತ್ಸರಾಜ ಗೆಣೆಯನ ಭೀಕರ
ಒತ್ತಂಕೆಗೆ ಒಳಗಾಗಿ ಒಪ್ಪಿಯುಂ ಮರುಗಿದನ್.
ಕರಗಿ ನೀರಾಗಿ ಹರಿದನ್. ಕನಲಿ ಕುದಿಯುವನ್
ತನಗೊದವಿದ ಧರ್ಮ ಪರಿತಾಪಕೆ ಮನನೊಂದು
ಕೂರ ಬಿದಿಯ ಬಯ್ದನ್ ತನ್ನೊಳ್. ಬಳಿಕ ತನ್ನಂ
ತಾನೆ ಸೈಪಿ ಗೆಣೆಯಂಗೆ ಪೇಳ್ದನಿಂತು "ಕೇಳ್,
ಮುಂಜರಾಜ ! ನಿನ್ನಯ ಕಟ್ಟಾಜ್ಞೆಯಂ ಪಾಲಿಪ
ಮುನ್ನಮೆನ್ನ ಅರಿಕೆಯನೊಂದಂ ಮನವಿಟ್ಟು ನೀಂ
ಲಾಲಿಸೈ. ಭೋಜಂ ಎಳೆಯ ಕಂದ. ಅವನೊಳೇಂ
ದ್ರವ್ಯವಿಲ್ಲ. ಸೈನ್ಯವು ಇಲ್ಲ. ಇನ್ನಾವ ಪರಿ
ಹಾರಮಿಲ್ಲ. ಅಂತೊಂದು ಕರುಣೆಯ ಕುಮಾರಂ
ನಿನಗೆಂತು ಹಾನಿಗೈದಪಂ, ನೀಂ ಜಾನಿಸೈ.
ಸಿಂಧುಲ ಮಹರಾಜನ ಏಕೈಕ ಸುಪುತ್ರನಂ
ಆನೆಂತು ಕೊಲ್ಲಲಿ ? ಸಕಾರಣಮಿರುತಿರ್ದೊಡೆ
ಸರಿಯೆಂಬೆ. ಇದೆನಗಧಿಕತರ ದುಃಖಸಂಕಟಂ."

ಗೆಣೆಯಂ ಮರುಗಿ ನುಡಿದ ಮಾತಿಂಗೆ ಕೋಪದಿಂ
ಪೇಳ್ದನಾ ಮುಂಜರಾಜ "ತಿಳಿದಿರ್, ರಾಜಾಜ್ಞೆ
ಎನಲ್ ಬೇರೆ ಮಾತಿಲ್ಲಂ. ಅಂದು ಆಸ್ಥಾನ
ಸಭೆಗೈದ ಪಂಡಿತನೊರೆದ ವಿಷಯಮಂ ನಿನ್ನ

→

ಮುಂದೊರೆದಿಹೆನ್ ಮತ್ತೇಂ ಮರುಪ್ರಶ್ನೆ ?"

"ಪ್ರಭುವೇ !

ಜೋಯಿಸನ ಮಾತಿಂಗೆ ಮರುಳಪ್ಪಿ ಇಂತೊಂದು
ಹೇಯ ಕೃತ್ಯಕೆಳಸುವರೆ? ಬರ್ದುಕಿನಲೇನಿರ್ಪುದೊ
ಅದನಾರ್ಗಳಪ್ಪು ತಪ್ಪಿಸಲ್ ? ತ್ರೈಲೋಕ್ಯನಾಥ
ಶ್ರೀರಾಮಚಂದ್ರನ ಭವಿಷ್ಯಮೇ ಗಾಳಿಂಗೆ
ಸಿಲ್ಕಿದ ತರಗೆಲೆಯಾಯ್ತು ! ಸಾಕ್ಷಾತ್ ವಶಿಷ್ಟ
ಮಹರ್ಷಿಯುಂ ಗುರುಸ್ಥಾನದೊಳಿರ್ದು ನಡೆದುದೆಲ್ಲಂ
ನೀನರಿತಿಹೆಯಲ್ತೆ? ಅನ್ನದಂ ನೀಂ ಮನದಿ
ಮತ್ತೆ ಮತ್ತೆ ಜಾನಿಸಿ ನಿರ್ಣಯಿಸು. ಆವುದೊಂದು
ಕಾರ್ಯಮಂ ಕೈಕೊಳ್ವ ಮುನ್ನಂ ಪಲವು ಬಾರಿ
ಪರ್ಯಾಲೋಚಿಸುವುದು ಮತಿ ಮಾನ್ಯರ ಕರ್ತವ್ಯ.
ಕೈಮಿಂಚಿದ ಬಳಿಕಲೇಂಗೈಯಲಾರೆಯೆನೆ ಮೋಸ
ಪೋಗದವೊಲ್ ಪುನರಪಿ ಯೋಚಿಸಿ ನೆರೆ ತರ್ಕಿಸಿ
ನಿನ್ನನೀ ಒರೆಗೆ ಹಚ್ಚಿ ನೋಡೈ ಮಹರಾಜ !
ಅಂತುಮಲ್ಲದೆಯುಂ ಸಿಂಧುಲ ಮಹಾರಾಜನ
ಪ್ರಿಯ ಕಂದನಂ ಕೊಂದೊಡೆ ಸಿಂಧುಲ ರಾಜನ
ನಿಷ್ಠೆಯ ಮಹಾ ದಂಡನಾಯಕರ್ ಸಿಡಿಗೊಂಡು
ದಂಗೆಯೆದ್ದು ದೇಶಕೋಶಮಂ ಅಲ್ಲೋಲಕ-
ಲ್ಲೋಲಗೊಳಿಸಿ ನಿನ್ನಂ ಕೊಚ್ಚಿ ಕಂಡರಿಸರೇ ?
ಯೋಚಿಸಲೆ ಮಹಾರಾಜ !"

ಗೆಣೆಯನುಪದೇಶಂ

ಕಿವಿಗಳಂ ಚೊಕ್ಕೊಡಂ ಒಪ್ಪದೆ ಮುಗ್ಗದೆ ಮಾಗದೆ
ಹಿಡಿದ ಪಟ್ಟುಬಿಡದೆ ಕಡು ಸಿಟ್ಟಿನಿಂ ರೊಚ್ಚಿನಿಂ

→

ರೋಷದಿಂ ವತ್ಸರಾಜಂಗೆ ಕಟ್ಟಾಜ್ಞೆಯ
ಖಡ್ಗ ಬೀಸಿದಂ ಮುಂಜರಾಜ ! ಕೆಂಗಣ್ಣ ಕಿಡಿ
ಕಾರಿ.” ತಿಳಿದಿರೈ, ರಾಜಾಜ್ಞೆಯಂ ಪಾಲಿಸದೆ ನೀಂ
ಮುಮ್ಮಾತಿನ ಮಳೆಗರೆವುದು ವ್ಯರ್ಥ. ನೀನೊರ್ವ
ಪಂಡಿತನೊಲ್ ವಾದಿಸದೆ ಆಜ್ಞಾಪಾಲಕನಿರ್ !”

ಮುಂಜರಾಜನ ರೋಷದೀಟಿಯುಂ ಮನವಿರಿಯೆ
ವತ್ಸರಾಜನುಂ ಮನನೊಂದು ಮರು ನುಡಿಯದೆಯೆ
ಅನುತಾಪದಿಂ ಖಿಣ್ಣನಾದಂ. ಎದೆಯ ಹಕ್ಕಿ
ಚೀರಾಡಿ ಗೋಳಾಡಿದುದು ಆರ್ ಅರಿಯುದೊಲ್.

ವತ್ಸರಾಜ ಧಣಿಯ ಅಪ್ಪಣೆಯಂ ಶಿರಸಾವಹಿಸಿ
ಪೊರವಂಟನಲ್ಲಿಂದೆ. ಮನದಿ ಮುದ್ದು ಬಾಲನ
ನೆನೆನೆನೆದು ಮರುಗಿ ಕರಗಿದಂ. ತಾನಿಂತೊಂದು
ಹೀನಕೃತಿಗೆಂತಿಳಿವೆಂ ಎಂಬ ಸಂಕಟದ
ಕದಾನ್ನವುಂಡು ರಾತ್ರೋರಾತ್ರಿಯ ಪ್ರಥಮ
ಜಾವದಲಿ ತಾನೊರ್ವಂ ಗುರುಕುಲಕುಯ್ದು ಬಾಲ
ಭೋಜರಾಜ ಕುಮಾರನ ತೇಜಸ್ವೀ ಮುಖಮಂ
ಕಂಡಂ. ಒಡನೊಡನೆ ಒಡಲಿನ ಸಂಕಟ ಘನಿಸಿ
ಭುಗಿಲ್ಗೊಂಡು ಮನದ ಕರುಣೆಯ ಕಟ್ಟೆ ಬಿರಿದುದು.
ನರನಾಡಿಗಳಂ ಶೀಳ್ವತೆರದಲಿ. ಕಟ್ಟುರಿಯ
ನೆತ್ತರ್ ಹರಿದತ್ತು ತನು ನಡುಗುವ ಪಾಂಗಿನಲಿ.
ವತ್ಸರಾಜನುಂ ತನ್ನ ತಾಂ ಜೋಕೈಸಿ ಅನನ್ಯ
ಭಾವ ಗಾಂಭೀರ್ಯದಿಂ ಬಾಲಕಂಗೆ ಇಲ್ಲದ
ಸಲ್ಲದ ನೆವವಂ ಪೇಳ್ದು ಅನುನಯ ತೋರ್ಪಡಿಸಿ
ರಥದೊಳ್ ಕರೆತರುತಿರೆ ಕಡು ದುಃಖದ ಬೇನೆಯು
ಸಂಕಟದ ಕಟ್ಟುಸಿರ್ ಒತ್ತುತಿರ್ದುದು ಕೊರಳ್. →

ಭೋಜ ಕುಮಾರನದನುಂ ವಂಚನೆಯಿಂದೇಂ
ಭಾವಿಸದೆ ವಿಣ್ಣನಿರುತಿರೆ ಪೊಳಲ ಹಾದಿಯುಂ
ಬಿಟ್ಟು ವನಪಥವುಂಬಿಡಿದುದು ಪೊನ್ನರಥಂ.
ಆಗಳಚ್ಚರಿಯು ಕುಂಡದಲಿ ಮುಳುಗೆದ್ದ ಎಳ
ಮನಮತಿಗಳ್ ಮಿಡುಕುತೇನೆಂದು ತೆಕ್ಕನೆ ಸುತ್ತ
ಮುತ್ತ ನೋಡಲ್ ದಟ್ಟಡವಿಯು ಗಿಡುಗೆಂಟೆಗಳ್
ಮುಳ್ಳುಕಂಟಿಗಳ ದಾಂಗುಡಿಗಳ್ ನೆರೆ ಮುದ್ದಿಸಿ
ನಲಿದುವು ಮುಖ ಸ್ಪೈಯುಂ ಮುಟ್ಟಿ. ಭೋಜರಾಜಂ
ವತ್ಸರಾಜನಂ ಕುರಿತು ಸಲ್ಮೆಯಿಂ ಕೇಳಿದಂ,

"ಆರ್ಯ, ಎನ್ನನುಂ ನೀಂ ಇಲ್ಲಿಗೇಕೆ ಕರೆತಂದ್ಯೆ ?
ಏಂ ವಿಷಯವಿಪ್ಲವಮಿದೆಂಬುದಂ ಹೇಳಲ್ಕೆ
ಸಂಕೆಯುಂ ಬಿಟ್ಟು. ಎನಗೇಂ ಭಯದ ಸೋಂಕಿಲ್ಲ,
ನೀಂ ಚಿಂತಿಸದೆ ಪೇಳ್ವುದೆನಗೆ, ಈ ರಹಸ್ಯಂ."

ಆಗಳಾ ವತ್ಸರಾಜನುಂ ನೊಂದು ನೋಯುತ್ತೆ
ಕಂಗಳಲಿ ಕಂಬನಿಯು ಕೋಡಿಯುಂ ಹರಿಸಿದಂ.
ದುಃಖದೊತ್ತಡದಿಂ ಗದಗದ ನಡುಗುತೆ ಮನೋ
ವೇಗದಿಂ ನುಡಿಯಲಾಗದೆ ಪಡಿನುಡಿದನವಂ,

"ಕೇಳ್ ಪ್ರಿಯಮಗುವೇ ! ನಿನ್ನ ಚಿಕ್ಕಪ್ಪನುಂ
ಕುಬ್ರಾಹ್ಮಣನ ಮಾತಿಂಗೆ ಮರುಳಪ್ಪಿ ಮತಿಗೆಟ್ಟು
ಕಡು ಸ್ವಾರ್ಥದಿಂ ಒಡಲ್ ಕಿಚ್ಚಿನಿಂ ನಿನ್ನ ನೀ
ಭುವನೇಶ್ವರೀ ಅರಣ್ಯದಲಿಂದು ತಲೆಹುಯ್ದು
ರುಂಡವಂ ತಂದು ತೋರ್ಪುದೆಂದಪ್ಪಣೆಯಿತ್ತು
ನೇಮಿಸಿಹನೆನ್ನಂ. ಅವಂಗೆನಿತೊ ಬೇಡಿದೆನ್
ಹೇಳಿ ಕೇಳಿದೆಂ. ಕ್ರೂರಮನಮತಿಯ ರಾಜಂ

→

ಒಪ್ಪದೆ ಕಳಿಸಿದನೆನ್ನಂ. ಈ ದುರ್ದೈವಿಯಂ ಕ್ಷಮಿಸೈ ಸಿರಿ ಪ್ರಭುವೆ !" ತಲೆಬಾಗಿ ಕರಗಳಂ ಜೋಡಿಸಿದನಾ ವತ್ಸರಾಜಂ. ವಿಚಾರಮಂ ಅರಿತು ಕಿಂಚಿತ್ ವಿಚಲಿತನಾಗದ ಬಾಲಕಂ ನುಡಿಸಿದಂ

"ಕೇಳ್, ವತ್ಸರಾಜಾ ! ಆವಾವ ಕಾಲದೊಳ್ ಏನೇನ್ ಆಗಲಿಹುದೊ ಅದನಾರ್ ತಪ್ಪಿಸುವರ್ ? ನೀಂ ಚಿಂಸದನಿತು ನಲಿನಲಿಯುತೆ ನಿನ್ನ ಕಾರ್ಯವೆಸಗು. ಅದರ ಮುನ್ನ ಆನೊಂದು ಶ್ಲೋಕಮಂ ಲೇಖಿಸಿ ಕುಡುವೆನದಂ ಚಿಕ್ಕಪ್ಪ ಮುಂಜ ಮಹರಾಜನಿಗೊಪ್ಪಿಸಿ ಉಪಕರಿಸಿದೊಡೆ ಸಾಲ್ಗುಂ."

ಬಳಿಕ ಭೋಜರಾಜಂ ವತ್ಸರಾಜನ ಖಡ್ಗಮಂ ಈಸಿ ಕೈಕೊಂಡು ಎಡ ಅಂಗೈಯಂ ಕೊರೆದವರ ಕೆನ್ನೆತ್ತರಂ ಬೂಜ ಪತ್ರದೊಳ್ ಶ್ಲೋಕಮಂ ಉಲ್ಲೇಖಿಸಿದನಿಂತು ಪ್ರಶಾಂತ ಭಾವದಿಂ, ಮೇಣ್ ಧೀರ ಗಂಭೀರ ಶೈಲಿಯಿಂ.

ಮಾಂಧಾತ ಚ ಮಹೀಪತಿಃ
ಕೃತಯುಗಾಲಂಕಾರ ಭೂತೋಗತಃ
ಸೇತುರ್ಯೇನ ಮಹೋದಧೌ ವಿರಚಿತಃ
ಕ್ವಾಸಾ ದಶಸ್ಯಾಂತಕಃ ।
ಅನ್ಯೇ ಚಾಪಿ ಯುಧಿಷ್ಠಿರ ಪ್ರಭೃತಯಃ
ಯಥಾದಿವಂ ಭೂಪತೇ
ನೈಕೇ ನಾಪಿ ಮಂಗತಾ ವಸುಮತೀ
ಮುಂಜ ತಯಾ ಯಾಸ್ಯತಿ ॥

→

ವತ್ಸರಾಜಂ ಬೆಪ್ಪುಬೆರಗಾಗಿ ಕಣ್ಣರಳಿಸಿ
ನೋಡಿದಂ. ಬಾಲಕನ ಮನಮತಿಗಳಲಿ ದಿವ್ಯ
ದೃಢಭಾವದ ಮಹಾ ಪ್ರತಿಭೆಯುಂ ಕಂಡು ಭಯ
ಲಜ್ಜೆ ವಿಸ್ಮಯದ ಭಾವದಿಂ ಕುಗ್ಗಿ ಕುಸಿದಂ !
ಕಂಗಳಲಿ ಶೋಕಾಶ್ರು ಜಲಬಿಂದುಗಳ್ ಥಳಿಸಿ
ಚೆಲ್ಲಿದುವು ಕಪೋಲತಲದ ಮೇಲೆ. ತೆಕ್ಕನೆಯೆ
ಮನಮರುಗಿ ಕೈಮುಗಿದು ಪರಿತಾಪದಿಂ ನುಡಿದಂ,

"ಕಂದ ! ಎನಗೇನೊದವಿಪೊಡಂ ನಿನ್ನನೆಂದುಂ
ವಧಿಸೆನಾಂ. ನಿನ್ನನುಂ ಕರೆದೊಯ್ದು ಸುರಕ್ಷಿತ
ಸ್ಥಳದೊಳಿರ್ಕ್ಕಿ ಕ್ರೂರಾತಿಕ್ರೂರ ಮಹಾರಾಜಂಗೆ
ಕೃತಕ ಶಿರಮಂ ತೋರ್ವೆಂ. ನೀನಿಲ್ಲದೆಯೆ ಈ
ರಾಜ್ಯಕುಜ್ವಲ ಭವಿಷ್ಯಮಿಲ್ಲೆನೆ ನಿನ್ನಂ
ಕೊಲ್ಲಲುಂಟೆ ? ಪ್ರಭುವೇ ! ನಿನಗೆ ಭಗವಂತ
ಪೂರ್ಣಾಯುವಂ ಈಯಲಿ. ನಿನ್ನಂ ಕಾಪಿಡಲಿ.
ನೀನಹುದು ಸಿಂಧುಲ ಮಹಾರಾಜನ ಧರ್ಮವೇ
ಮೈವೆತ್ತು ಬಂದ ಧರ್ಮಪುತ್ರ! ದೈವವೇ
ನಿನಗೆ ಶ್ರೀರಕ್ಷೆ"

ಹರಸಿದನ್ ಕಣ್ಣೊಳ್ ಕಂಬನಿಯ
ಧಾರೆ ಹರಿಸಿ. ಬಳಿಕಂ ವತ್ಸರಾಜಂ ಕಂದ
ಭೋಜನಂ ತನ್ನ ಮನೆಯೊಳ್ ಬೈತಿಟ್ಟು ನೆತ್ತರ್
ಸೊಗಡುಗುವ ಭಯಂಕರ ಭೀಭತ್ಸ ಕೃತಕ
ಶಿರಮೊಡಂ ಮುಂಜರಾಜನ ಅರಮನೆಗೆತ್ತಂ.
ಭೋಜರಾಜ ಕುಮಾರಂ ಶ್ಲೋಕರೂಪ ಹರಿಸಿದ
ಪತ್ರಮಂ ರಾಜನ ಕೈಗಿತ್ತು "ನಿನಗೆ ಕುಮಾರ

ಭೋಜರಾಜಂ ತನ್ನ ಕೊನೆಯ ಸಂದೇಶಮಂ
ಕಳಿಪಿಹನ್ ಓದಿನೋಡೈ!"
ಎಂದೊರೆದನ್ ಮಿತ್ರ
ವತ್ಸರಾಜ. ಪತ್ರದಲಿ ಮೂಡಿದ ನೆತ್ತರಿಂ
ಕೆಂಗಲಿಪ ಅಕ್ಕರಂ ಓದಿ ತಲ್ಲಣಿಸಿದಂ
ಮುಂಜರಾಜ. ಅರ್ಥವತ್ ಶ್ಲೋಕರಸಂ ಜ್ಞಾನ
ಕುಂಡದೊಳ್ ಧುಮುಕಿರಲ್ ಹೃತ್‌ತಂತುಗಳನುಂ
ಕಣ್ ಕಟ್ಟನೆ ತುಂಡಿಸಿದವೊಲಾಯ್ತು. ರಾಜನುಂ
ಘೋರ ಸಂಕಟದಿಂದುರುಳಿ ಬಿಳ್ದು ಅಳುತಳುತೆ
"ತಾನೆಂತಹ ಪಾಪಿ! ಕುಮಾರನಂ ಅನ್ಯತಃ
ಕೊಲ್ಲಿಸಿದೆ. ಈಗಳಿನ್ನೆಂಗೈವೆ ?" ಎನುತ ಅತಿ
ದುಃಖ ಸಂಕಟದಿಂದೆ ಪ್ರಲಾಪಿಸುತಲಿರಲ್
ಗೋಳಾಡಿ, ಗಳಿಗೆಯೊಳ್ ಸುದ್ದಿಯುಂ ಕಾಳ್ಕಿಚ್ಚಿನ
ಪರಿಯಲಿ ಹರಡಿದುದೆಲ್ಲೆಡೆಗಳಲಿ ರಣಗೋಳ್
ಹರಿಸಿ. ಪರಮ ದುಃಖಿತ ಪ್ರಜೆಗಳ್ ಮುತ್ತಿದರ್
ಅರಮನೆಯ ಪ್ರಾಂಗಣಂ. ದುಃಖಸಂಕಟದ ಬಿಸು
ಸುಯ್ಲು ರೋಷದುಸಿರಿನ ಬಿರುವಾತುಗಳ್ ಕೊರಳ್
ಬಿಗಿದುವು ಉರುಳ್ಗಿತ್ತು. ಎಣೆಯಿಲ್ಲದ ಗದ್ದಲ
ತುಂಬಿಬರೆ ಮುಂಜನುಂ ಕೊಚ್ಚಿ ಕಂಡರಿಸುವೊಲ್
ರೋಷವೆತ್ತುದು ಪ್ರಜೆಗಳ ಮನಂ ಮುಂಗೆಟ್ಟು.
ಮಹರಾಣಿ ಭೋಜರಾಜನ ತಾಯಿಯುಂ ಉರುಳಿ
ಬಿದ್ದು ಅಳ್ತು ಗೋಳಾಡುತ್ತೆ ಮುಚ್ಚೆವೋದಳ್.

ವಯೋವೃದ್ಧ ಅಮಾತ್ಯ ಬುದ್ಧಿಸಾಗರಂ ಕಡು
ದುಃಖ ಸಂಕಟದಿಂದೈದನರಮನೆಗೆ. ಮುಂಜನಂ

→

ತಾಗಿ ಎದುರ್ನಿತ್ತು ರೋಷದಿಂ "ಎಲೆ, ಮುಂಜ ! ನೀಂ
ಗೈದಪರಾಧ ಸಾಮಾನ್ಯಮಲ್ಲಂ. ಸ್ವರ್ಗೀಯ
ಸಿಂಧುಲ ಮಹರಾಜಂ ಮಹಾಕೃಪಾ ಸಿಂಧು !
ನಿನ್ನನುಂ ಸಂಪೂರ್ಣ ನಂಬಿ ಧರ್ಮದಿಂ ದೈವ
ನೇಮದಿಂ ಕಂದನೊಡನೆ ರಾಜ್ಯಮಂ ನಿನಗಿತ್ತು
ಶಾಂತಿಯಿಂ ನಿಶ್ಚಿಂತೆಯಿಂ ಮರಣಿಸಿದಂ. ನೀಂ
ಎಂಗೈದೆ ಅಧಮಾಧಮ ? ಮೂದಿನದ ಬಾಳ್ಮೆಗಾಗಿ
ಪರಮೋಚ್ಚ ಪರಮ ಕಂದನಂ ಬಲಿಗೊಟ್ಟಿಯಲ್ತೆ ?
ಧರ್ಮಾತ್ಮ ಭೋಜರಾಜ ಕುಮಾರನುಂ ನಿನ್ನ
ರಾಜತ್ವವನೆಂದೂ ಕೇಳ್ದನಿಲ್ಲಂ. ಸಕಲ
ಸದ್ಗುಣ ಸಂಪನ್ನ ಸರ್ವಾಂಗ ಸುಂದರ ಕಂದ-
ಸಿಂಧುಲ ರಾಜಂಗೆ ದೈವಯೋಗದಿಂ ಜನಿಸಿದ
ಧೀರ ಧೀಮಂತ ಕುವರ ನಿನಗೆಂತು ಮುಳ್ಳಿನ
ಸಂಕಮಾದ ? ಕಡು ಮೂರ್ಖ ಬುದ್ಧಿಗೆ ಶರಣಾಗಿ
ದೇವ ಕಂದನು ಕೊಂದೆ ! ರಾಜ್ಯದ ಸತ್ಕೀರ್ತಿ
ಪರಿಮಳಂ ದಿಶೆದಿಶಗೆ ಹಬ್ಬಲಿರ್ದ ಸುಯೋಗ
ಭಾಗ್ಯಮುಂ ಕಡಿದೊಗೆದೆ ! ನಿನ್ನಯ ಕಡು ಸ್ವಾರ್ಥದ
ಬಾಳ್ ಸುಡುವುದಲ್ಲದೆ ಬೇರೆಗತಿಯಿಲ್ಲ ಕಣಾ !
ನೀನಿನ್ನೆಂತು ಬದುಕಿ ಬಾಳ್ವೆಲೈ ? ದುರ್ಬುದ್ಧಿ
ದುರ್ಮ್ಮಾನ ದುರಾಶೆಗಳಿಂ ಆಜೀವ ಪರ್ಯಂತ
ದುಃಖದುರ್ಯೋಗಂ ನಿನ್ನ ಹಣೆಯಲೊರೆದಿರಲ್
ನೀನೇಂಗೈವೆ ? ಕಡುದುಃಖದುಂಬಳಿಯೆ ಎಂದಿಗೂ !"

ಚೀತ್ಕರಿಸಿ ತಿರಸ್ಕರಿಸಿದಂ, ಸಂಕಟ ದುಃಖ
ಪರಿತಾಪಗಳ ಪರವಶತೆಯಿಂದೆ. ಕಂಗಳಲಿ

→

ಕಂಬನಿಯು ಕೋಡಿ ಹರಿದುದು ಉಕ್ಕುಕ್ಕಿ. ಬುದ್ಧಿ
ಸಾಗರಂ ತೀವ್ರತರ ಹತಾಶೆಯ ಬಿಡದ ಹಿಡಿಗೆ
ಸಿಲ್ಕಿ ತತ್ತರಿಸಿದಂ. ಶೋಕರಸ ಹರಿದತ್ತು
ಹೃದಯ ತಂತುಗಳ್ ಶೀಳಿ ಹೋಹಂದದಲಿ.
ಅರಮನೆಯ ಅಂಗಣಂ ದುಃಖ ಸಂಕಟ ರೋಷ
ರೊಚ್ಚುಗಳ ಕಡಲಾಯ್ತು. ರೋದನದ ಬೀಡಾಯ್ತು.
ಭೋಜರಾಜನ ಮಾತೆ ಮಹಾರಾಣಿಯುಂ ಪುತ್ರ
ಶೋಕದಿಂ ಸಂದ ಮೂರ್ಛೆಯಿಂ ತಿಳಿದೆದ್ದಳಿಲ್ಲ.

ಅಂತೊಂದು ಸಂಕಟದ ಪರಿಸ್ಥಿತಿಯಲಿ ತನ್ನ
ಬದುಕು ನಿರರ್ಥಕವಾಯ್ತು. ಇನಿತೊಂದು ಸಂಕಟ
ಒದವಿಬಹುದೆಂದು ಅರಿತೆನಿಲ್ಲ. ಹಾ! ಇನ್ನೆನಗೆ
ಮರಣವೆ ಪರಮ ಸುಖವೆಂಬುದಂ ಬಗೆದು ಮನದೆ
ಅಗ್ನಿ ಪ್ರವೇಶಗೈದು ಜೀವಂ ಕೊನೆಗಾಣಿಸಿ
ಪಾಪವಂ ಕಳೆವೆನೆನುತಲಿ ದೃಢ ನಿರ್ಧಾರಂ
ಗೈದನಾ ಮುಂಜರಾಜ, ಒಡಲಿನ ಸಂಕಟದಲಿ.
ಅರಮನೆಯ ಮುಂತೆ ಪಿರಿದೊಂದು ಅಗ್ನಿಕುಂಡಂ
ರಚಿತವಾಗಿ ಅಗ್ನಿಯ ಅಲೆಗಳೆದ್ದು ಉರಿದುವು
ಧಗಧಗಿಸಿ. ಕೆಂಗೆಂಪಿನ ಕೆನ್ನಾಲಿಗೆಯೆದ್ದು
ಚಾಚುತ್ತಲಿರ್ದುವು ಎಟುಕಿದುದಂ ನೆಕ್ಕಿ ನೊಣೆದು
ನುಂಗೆ. ಒಡನೊಡನೆ ಮುಂದೈದ ವತ್ಸರಾಜನುಂ
ಅಮಾತ್ಯ ಬುದ್ಧಿ ಸಾಗರನಂ ಕಂಡು ಕೈಮುಗಿದು
ಎಕ್ಕಟ್ಟಿಗೆ ಕರೆದೊಯ್ದು ತಾಂಗೈದ ವಿಚಾರಮಂ
ತಿಳಿಪಿ "ಈಗಿನ್ನೊಂದು ತಂತ್ರದಿಂ ಜ್ಞಾನದಿಂ

...

ಬಯಲುಗೊಳಿಪೆ ಭೋಜ ಕುಮಾರನಂ ಎನ್ನೊಡಂ
ಸಹಕರಿಸ್ವೈ ಆರ್ಯ !"

ಎನಲತಿ ಭಾವೋದ್ವೇಗದ
ಪರಿಯಲಿ ಅಮಾತ್ಯನುಂ ತೋಷದಿಂ ಬಿಗಿದಪ್ಪಿ
ವತ್ಸರಾಜನಂ "ಹಾ, ನೀನೆನ್ನ ಪರದೈವ !
ಇನ್ನೆಬರಮೆನ್ನ ಪ್ರಾಣ ಪಿಡಿದು ಹಾಪ್ವವೊಲ್
ಇರ್ದುದು ಎದೆಯೊಳದಲಿ. ಈಗಳ್ ನಿನ್ನೊಂದು
ಮಾತಿನಿಂ ದುಃಖ ತಾಪದಿಂ ಬಿಡುತೆಗೊಂಡೆನ್ನ
ಜೀವವುಂ ಸರಾಗದಲಿ ಉಸಿರಾಡುತಿರ್ಪುದು
ಈಗಳೀಂಗೈವುದಿದೆ ಪೇಳ್ ಚೆಚ್ಚರದಿಂದೆ ?"

ಅಮಿತಾಶ್ಚರ್ಯವಾತ್ಸಲ್ಯದಿಂ ಹೃತ್ ರಸವೇ
ಹರಿದು ಬಂದಂತೆವೊಲ್ ಹೊರಬೀಳೆ ನುಡಿಗಟ್ಟು,
ವತ್ಸರಾಜನುಂ ವೃದ್ಧ ಅಮಾತ್ಯನ ಕಿವಿಯೊಳ್
ವಿಷಯುವನೊರೆದ ಬಳಿಕ ಕೇಳಿಸಿದಂ "ಅಮಾತ್ಯರೇ !
ಈಗಳೊರ್ವ ಕಪಾಲಿಕನುಂ ಬಂದಪಂ. ನೀವುಂ
ಅವನೊಡಂ ಸಹಕರಿಸಿದೊಡೆ ಸಾಲ್ಗುಂ. ಎಲ್ಲವುಂ
ಬಗೆಹರಿಸೆ ಬೇರೆ ಮಾರ್ಗಮಿಹುದು."

ಅದೆನೀಳಿಗೆ
ಅರಮನೆಯ ಮಹಾದ್ವಾರದಿಂದೈದನೊರ್ವ ಅತಿ
ವೃದ್ಧ ಕಾಪಾಲಿಕಂ. ಉಜ್ವಲಿಪ ಕೆಂಗಣ್ಣು
ದಟ್ಟ ಗಡ್ಡ ಮೀಸೆಗಳ ಅದ್ಭುತ ರೂಪಾರಿ !
ಕಾಳಗಪ್ಪಿನ ವಸನಮಂ ಉಟ್ಟು, ತುಳಸಿ ಮಣಿ
ಮಾಲೆಯಂ ಧರಿಸಿ, ಪಟ್ಟೆನಾಮುವನೊತ್ತಿ ಬಿಳಿ
ಕಣಿಗಿಲೆ, ಕೆಂಪು ದಾಸವಾಳ ಪೂಗಳಿಂದೆ

→

ಪರಿಶೋಭಿಸಿ ಸಾಕ್ಷಾತ್ ಕಾಪಾಲಿಕನೆನೆ ಘನ
ತೇಜದಿಂದೊಪ್ಪಿದ ಕೃತಕವೇಶಿ ! ಆಗಳ್
ಮುಂಜರಾಜನ ಮಂತ್ರಿಯುಂ ಅವನ ಬಳಿಗುಯ್ದು

"ಎಲೈ, ಕಾಪಾಲಿಕನೆ ! ನೀನಿಲ್ಲಿಗೈದುದೇಕೆ ?
ಏಂ ಬಂದೈ ?" ಎನಲ್ಕಾ ಕಾಪಾಲಿಕಂ,

"ಕೇಳ್ ಅಮಾತ್ಯನೆ ! ಇಲ್ಲಿ ನಡೆದೊಂದು ಘೋರ ಹತ್ಯಾ
ಕಾಂಡಮಂ ಅರಿತು ಭೋಜರಾಜ ಕುಮಾರನಂ
ಸಂರಕ್ಷಿಸೆ ದೂರದಿಂದೈತಂದೆಂ. ಎನಗಾವ
ಸ್ಥಳಮಿಲ್ಲ. ದೇಶಕೋಶವಿಲ್ಲ. ಇಡೀ ಧರಣಿ
ಮಂಡಲಂಮೆನ್ನಯಾ ವಾಸಸ್ಥಾನ. ಸದ್ಗುರು
ದೇವನುಪವೇಶದಿಂದೆನು ಜ್ಞಾನವಿಜ್ಞಾನ
ದಿನದಿನಂ ಪಿರಿದಪ್ಪಿ ದಿವ್ಯ ಅನುಭಾವಿಕ ರಸ
ಘನಿಸಿರ್ಪುದೆನ್ನಲ್ಲಿ. ಬಹುದೀರ್ಘ ರೋಗಿಯುಂ,
ಕರ್ನಾಗರ ದ್ರಂಸ್ಟ್ರರಂ, ರಣಯುದ್ಧ ರಂಗದಲಿ
ಮಡಿದರ್ಘಂ, ಶಸ್ತ್ರಾಸ್ತ್ರಗಳಿಂದಲಿ ಸರ್ವತ್ರ
ಭಿನ್ನ ಮಸ್ತಕರಾದರಂ ತಕ್ಷಣ ಗುಣಪಡಿಪ
ಅಥ ಬದುಕಿಪ ಸುವಿದ್ಯಾಧನಂ ಕರಗತನೇನಗೆ.
ಭೋಜರಾಜ ಕುಮಾರನಂ ಈಗಳ್ತೆ ಬದುಕಿಪ
ಮಹದಾಸ್ಥೆಯಿಂ ಬಂದಿಹೆನಾಂ. ನೀಮುಂ ತ್ವರೆ
ಮಾಡಿರೈ."

ಆಮಾತನಾಲಿಸಿದ ಅಮಾತ್ಯಂ
ದಿವ್ಯ ಆನಂದಾಶ್ಚರ್ಯಂಗಳಲಿ ಮುಳುಗೆದ್ದು

"ಸ್ವಾಮಿಾ ! ಅಚಾತುರ್ಯದಿಂ ನಡೆದಿದೆ ಇಂದಿನ
ಅನಾಹುತ ! ನೀಮೆಮ್ಮ ಭಾಗ್ಯದ ದೇವರೇ →

ಅಲ್ಲದೆಯೆ ಬೇರಲ್ಲ. ನೀಂ ಕೃಪೆಗೈದೀಗಳೆ
ಬರ್ದುಕಿಸಿ ಉಪಕರಿಸಿ. ಕಾಲ್ವಿಡಿದು ಬೇಡುವೆಂ."

ಕೈಮುಗಿದು ಅಡ್ಡ ಬಿಳ್ದು ಮಹಾರಾಜನೆಡೆಗೆ
ಕರೆದೊಯ್ದು ಮುಂದಿನಾ ಕಾರ್ಯಸಂವಿಧಾನಕೆ
ಸಿದ್ಧನಾದಂ.

ಒಡನೆಯೆ ಜನಸಮುದಯದಿ ಭೋಂಕನೆ
ಮೂಡಿದ ಗಲಿಬಿಲಿಯುಂ ಉತ್ಸುಕತೆಯುಂ ಮೇರೆ
ಮೀರಿದತ್ತು! ಎಲ್ಲರುಂ ತೋಷಘೋಷಮಂಗೈದು
ಕರತಾಳವಿಕ್ಕಿದರ್. ಕೈಮುಗಿದು ಬೇಡಿದರ್.
ಕಾಲ್ವಿಡಿದು ಕಾಡಿದರ್. ಭೋಜನು ಕಣ್ತುಂಬ
ಕಾಣಲೆಂದು ಕಾತರಿಸಿದರ್. ಮುಂಜನಾಗಳ್
ದುಃಖ ಸಂಕಟ ಕಳವಳಗಳಿಂ ಕರ ಜೋಡಿಸಿ
ಬೆಸಸಿದಂ,

"ಕಾಪಾಲಿಕನೆ, ನೀನೈದು ಎನ್ನಯ
ಭಾಗ್ಯದ ಪೆರ್ವಾಗಿಲ್ ತೆರೆದೆ. ಕೃಪೆಮಾಡು ನೀಂ.
ಭೋಜರಾಜಕುಮಾರನ ಜೀವವನು ತುಂಬಿಕೊಡು
ಗುರುವೆ! ಬೇಡುವೆನೈ ಕರಮುಗಿದು! ಎನಗೊದವಿದ
ದುಃಖ ಸಂಕಟಮಂ ಪರಿಕುಂ ಎಂದು." ಬೋರಾಡಿ
ಆಳ್ತು ಕಂಬನಿ ಮಳೆಗರೆದಂ" ಎಂದು

"ಅಯ್ಯ, ರಾಜನೆ!
ಭೋಜರಾಜಕುಮಾರಂ ಮಸಣದಿಂದೆದ್ದು ಬರೆ
ಪೂಜೆಗೈವೆನಲ್ಲಿ. ಅದುಭುತ ಮಂತ್ರ ಪ್ರಭಾವದ
ಪೂಜೆ ಹೋಮಗಳ್ ರುಂಡಮುಂಡಂಗಳಂ ಸರಿ
ಗೂಡಿಸಿ ಕುವರನುಂ ಅರಮನೆಗೈತರ್ಪುದು →

ಗಳಿಗೆಯೊಳ್. ತೆರನದೆಯೆ ಮಸಣಕೆ ಹೋಮದ್ರವ್ಯಮಂ
ಕಳಿಪೆಲ್ಲೈ ದೂತನೊಡನೆ. ಅಲ್ಲಿಗೆ ಆರಾರ್
ಬರದಂತೆ ಕಟ್ಟಪ್ಪಣೆಗೈ. ಆನೀಗಳ್ತೆ ಪೋದಪೆಂ.
ಬಳಿಕಲಿನ್ನಯ ಕಾರ್ಯಮಂ ನೋಳ್ಪುದು ನಿನ್ನ
ಕಣ್ಣಿನೊಳ್."

ಆಪಾತು ಕೇಳ್ದೊಡನೆ ರಾಜಂಗೆ
ಕತ್ತಲೆಯೊಳ್ ದೀಪವನು ತಂದಂತೆ, ರಾತ್ರಿಯ
ಅಂಬರದಲಿ ಸೂರ್ಯನುದಿಸಿದಂತೆ, ಕಾನನದ
ಪೆರ್ಗಡಲಿಗೆ ಹೊನ್ನಿನುರಿ ಹೊತ್ತಿದಂತೆ ಮನಸಿನ
ಘೋರಾಂಧಕಾರಕೆ ಜೆಂಬೆಳಕು ಚೆಲುವು ಚೆಲ್ಲಿದ
ಮೊಳ್ಕೆಯಲಿ ಬೆಳಕಾಯ್ತು. ಆಸೆಯ ಕುಡಿ ಕೊನರ್ದು
ಜೀವ ಹಗುರಮಾಯ್ತು. ಕುವರ ಭೋಜರಾಜನಂ
ಏನ್ತೊಳ್ಳಿಗೆ ಕಾಂಬೆನೋ ಎಂಬಾತುರಕಾತರ
ಕಾವಳಿಸಿದುದು ಮನಮತಿಗಳಂ. ಒಡನೆ ಹೋಮ
ದ್ರವ್ಯ ಪೂಜಾದ್ರವ್ಯಂಗಳಂ ಮಸಣ ಭೂಮಿಗೆ
ದೂತರೊಡಂ ಕಳುಪಿದನ್ ಮುಂಜರಾಜಂ.
ಪ್ರಜೆಗಳ ರೋಷ ದುಃಖಗಳೊರ್ಮೆಗೆ ಕರಂಗಿ
ಹರ್ಷೋದ್ಗಾರನೊಳಗಿತು ಹೋಯೆಂದುಂ ಭೋಯೆಂದುಂ
ಕುಣಿಕುಣಿದು ಕೈಸರೆಯಿಡುತೆ ಹಾಡಿ ಪಾಡಿದರ್ !
ಏನ್ತೊಳ್ಳಿಂಗೆ ಭೋಜರಾಜಕುಮಾರನಂ ತಮ್ಮ
ಕಣ್ತುಂಬ ಕಾಂಬೆವೋ ಎಂಬ ಪರಮಾಪೇಕ್ಷೆಯಿಂ
ಆತುರಾತುರದಿಂ ಎವೆಯಿಕ್ಕದೆ ನೋಡಿದರ್
ಮುಂಪಥದಲಿ ಕಣ್ಣಿಟ್ಟು. ಅರಮನೆಯಲಿ ತಾಯಿ
ಎಂತೆಂತು ಸಕಲ ಪರಿವಾರ ಗೋಳಾಡುತಲಿ
ಕಾದಿರ್ದರ್ ಕಂದನ ಶುಭಾಗಮನಕ್ಕಾಗಿ.

ವತ್ಸರಾಜನಾಗಳ್ ವೃದ್ಧ ಅಮಾತ್ಯ ಬುದ್ಧಿ
ಸಾಗರನೊಡಂ ನಡೆದನ್ ಮಸಣಕೆ. ಕಾಪಾಲಿಕನ
ಪೂಜೆ ನಡೆದಿರ್ದುದು ಎಡವಿಡದ ಪರಮ ಮಂತ್ರ
ಘೋಷದೊಡನೆ. ನಸವೊಳ್ತುರುಳಿದ ಬಳಿಕಂ "ಭೋ
ಪರಾಕ್ ! ಭೋಜರಾಜ ಜಯಹೋ ! ವಿಜಯೀ ಹೋ !"
ಎನುತೆ ಪೆರ್ ಧ್ವನಿಯುಲಿ ಉದ್ಘೋಷಿಸಿದಂ, ವೃದ್ಧ
ಕಾಪಾಲಿಕಂ ! ಒಡನೆ ಎಲ್ಲೆಡೆಗಳಲಿ ದಿವ್ಯ
ಘೋಷದ ಮೊಳಗು ಕರ್ಣಭೇರಿಯಾದತ್ತು. ಇಂ
ಭೋಜರಾಜಂ ಕಣ್ದೆರೆದನಿಲ್ಲಂ. ಮಾತಿನ
ಸೊಲ್ಲು ಕೇಳ್ವುದಿಲ್ಲಂ. ಅನಿತಶೊಳೆ ದಿವ್ಯ ಜಯ
ಘೋಷ ! ನಿಲ್ಲದ ಘೋಷವೇ ಘೋಷ ! ರಾಜ್ಯರಥಿ
ಪುಳಕಗೊಳ್ವವೊಲ್ ನಡೆದತ್ತು ಘೋಷದಾವೇಶ.
ಆಗಳೇಂ ಸಗ್ಗವೇ ಧರೆಗಿಳಿದು ಬಂದುದೋ,
ಸುಗ್ಗಿಯ ಸಡಗರ ಸಂಜನಿಸಿದುದೊ ಎನೆ ಒಡನೆ
ಮುಂಜರಾಜನ ಮೇಣೆಲ್ಲರ ತೋಷದ ದನಿಯುಂ
ಹರಿದತ್ತು ಲೋಕೋತ್ತರವಾಗಿ. ರಜನಿಯ ಚಂದ್ರ
ಶೋಭೆಯುಲಿ ಅರಮನೆಯ ಆನೆ ಕುದುರೆ ಸೈನ್ಯದಳ,
ಅನನ್ಯ ಸುರಮ್ಯ ವಾದ್ಯದಳ, ಕಳಸ ಕನ್ನಡಿ
ಪಿಡಿದ ಸ್ತ್ರೀದಳ ಎಲ್ಲವಂ ತರುಬಿ ಮುಂಕೊಂಡು
ನಡೆದುದು ಹಿರಿದಂಡು ಮಹಾರಾಜ ಭೋಜನಂ
ಸುಸ್ವಾಗತಿಸಲ್ ಮಸಣದ ಹಾದಿಯಂ ಪಿಡಿದು.
ಉರಿವ ಪಂಜುಗಳ್ ಇಕ್ಕೆಲದಲಿ ಧಗಧಗಿಸಿ
ಉರಿದಿರೆ ನಿಶಿಗಳ್ತಲೆಯ ಕೊಲೆಗೈದು ಬೆಳಕಿನ
ಬೆಳ್ಳಂ ಬೆಳಗು ಹರಡಿದತ್ತು ಪಗಲಿನಂತೊಲ್.

→

ಆವೊಳ್ತಿಗೆ ವತ್ಸರಾಜಂ ಕಾಪಾಲಿಕನೊಡಂ ಭೋಜರಾಜ ಕುಮಾರನಂ ಕರೆತಂದಂ ರುದ್ರ ಭೂಮಿವಾಗಿಲಿಂ.

ಬೆಳುದಿಂಗಳ ಹಾಲ್ಬೆಳಕಿನ ಜೊನ್ನ ರಾಶಿಯೊಳ್ ಮಿಸುನಿಯ ಲೇಪವಂ ಒತ್ತಿದೊಲ್ ಚೆಲುವಾಯ್ತು ಸಿಶಿಯು ಇನಿವೊಳ್ತು. ರಾಜ ಮುಂಜಂ ಮುಂದೈದು ಕಂದನಂ ಬಿಗಿದಪ್ಪಿ ಕಾಲ್ವಿಡಿದು ಕೈಮುಗಿದು ಕ್ಷಮೆಬೇಡಿ ಮುಂಡಾಡಿ ಕಂಬನಿಯು ಕಾಣಿಕೆಯನಿತ್ತು ಬೋಳೈಸಿದನ್. ಪಶ್ಚಾತ್ತಾಪ ದುಃಖ ಸಂಕಟಗಳ ಝುರಿಯುಂ ಕೋಡಿವರಿದುದು ಎಣೆಯಿಲ್ಲದವೊಲ್. ಸಂತಸದಿಂ ನಗೆಮಾತಿನ ಮರ್ಮರ ಹರಿಸಿ ಕತ್ತಲೆಯ ರಾತ್ರಿಯಂ ಬೆಳಗಿ ತೊಳಗುವೊಲ್ ಬೆಳಕೀವ ದೀಪದಾನಿಗಳನುಂ ಮುಂದಿರ್ಕಿ ಸುಮಂಗಲೆಯರ್ ಮಂಗಳಾರತಿಯ ಬೆಳಗಿದರ್ ಹಣೆಗೆ ತಿಲಕವಿಟ್ಟು ಸೆಲೆ ಸುಗಂಧಿತ ಕುಸುಮಗಳ ಸೇಸೆಯಂ ತಳಿದು, ಕಂದನಂ ಬರ ಸೆಳೆದಪ್ಪಿ ಪೊನ್ನರಥದೊಳ್ ಕರೆತಂದರರಮನೆಗೆ.

ತರುವಾಯಿ ಮುಂಜನುಂ ಶುಭಮುಹೂರ್ತವನರಸಿ ಕುವರ ಭೋಜರಾಜಂಗೆ ಶಾಸ್ತ್ರೋಕ್ತಪೂರ್ವಕ ಪಟ್ಟಾಭಿಷೇಕವಂಗೈದು ಅತಿಥಿ ಅಭ್ಯಾಗತ ಕೋಟಿಯಂಗೂಡಿಸಿ ಸಮಾರಂಭವೇರ್ಪಡಿಸಿ ರಾಜ್ಯಕೋಶವಂ ಕಂದನಿಗಿತ್ತು ತಾಂ ರಾಜತ್ವಂ ಬದಿಗೊತ್ತಿದಂ. ವೃದ್ಧ ಧೀಮಂತ ಅಮಾತ್ಯ ಬುದ್ಧಿ ಸಾಗರನ ಧರ್ಮ ರಕ್ಷೆಯೊಳ್ ಕಾಪಿಟ್ಟು,

→

ಭೋಜರಾಜನಂ ಮುದ್ದಿಟ್ಟು ಮುಂಡಾಡಿ ಏಗೆ
ಉಪಚರಿಸಿ ತನ್ನೊಡಲ ಕುಡಿ ಜಯಂತನಂ ಪರಮ
ಸುತ ಭೋಜರಾಜನಿಂಗೊಪ್ಪಿಸಿ ಸುತರೀತ್ವರಂ
ಹರಸಿದಂ. ಮನತುಂಬಿ ಜೋತೈಸುವ ಮಾಳ್ಕೆಯುಲಿ
ತಲೆ ಮುಟ್ಟಿ ನಿಳುಪಿದಂ. ಕಾಮಕಾಮನೆಗಳಂ
ಜಡಿಕುಟ್ಟಿ ಬದಿಗೊತ್ತಿ ತನುಮನಗಳಂ ಇಷ್ಟ
ದೈವದ ಪರಿಪಾವನ ಪಾದ ಪಂಕೇಜಗಳಿಗೆ
ಬಿಗಿದು ದೃಢಮನದಿಂ ವರ್ಣಾಶ್ರಮದ ಹಾದಿ
ಹಿಡಿದಂ.

ವನ ವಿಹಂಗಗಳ್ ಹಾಡಿ ಪಾಡಿದುವು.
ಮಧುಕರಿಗಳ್ ಝೋಝೋಯೆಂದು ಝೇಂಕರಿಸಿದುವು
ಪೂವಿನಿಂ ಪೂವಿಂಗೆ ಪಾಯ್ದು ಪರಿತೋಷದಿಂ,
ಮೃದು ಮಂದ ಶೃತಿಯುಂ ಮಿಗಿಂಟೆ. ಸುಮಕೋಟಿ
ವರ್ಣವರ್ಣಗಳಿಂ ಬಹು ಪರಿಮಳಗಳಿಂ ನೆರೆ
'ಘಂ' ಎಂದು ಘ್ರಾಣೇಂದ್ರಿಯಮುಂ ಮುತ್ತುತಲಿರಲ್
ಗಂಧಮಯಮಾಯ್ತು ನಗರಿಯಗಲಂ. ದಳಬಿರಿದು
ಪೂವಳಿ ರಮಣೀಯಮಾದತ್ತು ಪುಷ್ಪಗಳ
ಪರಿಷತ್ತು. ಸುಯ್ಯನೆಯ ಸುಯ್ದುಯ್ದು ಸುಳಿಸುತ್ತಿ
ಒಯ್ಯೊಯ್ಯನೆಯ ಬೀಸಿವೀಸಿ ಬರುತಿಹ ಮಂದ
ಮಂದಾನಿಲನ ಮೃದು ಸ್ಪರ್ಶವದು ಮನಮತಿಗೆ
ಆಪ್ಯಾಯಮಾನಂ. ಮಧುರ ಮೋಹನೀಯಮಾ
ತಸಿಪೊಳ್ತಿನಲಿ ತಣ್ಪಿನ ತನಿರಾಶಿ ಒತ್ತೊತ್ತಿ
ತಣಿಸೆ ತನುಮನವಂ. ದೇವೇಂದ್ರನರಮನೆಯ
ಅಂಗಳದೊಳ್ ಸುರಗಿಯ ಪೂಗಳ್ ಅರಳಿ ಉಮರಿ

→

ಚೆಲ್ಲಿಸೂಸಿದುವೊ ಎನೆ ಪುಷ್ಪಮಯಮಾದುದಾ
ಭೂತಲ ಸುರಗಿಯ ಸುಮ ಸೇಸೆಯು ಸುರಿದು ಹರಡಿ.
ಮಾಮರದ ಹೊದರಿನೊಳ್ ಹುದುಗಿ ಹಾಡುವ ಕವಿ
ಕೋಗಿಲೆಯ ಕಮನೀಯ ಕಂಠದುಲಿಯಲಿ ಹರಿದುದು
ವಸಂತೋದಯದ ರಮ್ಯ ವಸಂತಗಾನ ರಸ;
ಭೋಜರಾಜ ಕುವರನ ವಿಜಯದ ತೋಷಕೆ !

— o —

ಶಬರಿ ತಾಯಿ

ಯಾದೃಶೀ ಭಾವನಾಯತ್ರ
ಸಿದ್ಧಿರ್ ಭವತಿ ತಾದೃಶೀ ।

ಇಂದ್ರದಿಗ್ನಗರಿಯಿಂ ಸುಯ್ಸುಯ್ಯನೆ ಸುಯ್ಯುತೆ
ಸುಯ್ಯು ಬಹ ಮಂದಾನಿಲನ ಮೃದು ಮಧುರತಮ
ಸುಖಸ್ಪರ್ಶ ಹಿತವಾಯ್ತು ಶರೀರ ಸಂಪದಕೆ.
ಚಂದ್ರ ಬಂಧುರ ತನಿರಾತ್ರಿಯ ಸುರ ಸೌಂದರ್ಯಮಂ
ಆಸ್ವಾದಿಸಿತು ಹೃದಯಧಾತ್ರಿ. ಕರ್ಣಮನಗಳ್
ನಲಿಸಲಿದುವು ಮೈಗೊಂಡ ಅಗಾಧ ಬಳಲ್ಕೆಯುಂ
ಮರೆತು. ಹುಣ್ಣಿಮೆಯ ಚಂದ್ರಮನ ಧವಳಕಾಂತಿಯು
ಇಡಿ ಪರ್ಣಕುಟಿಯ ಕಿಂಡಿಕಿಂಡಿಗಳಲಿ ತೂರಿ
ಬರುತಿರೆ ತಿಳಿಬೆಳಕಿನ ಹಸುವು ಹಾಲು ಹರಿದವೋಲ್
ಎಲೆವನೆಯನು ಬೆಳ್ಳಂ ಬೆಳಗಿತು ಹಗಲಂ ಮೀರಿ!
ಪುಲ್ಲಾಸಿನೊಳೊರಗಿರ್ದ ಹಣ್ಮುದುಕೆ ಶಬರಿಯು
ಕಣ್ಣೆವೆಯ ಮಿಟುಕಿಸದೆ ನೋಡಿದಳ್ ಚಂದಿರನ
ಶ್ರೀರಕ್ಷೆಯಂ. ಕಂಗಳಿಗೆ ನಿದ್ದೆ ಬಾರದಿರೆ
ತಲೆಭಾರ, ಮೈಭಾರ. ಆದರಾ ಹುಣ್ಣಿಮೆಯ
ಚಂದಿರನ ಸುಸುಂದರ ರಾತ್ರಿಯಲಿ ನಿದ್ದೆಯುಂ
ಇಲ್ಲದಿರ್ಪುದೇ ಲೇಸೆನಿಸಿತು ಮನಮಂಡಲಕೆ.
ಬೆಳ್ದಿಂಗಳ ಕ್ಷೀರಸಮುದ್ರ ಹರಿದಿರೆ ಸುತ್ತ
ಸದ್ದಿಲ್ಲದ ಶಾಂತಿ ಸೌರಭವನಾಸ್ವಾದಿಸುತ
ನೆಟ್ಟ ನಿಟ್ಟಾಲಿಗಳ ಕೀಲಿಸದೆ ನೋಡಿದಳ್
ಶಬರಿತಾಯಿ ಎಡೆ ಮುಚ್ಚದೆ. ಮಧ್ಯ ರಾತ್ರಿಯುಂ

→

ಕಳೆದು ಪೊಳ್ತುರುಳಿ ಅಭಿಜಿನ್ ಮುಹೂರ್ತವುಡರಿರೆ
ಮುಗುಳ್ ನಗುತೆದ್ದು ಕುಳಿತಳ್ ತಾಯಿ ಶಬರಿ ತನ್ನ
ಪುಲ್ವಾಸಿನ ಮೇಲೆ. ಕುಟಿಯ ಕಿಂಡಿಯಲಿ ನೈ
ದೋರಿರ್ದ ಶೀತಾಂಶುವಂ ನಿಟ್ಟಿಸಿದಳ್ ಮಿಗೆ
ಆನಂದ ತುಂದಿಲತೆಯಿಂದೆ. ತುಂಬಿ ತುಳುಕಿತು
ಹೃದಯಾಬ್ಧಿ ತೋಷದ ರಸಧಾರೆಯಿಂ. ನದೀ
ಸ್ನಾನಕುಯ್ವನೆನೆ ಇಂ ಪ್ರಾತಃಮುಹೂರ್ತ ಬಳಿ
ಸಾರ್ದುದಿಲ್ಲ. ನಿದ್ದೆಯಿಂದ ಕಣ್ಗೆ ವಿಶ್ರಾಂತಿ
ಈವುದೆನೆ ಕಣ್ಮುಚ್ಚಿ ಧ್ಯಾನಿಪುದು ಸರಿಯೆನಿಸಿ
ಕಣ್ಮುಗಿದು ಕುಳಿತಳ್ ತಪಃಭಂಗಿಯಲಿ. ಪೊಳ್ತು
ಉರುಳಿದುದು ಭಕ್ತಿಧ್ಯಾನದ ಸ್ಫೂರ್ತಿಯಲಿ ನೈಮನ
ಮರೆತು. ಭಾವನಾ ಭಿತ್ತಿಯಮೇಲೆ ಮೂಡಿದುದು
ಗಗನನೀಲಾಭನ ಸುರಸುಂದರ ಚಿತ್ತಾರ.
ದಾಶರಥಿಯಂ ಕಾಂಬ ಪಂಬಲಂ ಇನ್ನಿನಿತು
ಘನಿಸಿ ಎದೆ ತುಂಬಿದುದು ಪರಿಪುಣ್ಯ ಯೋಗದಲಿ.

ಅಂದು ಗುರು ಮತಂಗ ಮುನಿಪಂ ತನಗೊರೆದುತ್ತೆ
ಇನ್ನೆಬರಮಿಲ್ಲಿಗೇಕೈತರಲಿಲ್ಲವೋ, ಆ
ಘನಪುಣ್ಯನಾವ, ದಾಶರಥಿ ? ಆನೇಸೊಂದು
ವರ್ಷಗಳಿಂ ಕಾದಿರ್ಪೆನಿಲ್ಲಿ ? ಎಡೆವಿಡದೆ ಕಾದು
ಮನಂಗೆಟ್ಟು ನಿರಾಶೆಯುಕ್ಕುತಿದೆ ಎದೆಯಲ್ಲಿ.
ಅಂದಿಂದಿಗುಂ ದಶರಥ ರಾಮನ ದರ್ಶನವ
ಬಯಸಿ ಪಾಲ್ಪಣ್ಣುಗಳ ಸಂಗ್ರಹಿಸಿ ಇಡುತಿಡುತೆ
ಪಾಳುಗೆಯ್ದಾಯ್ತು. ನಿನ್ನೆಯ ಪೂಗಳೇಗಳ್ತಿ ನೆರೆ
ಬಾಡಿ ಬತ್ತಿವೆ. ರಾಮ ಲಕ್ಷ್ಮಣರೈತರ್ಪರ್

→

ಎಂಬೊಂದು ಹಿರಿಯಾಸೆಯಲ್ಲಿ ಫಲಪುಷ್ಪಗಳ
ಸಸ್ಯಮಂ ನೆಟ್ಟು ಬೆಳೆದೆ. ದಿನದಿನ ಪೂಮಾಲೆ
ವಿರಚಿಸಿ ತಣ್ಣೀರ್ ಚಿಮುಕಿಸಿ ಕಾದಿರಿಸಿದೆನ್.
ಹಾದಿ ನೋನೋಡುತೆ ಕಳೆದುವು ಆರೈದು ದಿವ್ಯ
ಸಂವತ್ಸರಂಗಳ್. ಅಯೋಧ್ಯಾಪತಿ ಬಂದಾನೊ,
ಬಾರನೊ ತಿಳಿಯಲ್ಬಾರದೆ ಕಂಪಿಸುತಿದೆ ಅಸು!
ಶ್ರೀರಾಮ ದರ್ಶನದ ಮುನ್ನ ಅಳಿದೊಡೆನಗಿಲ್ಲ.
ಸದ್ಗತಿ. ಮನದ ಹಂಬಲ ಇಳಿಯುತಿದೆ ಎದೆಯ
ಕುಂಡಕೆ. ಕುದಿಕುದಿಸಿ ಕರಗಿಸಿ ಕೆಂಬೆಂಕೆಯಲಿ
ಸುಟ್ಟುರಿಸುತಿದೆಯೆನ್ನ. ಹಾ, ಎಂತು ತಾಳ್ವೆನೋ
ಕಾಣೆನೈ ಶ್ರೀರಾಮ! ಸೀತಾಪತೆ! ದಶರಥ
ನಂದನ! ಬಡ ಮುದುಕಿಯ ಮೊರೆಯಲಾಲಿಸೈ ಹೇ,
ಪರಿ ಪಾವನ ಮೂರ್ತೇ! ಕೈಮುಗಿದು ಬೇಡುವೆನೈ
ಕಾಲ್ವಿಡಿದು ಕಾಡುವೆನೈ ಜಾನಕೀ ಮನದನ್ನ!

ಕುಳಿತಲ್ಲೆ ಧ್ಯಾನಿಸಿದಳ್ ವೃದ್ಧ ಶಬರಿ ತಾಯಿ.
ಪೊಳ್ತರಳೆ ಮುಂಗೋಳಿಗಳ್ ಕೂಗಿದುವು ತಮ್ಮ
ಕೊರಳೆತ್ತಿ. ಕೊಕ್ಕೊಕ್ಕೋ! ಕೊಕ್ಕೊಕ್ಕೋ.... ! "ಆಃ,
ಇಡಿ ರಾತ್ರಿಯುಂ ಕಳೆದಿಹೆನ್, ರಾಮ ಧ್ಯಾನದಲಿ.
ನಿದ್ದೆಯಿಲ್ಲದೊಡೇಂ? ಮನೋಮಂಡಲ ಹರ್ಷದ
ಕಡಲಲಿ ಮುಳುಗೆದ್ದಿತು. ಹೃದಯ ಮರ ಪವಿತ್ರ
ತೀರ್ಥದಿಂ ತುಂಬಿ ಹಸನಾಯ್ತು. ಈ ದೇಹದೊಳ್
ಉಸಿರಿರುವನಕ ಕಾಯುವೆನಯ್ಯಾ ಶ್ರೀರಾಮ!"
ಬೇಡಿದಳ್.... ಬೇಡಿದಳ್. ಕೊರಳ್ತುಂಬಿ ಬೇಡಿದಳ್
ಶಬರಿ ತಾಯಿ. ಭಕ್ತಿ ಸಮುಜ್ವಲತೆಯಿಂ ಅಶ್ರು

→

ಬಿಂದುಗಳ್ ಮೊಳೆತುವು ನಯನದ್ವಯಂಗಳಿಂದೆ.

ಮೂಡಣ ದಿಗ್‌ದೇಶದಲಿ ಮೂಡಿತು ನಸುಕಿನೆಳೆ
ಬೆಳಕು ಚಂದನಕಾಂತಿಯು ಹೆಮ್ಮುಗಿಲುಗಳಂಚನು
ಕೋರೈಸಿ ತುಳುಕಿದ ತೆರದಿ. ತನಿವೆಳಗಿನ ತಂಪು
ಸೂಸುವ ತನಿಯಿಂಪು. ಕುಸುಮಕೋಟಿಯುಗುವ ಸರು
ಗಂಪಿನ ಸೆಂಪು. ಸುಪ್ರಭಾತವಂ ಸಾರುವ ಗಾನ
ಯೋಗಿ ಕೋಗಿಲೆಯ ಕೊರಳ ದನಿಯ ಮನೋರಮಾ
ಶೈಲಿಯೊಗೆದ ಸೊಂಪು ಸಮ್ಮಿಳಿಸಿ ಬಹುರಮ್ಯತಾ
ಮುದ್ರೆಯೊತ್ತಿದ ಚಂದನ ಕಾಂತಿಯ ಮುಂಬೆಳಗು.
ವೃದ್ಧೆಯುಂ ಮುಂಬಾಗಿಲ್ ತೆರೆದು ಎಳೆಬೆಳಕಿನ
ಉಷೆಯಂ ಬರಮಾಡಿದಳ್ ಕೈಮುಗಿದು. ಚಣಚಣ
ಮಿಂಚಿ ಬಂದುದು ಹೇಮರತ್ನ ಪ್ರಭೆಯು ಬ್ರಹ್ಮ
ಗಿರಿ ಶೃಂಗ ಶಿಖರದ ಮೇಲೆ : ಆಪ್ಯಾಯಮಾನ
ತೇಜದಲಿ ಉಜ್ವಲೋಜ್ವಲಿಸಿದ ಬೆಳಕಿನ ರಾಶಿ.

ಉರುಳುರುಳು ಸುಮಾನಸ ಸಾಗರವೆ, ಮುನ್ನೀರ
ಅಲೆಗಳಾಗರವೆ, ತೆರೆತೆರೆಗಳ ನಳಿದೋಳ್ಗಳ್
ಬಾಚಿ ಆಲಂಗಿಸಿ ಭವಿಷ್ಯ ಧರಿತ್ರಿಯನುಂ
ವರುಷ ಶತಗತವಾದರಳಿಯದನುರಾಗದಲಿ,
ಸಂಬಾಳಿಸು ಸುಹರುಷದ ಭೋಗಕಾಗಿ. ಉರುಳುರುಳು
ಯೋಚನಾ ಸಂಯೋಜನಾ ಸುಗಂಭೀರ ನಿಧಿ
ಹರಿಯಲೀ ಹೃತ್ ಕುಂಡಲಿಯಲಿ ತುಂಬಿ ಕೋಡಿ
ಹರಿವ ತೆರದಲಿ. ಚಂದ್ರಮ ಶೀತಲ ಶಾಂತಿಯಲಿ
ನಸು ಪಿಡಿದು ಎನ್ನೀ ಎದೆಮರುಧರೆಗೆ ಹರಿಯಲಿ
ಶಾಂತಿ ರಸವಾಗಿ. ಚಿಂತನಾದ್ರವ್ಯ ಅರಳ್ದು

ಇರವಂತಿಗೆಯ ತಂಪು, ಆದಿರ್ಗಂತಿಯ ಸೊಂಪು
ಪಾದರಿಯುಲರ್ಗಂಪು ಕೂಡಿದ ಸೊರ್ಕುಗಂಪುಂ
ಕೇತಕಿಯ ಕಂಪೆಸೆದಂತೆ ದಿವ್ಯ ಕಂಪೆಸಗುಂ
ಸೆಲೆ ಹೃತ್ ಪಾಟಿಯೊಳ್. ಉರುಳುರುಳು ಭಾವನಾ
ಸಂಭಾವನಾ ಧಾರೆಯುಲಿ ಕೆಂಬೆಂಕೆ ವಿಾಹದೊಳ್
ಮಿಂದೆದ್ದ ಮೊದಲ ದಿನದಂದು ಎನ್ನಯ ಜಡ
ಜಾಳ್ಗಿಂಬಿತ್ತ ಧಾತ್ರನೆ, ಮುಂದೆಯುಂ ಎನ್ನ ಕಣ್
ಬೆಳಕು ನಂದುವನ್ನ, ಹೃತ್ ದೀಪ್ತಿ ಆರುವನ್ನ
ಲೇಖನಿಯ ಉಲ್ಲೇಖವಾಹಿ ಹರಿಯುಲೀ ಭವ
ಭಂಗ ಬನ್ನಗಳನರಗಿಸುವಂತೆ ಅನುದಿನಂ.

ಶಬರಿತಾಯಿ ನಸುದೂರದೊಳ್ ಜಳಜಳಿಸುತ್ತೆ
ಪೊನಲ್ವರಿವ ಯಮುನಾನದಿಯ ತೀರಮಂ ಗುರಿ
ಗೊಂಡು ಪೊರವಂಟಳ್ ಪ್ರಾತರ್ವಿಧಿಯಂ ಪೂರೈಸೆ.
ಸುತ್ತುಮುತ್ತಣ ಆಶ್ರಮದಿಂದೈದ ಮುನಿಜನಂ
ಮುನಿಪತ್ನಿಯರ್ ಚಿಣ್ಣ ಬಾಲಕ ಬಾಲಕಿಯರ್
ನೆರೆದು ತಂತಮ್ಮ ವಿಾಹಮಂ ತೀರ್ಚಿ ನೀರಿನ
ಬಿಂದಿಗೆಗಳಂ ಪೊತ್ತು ಪೊರಡುತಿರ್ದರ್ ಕುಟಿಗೆ.
ತೀರದ್ರುಮಗಳ ಸಿರಿ ಸೊಬಗು ಎಣೆಯಿಲ್ಲದೊಲ್
ಜಳಜಳಿಸಿ ಪೊನಲ್ವರಿವ ಯಮುನಾ ನದೀ ಜಲ
ರಾಶಿ ; ರಜತಪಟ್ಟದೊಲ್ ಮಿಂಚಿ ಮಿನುಗುವ ಸ್ವಚ್ಛ
ಸ್ಫಟಿಕ ಸೈಕತ ಶಯ್ಯೆಯ ಹಾಸಿನಲಿ ಚಿಣ್ಣರ್
ನಲಿದಾಡುವ ಮೋಹಕ ಚಿತ್ರ ; ಎಲ್ಲವುಂ ಕಣ್
ಸೆಳೆಯುವಂತೆ ಸಂದೃಶ್ಯಮಾನಂ. ಶಬರಿ
ನಸುವೊಳ್ನು ಮಿತ್ರ ಬಳಗದೊಡಗೂಡಿ ಮುದದಿಂ

↓

ಮಾತಾಡಿ ರಾಮಬಾರ್ತೆಯಲಿ ಮುಳುಗಿ ತನ್ನ
ಎದೆಯ ಹಾರೈಕೆಯುಂ ಕಳಕಳಿಯಿಂದೊರೆಯುತ್ತೆ
ರಾಮಲಕ್ಷ್ಮಣ ಸೀತೆಯರ್ ಎಂದಿರ್ಪೈತರ್ಪರೋ
ಎಂದರಿದವರಿಂ ಕೇಳ್ದು ತನ್ನ ಮನಃಪಕ್ಷಿಯು
ಆತುರ ಕಾತರಕಿನಿತು ಸಾಂತ್ವನವ ನೀಡಿದರ್
ಕಿವಿಗೆತ್ತ ಬರಿ ಕಂತೆ ಪುರಾಣದ ಸುವಾರ್ತೆಯಿಂ.
ಏಕಾಂಗಿತನದ ಬೇಸರವ್ಪೊಗೆದು ಸಡಗರಿಸಿ
ನಿತ್ಯ ಕರ್ತವ್ಯವಂ ತೀರ್ಚಿ ನಡೆದಳಲ್ಲಿಂದೆ.

ನದೀ ತೀರದಿಂ ಪಿಂದಿರುಗಿ ಕುಟಿಯಂಗಣಕೆ
ಬರುವನ್ನ ತನ್ನ ಗೆಣೆಯ ವೃಂದವೆನೆ ಹಲಕೆಲ
ಕಪೋತಂಗಳ್ ನವಿಲ್‌ಗಳ್ ಕಾದಿರ್ದುವು ಕೊರಳ್
ಧ್ವನಿ ಹರಿಸುತೆ, ತಾಂ ಬೀರುವ ಬೊಗಸೆಯಷ್ಟು
ಕಾಳುಕಡ್ಡಿಗಳಿಗಾಗಿ. ಶಬರಿಯುಂ ಒಳಗುಯ್ದು
ತುಂಬು ಕೊಡವನಿಳುಪಿ ಕೈಬೊಗಸೆಯೊಳ್
ತಂದಳವುಗಳಿಗೆ ಗೋಧಿಯ ಕಾಳು ನೆಲ್ಲುಗಳ.
ಆಗಳೀಂ ಪುಟಿಪುಟಿದ ಅವುಗಳಂದ ಚೆಂದದ
ನವುರುದನಿಯ ಸುಂದರ ಕ್ರೇಂಕಾರ? ಮನಮುಕಿಗೆ
ತೋಷ ಮುದ್ರೆಯೊತ್ತಿದ ಶಬರಿ ಪ್ರಸನ್ನ ಮುಖ
ಬಿಂಬದಲಿ ಮುಗುಳ್ನಗೆಯುರಳಿಸುತೆ ನೋಡಿದಳ್
ಕಣ್ಣೆಟ್ಟು. ಗಳಿಗೆಯೊಳಗಾಗಿ ಕಾಳು ಹೆಕ್ಕಿದ
ಪಕ್ಷಿವೃಂದ ಅಲ್ಲಲ್ಲಿ ಅಡ್ಡಾಡಿ ಕುಪ್ಪಳಿಸಿ
ತಮ್ಮ ಕಣ್ ತಪ್ಪಿಉಳಿದ ಕಾಳುಗಳಿಗಾಗಿ ಅರಸುತೆ
ಕೊಕ್ ಕರಿಸಿ ಪಿಂದಿರುಗಿ ಬೊಕ್ಕುವು ಅರಣ್ಯವಂ.

ಬಳಿಕಲಾ ತಾಯಿಯುಂ ಗೋವು ಕರುಗಳ್ ಬಿಟ್ಟು

→

ಹಾಲು ಹಿಂಡಿ ಅಟ್ಟಿದಳ್ ವನಾಂತರಕೆ. ನಿತ್ಯ
ನಿಚ್ಚಟದ ಕಾರ್ಯಭಾರಮಂ ಪೂರೈಸಿದ ಶಬರಿ
ಅಂಗಣಕೆ ಗೋಮಯಂ ತಳ್ತು ಗುಡಿಸಿ ಸಾರಿಸಿ
ಸದೆಕಿತ್ತು ಕಸವೊಗೆದು ಪೂರ್ಣಗೊಳಿಸಿದಳ್ ಸ್ವಚ್ಛ
ಕಾರ್ಯಮಂ. ಒಮ್ಮೆ ನೋಡುವಳ್ ವನಪಥದಡೆಗೆ.
ಇನ್ನೊಮ್ಮೆ ಕೈಯ ಕೆಲಸದೊಳ್ ನೆಡುವಳ್ ಮನವಂ.
ನಿಷ್ಪಂದ ನಿಶ್ಶಬ್ದ ನೀರವತೆಯಲಿ ಸಿಲ್ಕಿ
ಮನಂಗೆಟ್ಟಪುದೂ ಎನೆ ಗಾಸೈಸಿದೆ ವನಧಾತ್ರಿ.
ಎಲ್ಲಿ, ಯಾವೆಡೆಯೊಳ್ ಕಣ್ ನೆಟ್ಟೊಡಮಲ್ಲಲ್ಲಿ
ಕಾಂಬುದು ಕಣ್ ನೋಟಕೆ ಎಂದಿನಾ ದೃಶ್ಯವೇ.
ಎಲ್ಲಿಯುಂ ಶ್ರೀರಾಮನ ಸೊಲ್ಲಿಲ್ಲ. ಆರುಂ
ಕಂಡು ಕೇಳ್ದರಿಲ್ಲ. ಮನದಾಸೆಯು ಮುಪುಡುತಿದೆ.
ಆಯುರ್ಮಾನವು ಕಳೆದು ಹೋದುದು ಹರಿವ ಜಲದೊಲ್.
ತನ್ನೊಳ್ ಕೊರಗಿದಳ್ ಶಬರಿತಾಯಿ. ಫಲಪುಷ್ಪ
ತುಂಬಿದ ಹರಿವಾಣವ ಮಣೆಯ ಮೇಲಿರಿಸಿ ತಾಂ
ಕುಳಿತಳ್ ತಲೆ ಬಾಗಿಲ ಹೊಸ್ತಿಲಿನಮೇಲೆ. ಮನ
ಮತಿಗಳ ಮಾನಸಸಾರದಲಿ ಒಯ್ಯನೆ ಉರುಳಿದುದು
ಪೊಳ್ತು. ಎದೆಗವಿಯ ಕೋಗಿಲೆ ಸುಕೋಮಲ ಸ್ವರ
ಮಾಧುರ್ಯಮಂ ಹರಿಸಿತು "ತಾಳ್ವುದು. ನಿನ್ನಾಸೆ
ಕೈಗೂಡುವನ್ನ" ಆ ಉಪದೇಶಮಂ ಕೇಳ್ದು
ಶಿರೋಭಾರಮಂ ಇಳುಹಿದಳ್ ಕೈ ಹಸ್ತಗಳ
ಮೇಲೆ. ಅಲ್ಪವಿರಾಮದ ಬಳಿಕ ಪರಿಸರದೊಳ್
ದಟ್ಟೈಸಿದ ಗಿಡುಮರಗಳ ಬುಡದಲಿ ಉದುರಿರ್ದ
ತನಿವಣ್ಗಳನಾಯ್ದು ಬಿಡಿವೂಗಳ ಕೊಯ್ದು ತಂದು

→

ವಿಶ್ವಾಸಲಿಸಿದಳ್ ರಘುಕುಲ ಲಲಾಮರಿಂಗಾಗಿ.

'ಹಾ, ಜಾನಕಿಯೆಂತಿರ್ಪಳೊ, ಎಂತು ವನಪಥದಿ ನಡೆತರ್ಪಳೊ, ಸುಕುಮಾರಿ, ಸುಕೋಮಲ ಮಾನಿಸಿ. ಜನಕರಾಜ ನಂದಿನಿಗೇಕಿಂತು ಭಂಗಮಂ ಇತ್ತನೊ ಭಗವಂತ' ಎನುತೆ ನಿಟ್ಟುಸಿರ ಬಿಟ್ಟು ಎದ್ದಳಲ್ಲಿಂದೆ. ಒಳಗುಯ್ದು ಒಲೆಯಂ ಉರಿಸಿ ಅನ್ನಮಂಗೆಯ್ದು ಕೂತಳ್ ಒಲೆಯ ಬಳಿ ಬೆಚ್ಚಗೆ ಮೈಕಾಸುತೆ. ಕಣ್‌ದೃಷ್ಟಿಯುಂ ಹರಿದುದು ತಾನಾಯ್ದು ತಂದಿದ್ದ ತರತರದ ಹಣ್ಣು ಹಂಪಲಿನೆಡೆಗೆ. ಅಂದಿಂದಿಗುಂ ಸಂಗ್ರಹಿಸಿದ ಫಲಪುಷ್ಪವೆನಿತೊ ಬಾಡಿ ಬತ್ತಿ ವ್ಯರ್ಥದ ಹಾದಿ ಹಿಡಿದುವು. ಮತ್ತೆ ಕೆಲಂ ಕೊಳೆತು ನಾರಿದುವು. ರಾಮನ ಪೆಸರಿನಲಿ ಆರಾರ್ಗೊ ನೈವೇದ್ಯವಾಯ್ತು. ಯೋಚಿಸಿ ಮತ್ತೆ ಪೊರಗೈದಳ್. ಮುಂಬಿನ ವನಪಥದಲಿ ಇರ್ವರ್ ಬಿಲ್ಲು ಬಾಣಗಳ ಸಹಿತ ಆಗಮಿಸಿದರ್. ಧಿಮಿ ಧಿಮಿ ಹೆಜ್ಜೆಗಳ ಅಡಿಯಲಿ ಲರಲರನೆ ಮುರಿದುವು ದರಗೆಲೆ ಕಸಕಡ್ಡಿಗಳ್. ವೃದ್ಧೆ ಹಣೆಗೈಯಾಗಿ ನೋಡಿದಳ್ ಅದಾರೆಂದು. ಮುನ್ನೆಂದುಂ ಕಂಡ ನೆನವಿಲ್ಲದಿರೆ ನೋಡಿದಳ್ ಮತ್ತೆ. ಇರ್ವರುಂ ಮುಂದೈದು ಪ್ರಸನ್ನ ವದನದಲಿ ಮುಗುಳುನಗೆ ಅರಳಿಸಿ ನಮಿಸಿದರ್ ತಲೆಮಣಿದು. ಪೊದರ್ವಲಿ ಹೊದೆಹೊದೆಯೈಸಿ ಹರಡಿರ್ದುದು ಸುತ್ತಲ್. ಜೀವರದ ಮೈ ಕೊಳಕು ನಾರುಮಡಿಗಳಲ್ಲೈದವರ್ ಬೇಡರೋ, ಕಾಡು ಕುರುಬರೊ, ಜೇನು ಕುರುಬರೊ ಆರಿರಲಕ್ಕು

→

ಎಂದೆಂದು ನೋಡಿಯೋ ನೋಡಿದಳ್ ಶಬರಿತಾಯಿ.
ಕಿರಿಯನುಂ ಎದುರ್ವೈದು "ಅಜ್ಜಿ, ದೂರ ಪಥಿಕರ್
ಆವು. ಹಸಿವು ತೃಷೆಗಳಿಂ ಬಳಲಿರ್ಪ್ಪೆವೆಂ, ಸುಡು
ಬಿಸಿಲ್ ಬೀಯುತಿದೆ ತಲೆಯಮೇಲೆ. ದಯೆಗೈದೆಮಗೆ
ನಿನ್ನ ಕುಟಿಯೊಳ್ ನೆಳಲ್ ಇತ್ತು ಉಣಿಸಿಕ್ಕಿದೊಡೆ
ಚಿರಋಣಿ ನಿನಗೆಂದೂ."

"ಅಹಹ! ಏಂ ಮಾತೋ ಬರು-
ಪೋಗುವಾ ಬೇಡರ ಬಳಗಕೆಲ್ಲ ಉಣಿಸಿಡಲ್
ದುಡಿವರಾರೈ ? ನಿಮ್ಮಂತಹವರ್ಗೆ ಆತಿಥ್ಯ
ನಡೆಸಲಾಂ ಅಡುಗೂಲಜ್ಜಿಯೇ ಹೇಳಾ ?"

ಶಬರಿ
ತಾಯಿಯೆಂದ ನಿಷ್ಠುರ ಮಾತಿನಿಂ ಮರುನುಡಿಯೆ
ಮಾತು ಮೂಡದೆ ನಿಲ್ಲೆ, ಮತ್ತೆಂದಳಾ ಶಬರಿ
"ಹಸಿದರ್ಗೆ ಅಸನವನೀಯದಿರೆ ಮನವೊಪ್ಪದು ಕಣ !
ಬಡವೆಬಿದ್ದುದನೀವೆ. ಬನ್ನಿಂ ಕುಟಿಗೆ" ಅಜ್ಜಿ
ನಡೆದಳೊಳಮನೆಗೆ. ಲಕ್ಷ್ಮಣನಗ್ರಜನ ಮೊಗಂ
ನೋಡಿ ಮುಗುಳ್ನಕ್ಕಂ. ಈರ್ವರುಂ ಬೆಂಗಡೆಯೆ
ಪೊಕ್ಕರ್ ಕುಟಿಯೊಳಗೆ. ಮುದುಕಿ ಮನಕರಗಿದಂತೆ
ನೋಡಿದಳ್ ಕರುಣದಿ. ಸುಡು ಬಿಸಿಲಬೇಗೆಯಿಂದಲಿ
ಸುಟ್ಟುರಿದು ಬಿಮರಿಳಿದು ಬಳಲಿ ಸೋತುವಂದಿಹ
ಅತಿಥಿ ತರುಣರಂ; ಮತ್ತೆ ಕೇಳಿದಳಾಸಂಕೆಯ
ಒತ್ತಡದಲಿ,

"ಎಲೆ, ಕಂದರಿರಾ ! ನೀವೆತ್ತಣಿಂ
ಇಲ್ಲಿಗೈತಂದಿರಯ್ ? ನೀವಾರ್ ? ಎನ್ನ ಕಣ್

→

ಮುಬ್ಬುಮುಬ್ಬು. ಬಗೆ ಮಂಜು ಜಾನಿಸಿತಿಳಿಯೆನಾಂ
ಏನೊಂದುಮಂ."

ಊರ್ಮಿಳೇಶನುಂ "ಕೇಳಜ್ಜಿ !
ಮನೆಮಾರು ಇಲ್ಲದೆಮಗೆ ನಿಲ್ಲಲ್ ನೆಲೆಯಿಲ್ಲ.
ಮನೆಗೆಟ್ಟು ನೆಲೆಗೆಟ್ಟು ಕಾಡೆ ಬೀಡಾದೆಮಗೆ
ಸಧ್ಯ, ನೆಲೆಯೆಂಬುದಿಲ್ಲಂ. ಈಯೆಡೆಯೊಳ್ ಹೊಳೆ
ಕೊಳಗಳೆಲ್ಲಿಯಾದರಿಹವೆ ತಾಯಿ, ಮೀಹಕ್ಕೆ ?"

ಶಬರಿಯುಂ ಅಚ್ಚರಿಯ ಕಣ್ಣರಳಿಸಿ "ಹೊಳೆಯುಂ
ದೂರದೊಳಿಹುದು. ಕೊಳಮಿರ್ಪುದಿಲ್ಲೇ. ಅದೋ, ಆ
ಮಾಮರದ ವಾಮಾಂಗದಲಿ ಸ್ವಚ್ಛ ಸ್ಫಟಿಕ ಜಲ
ತುಂಬಿಹ ಕೊಳಮಿರ್ಪುದು." (ಸುಯಿಮಜ್ಜನೇಳ್ವುದೆ
ಬೇಡರ್ಗೆ ? ಇದಚ್ಚರಿ !)

"ಆಯ್ತಾಯ್ತು. ಈಗಳಾವ್
ಮಿಂದು ಬಂದಪೆಂ."

"ಪೋಗಿ ಮೀಹಂ ತೀರ್ಚಿರ್ಪೈ.
ಅನ್ನೆಬರಮಾನು ಅನ್ನಮಂ ಗೆಯ್ದಿರ್ಪೆ ಕಣ !"

ಅವರೀರ್ವರ್ ಪೋದ ಬಳಿಕ ಮುದುಕಿ ಕುತೂಹಲ
ಕುದಿಯೆಮನದಿ "ಇವರೆ ರಾಮಲಕ್ಷ್ಮಣರಿರ್ಪರೆ ?
ಅಂತಿರ್ಪೊಡೆ ಸೀತಾದೇವಿಯುಂ ಕಾಣಳೇ ?
ಸೀತೆಯನುಳಿದೆಲ್ಲಿಯ ರಾಮಲಕ್ಷ್ಮಣರುಗಳ್ ?"
ಪ್ರಶ್ನೆಯೆಳ್ದಿರೆ ಸಮಸ್ಯೆಯ ಜಲಧಿಯಲಿ ಮುಳುಗಿ
ತೇಲಾಡಿದಳ್ ವೃದ್ಧೆ, ಅತ್ತ ನಡೆದ ಅತಿಥಿಗಳೆಡೆ
ಹರಿಯೆ ದೃಷ್ಟಿ, ಸಮಸ್ಯೆಯುಂ ಮತ್ತಷ್ಟು ಜಟಿಲ
ಗೊಂಡುದು ಮನವಿರಿವಂತೆಪ್ಪೊಲ್. 'ಆ ಮಾಸಿಮುಡಿ, →

ಮುಪ್ಪಳ್ದ ಮೊಗಂ ಖಿನ್ನತೆಯ ಬಣ್ಣವೋರೆದಿರ್ದ
ಮಿಸುನಿ ಕಪೋಲ ಪಾಲಿಗಳ್, ಬಾಡಿ ಬತ್ತಿ ಹೋದ
ಕರ್ಪುರವರ್ಣದ ರೂಕ್ಷದೇಹಗಳ ನೋಡಿದೊಡೆ
ನಂಬುಗೆಯು ಮೂಡದು ಮನದಿ' ಎನುತೆ, ಅತಿಥಿಗಳ್
ಇಟ್ಟು ಪೋಗಿರ್ದ ಹಸಿಬೆ ಚೀಲದೆಡೆ ಕಂಗಳ
ಕುತೂಹಲಮಂ ಹರಿಸಿ ಮುಟ್ಟಿ ಮುಟ್ಟಿ ನೋಡಿದಳ್
ಮುಗ್ಧ ಮಂದಾಕ್ಷಿಯಂ ನೆಟ್ಟು. ನಾರು ಮಡಿಯುಂ
ಮಾತ್ರಮೇ? ಸ್ತ್ರೀಜನೋಚಿತವಾದ ಸಕಲತರ
ವಸ್ತುಗಳ ಕಂಡು ಬೆರಗಾದಳ್ ಶಬರಿ ತಾಯಿ.
ತೆಕ್ಕನೆ ಜನಕರಾಜ ಕುವರಿಯುಂ ಕಣ್ಣನಿಂ
ಕಂಡವೊಲ್ ಭಾಸವಾಯ್ತು ಕಾತರಿತ ದೃಷ್ಟಿಗೆ.
ಕಾಗೆ ಮಱಿಯೆಂದೂಹಿಸಿದೊಡೆ ಕೋಗಿಲೆ ಮಱಿಯೆ
ದೊರೆತವೊಲ್ ಅರಳಿದುದು ಮನಂ. ಇವರುಂ ರಾಮ
ಲಕ್ಷ್ಮಣರೊ ಕರ್ವೇಡರೊ ಬಗೆಯಲ್ಬಾರದಾಗೆ
ಅಚ್ಚರಿಯ ಬೀಡಾಗಿ ಅತ್ಯಪೂರ್ವತಿಥಿಗಳ
ಊಟೋಪಚಾರಕ್ಕೆ ಅಣಿಗೊಳಿಸಿದಳ್ ಶಬರಿ.
ಹಚ್ಚ ನುಚ್ಚಿನಕ್ಕಿಯಲಿ ಅನ್ನವನು ಗೆಯ್ದಳ್.
ಅನಿತಱೊಳ್ ಕುಟಿಗೈದರ್ ವಿಹಾರಂ ತೀರ್ಚಿದಾ
ರಾಮಲಕ್ಷ್ಮಣರ್. ಕೊಳೆಯುಂ ಕಳೆದು ಪುಟವಿಟ್ಟ
ಅಪರಂಜಿಯಂತೆ, ತೊಳಗಿ ಬೆಳಗುತೆ ಸಾಕ್ಷಾತ್
ರಾಜನಂದನರವೊಲ್ ಕಣ್ಗೆಸೆಯೆ ಮಿಳ್ಮಿಳನೆ
ನೋಡಿದಳ್ ವೃದ್ಧ ಶಬರಿ. 'ಬೇಡರ್ಗೆ ಈತೆಱದ
ತೇಜವಾಳ್ತನಂ ಬಪ್ಪುದೆ? ಸುಣ್ಣನೆ ಸುಣ್ಪುನುಡಿ
ವಿನಯದುಂಬಿದ ಒಳ್ನಡೆ ರಾಜಕುವರರ್ಗಿದು

→

ಸಲ್ವುದು ; ಎನಲಿವರಾರೊ? ರಾಮಲಕ್ಷ್ಮಣರಲ್
ಪೇಳರೇಂ ? ಈಯೊಂದು ಸಮಸ್ಯೆಯುಂ ಬಿಡಿಸೆ
ಬಲ್ ತೊಡಕು. ಇವರ ಕೇಳಿ ತಿಳಿಯುದೆ ಗತಿಯಿಲ್ಲ.'
ಎನುತೆನ್ನೊಳ್ ಅತಿಥಿಗಳಿಂಗೆ ಕುಳ್ಳಿರೆ ಬದಿಯಲಿ
ದರ್ಭೆಹಾಸನು ಹಾಸಿ ನಳನಳಿಪ ಕುಡಿದಳಿರ
ಕುಡಿವಾಳೆಯೆಲೆಯನಿಟ್ಟು, ಪಸಿರ್ದೊನ್ನೆಗಳ್ಲಿ
ತಿಳಿನೀರನಿರಿಸಿ ಸಸಿಯುಡಕೆ ಪೊಂಬಾಳೆಗಳಲಿ
ಕೆನೆಪಾಲ್ ದಧಿ ಘೃತವನಿಕ್ಕಿ, ಹಣ್ಣು ಹಂಪಲುಂ,
ಸೌತೆ ಪಚ್ಚಡಿಯುಂ, ಬೆಲ್ಲ ಬೆಣ್ಣೆಗಳಂ, ನೂಲೆ
ಗೆಣಸು-ಬೆಲ್ಲಗೆಣಸುಂ ಜೇನ್ತುಪ್ಪವುಂ ಮೇಣ್
ಹಚ್ಚನಕ್ಕಿಯ ಬೆಚ್ಚನನ್ನವುಂ ಬಡಿಸಿದಳ್.
ಸವಿನುಡಿಸಿ ನಲ್ಮಾತಿನಲಿ ಮುಗುಳು ನಗುತಿಂತು
ಕೇಳಿಸಿದಳ್ "ಕಿತ್ತೀಳೆ ನೇರೀಳೆ ಬೇಲದ
ಪಣ್ಗಳುಂ ಜೋಲ್ದಿಹವು ರಸತುಂಬಿ. ಆರಾರ
ಸಂಪದಂ ಮತ್ತಾರ್ಗೊ ಇಕ್ಕಲಳವೇ ? ನಿಮ್ಮ
ಸಯ್ಪಿದುಂ ಸಲ್ವುದೇಂ ಮತ್ತೊರ್ವರಿಂಗೆ ? ಅಃ,
ತನಿಯಿಂದಂ ಒಡಲ್ದುಂಬಿ ತಣಿಯಿಪ್ಪೆ ಕಂದರಿರಾ !"

"ಓ, ಅಂತೇಂ ? ಈ ಸಯ್ಪು ಆರ್ಗೆ ಪಿರಾಸಲಿರ್ದುದೊ ?
ಅವಂ ಧನ್ಯನೆ ವಲಂ. ನಿನ್ನ ಮನವರಿಕೆಯ ಆ
ವ್ಯಕ್ತಿಯುಂ ಆರೊ ?"

"ಏಂ ಪೇಳ್ವೆನೊ ಎನ್ನಯ ಕಂದರಿರಾ !
ಕಳೆದಾರ್ಕೈದು ಸಂವತ್ಸರಗಳಿಂದಲಿ ಕಾದು
ಕಾದು ಬೇಸತ್ತಿಹೆಂ ದಶರಥನ ಕುಲಕೀರ್ತಿ
ಲಲಾಮರಿಗಾಗಿ. ಅವರ ಸಯ್ಪು ನಿಮಗಾಪುದು.

→

ಆರಾಮೊಡೇಂ ಉಂಡು ತಣಿದೊಡಾಯ್ತು ಉಣ್ಣಿಂ!”

ಈರ್ವರುಂ ಓರ್ವನೊರ್ವರಂ ನಿಟ್ಟಿಸಿ ನಸುನಗೆ
ಬೀರಿ ಮಿಣ್ಣನೆ ಶಬರಿಯುಂ ನೋಡುತಿರಲವಳ್,
ಗದ್ಗದಿತ ಕಂಠದಲಿ ದುಃಖವುಮ್ಮಳಿಸಿ ಬರೆ
ಎದೆಯೊತ್ತಿ ಹಿಡಿದು ತನ್ನ ತಾಂ ಸೈಪಿಸಿದ ಬಳಿಕ
ನುಡಿದಳಿಂತು “ಇದೆಲ್ಲಮನಾಂ ಮೀಸಲಿರಿಸಿದುದು
ರಾಮಲಕ್ಷ್ಮಣಸೀತೆಯರ್ಗಾಗಿ. ಇನ್ನೆಬರಂ
ಬರಲಿಲ್ಲವೆನೆ ದುಃಖ ಕಣ! ವ್ಯರ್ಥಕಣ! ಪರಮ
ಚಿಂತೆ ಕಣ!” ಕಣ್ಣೊರಸಿದಳ್ ಮತ್ತೆ ಶಬರಿತಾಯಿ.

“ಎನ್ನ ಬಾಳ್ಪಯಣವಂ ತೀರ್ಚುವ ಗಳಿಗೆಯುಂ
ಇಂ ದೂರವಿಲ್ಲ ಕಣ! ಅದರ ಮುನ್ನಮದೊರ್ಮೆ
ಆನವರ ಕಣ್ತುಂಬ ಕಂಡೊಡೆನಗೆ ಸಾಲ್ಗುಂ.
ಭಗವಂತ ಅನಿತು ಕರುಣೆದೋರ್ವನೆ ಎನ್ನೆಡೆಗೆ?
ರಾಮಚಂದ್ರನ ಸಿರಿಮೊಗದ ದಿವ್ಯ ಸಂದರ್ಶನ
ದೊರೆಕೊಂಬುದೇ? ಪೇಳಿರೈ ಎನ್ನ ಅತಿಥಿಗಳಿರಾ!”

“ತಾಯೆ, ನೀನವನ ಸಂದರ್ಶನದಿಂ ಶಾಂತಿಯುಂ
ಬಯಸುವೆ. ಆದರಾ ರಾಮನುಂ ಮನಶಾಂತಿಯೆ
ಇಲ್ಲದಲೆಯುತಿಹಂ ಅಟವಿಯಲಿ.”
ಅದನಾನುಂ
ಕೇಳಿಹೆನ್. ಅದರಿಂದಲಾನಿಲ್ಲಿ ಕಾದಿಹೆಂ
ಸಂದರ್ಶನಕೆ. ಇಂದು ಬಹ, ನಾಳೆಬಹನೆಂಬ
ಊಹೆಯಲಿ.”
“ಸಾಮಾನ್ಯನಂ ದೇವಮಾನ್ಯನೆನೆ
ಮನಂಗೆತ್ತುದು ನಿನ್ನಯುಳ್ಕರೂಹೆ ಅಜ್ಜೀ!” →

"ಅಹಹ, ಏಂ ಮಾತೊ. ತೆಗೆ. ತೆಗೆ. ಕೇಳಿ ಬಲ್ಲೆನಾಂ
ರಾಮನಾ ಸಚ್ಚಾರಿತ್ರ್ಯಮಂ ಸದ್ಗುಣಗಳಂ.
ಲೋಕವೆಲ್ಲ ಪಾಡುತಿಹ ಪೊಗಳಿ. ದುರದೃಷ್ಟಂ
ನೀನರಿಯದಿರ್ಪುದು !"
ಸೋದರರ್ ಪರಸ್ಪರ
ನೋಡಿ ನಸುನಕ್ಕರ್. ಪಿರಿಯನಾಗಳ್ ನುಡಿದಂ,

"ಅಜ್ಜಿ, ಆನರಿಯನೇನಾತನುಂ ? ಅಂದಿನಿಂ
ಬಲ್ಲೆನೆನೆ ಸಲ್ವುದು. ನಿನ್ನಯ ದೇವ ಮಾನ್ಯನುಂ
ನಿನ್ನತಿಥಿಯೋ ಕಣಾ !"
ಮುದುಕಿ ಕಂಗಳರಳಿಸಿ
ನೋಡಿದಳ್ ತೆಕ್ಕನೆ ಬೆರಗುವಟ್ಟವೊಲ್. 'ಇದೇಂ
ಆಶ್ಚರ್ಯ ?' ಎಂಬೊಂದು ಕಟ್ಟಚ್ಚರಿಯ ದಿವ್ಯ
ಬಲೆಯಲಿ ಸಿಲುಕಿ ನುಡಿಯಲಾರದಾದಳ್ ಬಾಯಿ
ಬಿಟ್ಟು. ಆ ತಾಯಿಯ ಕೌತೂಹಲಿತ ದೃಷ್ಟಿಯಲಿ
ಸೆಳೆಮಿಂಚಿನ ಪ್ರೋಕ್ಷಂ ಕಂಡೊಯ್ಯನೆ ಮೊಗಮಂ
ಇಳುಹಿದನ್ ರಾಮಚಂದ್ರ. ತಟ್ಟನೆ ಕಂಗಳಲಿ
ಮುಕ್ತಾಶ್ರುಗಳ್ ಉದುರಿದುವು ಪಟಪಟನೆ ಕೈಯಿನ
ತುತ್ತಿಗೆ. ಅತಿಥಿಯಾತನ ಭಾವೋದ್ವೇಗಮಂ
ಅರಿದೊಡಂ ಏನೊಂದು ಅರ್ಥವಾಗದವೋಲಾಯ್ತು
ಮುಗ್ಧ ದುಗ್ಧ ಮನೋದಧಿಗೆ. ಶಬರಿ ತಾಯಿಯುಂ
ನಿಡುಸುಯ್ದಳ್ ತನ್ನೊಳ್. ಸೋದರರ್ ತಾವುಂಡ
ಊಟದೆಲೆಯಂ ಆಚೆಗೊಗೆದು ದಣಿವಾರಿಸಲ್
ಮನಸಾರೆ ಮಲಗಿದರ್ ಪುಲ್ಲಾಸಿನ ಮೆತ್ತೆಯ
ಮೇಲೆ. ಪೊಳ್ತುರುಳಿದುದು ಸವಿ ನಿದ್ದೆಗಾಸರೆಯ

ನೆರವಿತ್ತು. ತಾಸೊಂದು ಉರುಳಿದುದು ನಿಶಬ್ಧ
ಸುಖಶಾಂತಿಯಲಿ. ಲಕ್ಷ್ಮಣನುಂ ನಿದ್ದೆಯಲಿ ಶ್ರಾಂತಿ
ವಿಶ್ರಾಂತಿಯುಂ ಪಡೆದು ಪೊರಗುಯ್ದನೆದ್ದಬಳಿಕ.
ಅಂಗಣದ ಅಂಚಿನಲಿ ಮುಂಚಿಸಿದ ಬಗೆವಗೆಯ
ಸಸ್ಯಕೋಟಿಯಲಿ ಮಿಡಿನೊಗ್ಗು ಕಾಯಿ ಹೂಗಳ್
ಜೋಲು ಬಿಳ್ದಿದ್ದುವು ಕಣ್ ಸೆಳೆವಂತೆ. ಸೌಮಿತ್ರಿ
ಲಸಂಪ ತುಂದಿಲತೆಯಲೀಕ್ಷಿಸಿದಂ ಸಸ್ಯ
ರಾಜಿಯುಂ. ಶಬರಜ್ಜಿಯ ದಿವ್ಯ ಪರಿಶ್ರಮವೆ
ಪಣ್ತು ಮಾಳ್ಕೆಯಲಿ ಶೋಭಿಸಿದತ್ತು ಕೈತೋಟಂ,
ತೇನೆ ಮೈನಾ ಗಿಳಿ ಬುಲ್‌ಬುಲ್ ಕಾಜಾಣ ಕಲ-
ವಿಂಕ ಪಿಕಳಾರ ಕೋಗಿಲೆ ಎಲ್ಲ ಬಗೆಯ ಪಕ್ಷಿ
ಕೋಟಿಯುಂ ರೆಂಬೆಯಿಂ ರೆಂಬೆಗೆ ಜಿಗಿದಾಡುತೆ
ಚಿಲಿಪಿಲಿಸಿ ಸಗ್ಗಸುಧೆಯನಿಳಿಸಿದ್ದುವು ಧರೆಗೆ.

ಶಬರಿತಾಯಿ ಕಿತ್ತೀಳೆ ನೇರಿಳೆ ಪಣ್ಗಳ
ಕಿವುಂಚಿ ರಸಮಂಗೆಯ್ದು ಸವಿಬೆಲ್ಲಮನೆರಸಿ
ಅಣಿಗೈಯುತಿರ್ದಳತಿಥಿಗಳುಪಚಾರಕೆಂದು.
ಶ್ರೀರಾಮಚಂದ್ರನಿನ್ನು ಏಳದೆ ಮಲಗಿರೆ
ನಿದ್ದೆಯಲಿ ಕನವರಿಸಿದಂ 'ಹಾ! ಪರಮಪ್ರಿಯೆ!
ಸೀತೆ! ಎನ್ನ ಮನದನ್ನೆ! ನೀನೆಲ್ಲಿಹೆ? ಬೇಗ
ಬಾಯಿಲ್ಲಿ! ತಾಳಲಾರೆನಾಂ ನಿನ್ನಗಲಿಕೆಯ.
ಹಾ, ಜಾನಕಿ! ಎಂತುಳಿವೆನಾಂ ನಿನ್ನನಗಲಿ?'

ಒಳಗಿರ್ದ ಶಬರಿ ತಾಯಿಯುಂ ಶ್ರೀರಾಮನಾ
ಕನವರಿಕೆಯುಂ ಕೇಳ್ದು ಬೆಬ್ಬಳಿಸಿದ ಮನದಿಂ
ಧಾವಿಸಿದಳ್ ಬಳಿಗೆ. ಕನವರಿಕೆಯೊಳಿರ್ದ ರಘು →

ಕುಲಪತಿಯುಮಿನ್ನು ಕಣ್ದೆರೆದನಿಲ್ಲಂ. ಮತ್ತೆ
ಮರುಚಣದೊಳ್ ಬದ್ಧ ಭ್ರುಕುಟಿಯಿಂ ಗಡುಸಾಗುತೆ
ಜೆಬ್ಬರಿಸಿದ ಮನದೊಳ್ ಅಬ್ಬರಿಸಿದನ್

'ಎಲೈ,
ರಾಕ್ಷಸಾಧಮ! ಎಲ್ಲಿಗುಯ್ದೆನ್ನ ಸೀತೆಯಂ
ನಿನ್ನೊಡಲನೀಗಳೇ ಬಗೆದು ಕೊಲ್ವೆನ್ ಧೂರ್ತ!'

ಸಿಡಿಲ್ದನಿಯ ಕಾಕು ಎದೆಯುಂ ನಡುಗಿಸಿದತ್ತು
ಶಬರಿ ಕೈಗಳಿಂದೆದೆಯನೊತ್ತಿ ಹಿಡಿದು ಬಳಿಯೆ
ನಿಂದಳ್ ಮಿಡುಕಿ. ತಟ್ಟನೆ ನಿದ್ದೆಯಿಂ ತಿಳಿದೆದ್ದ
ರಘುಕುಲಲಲಾಮನುಂ ದಿಗ್ಭ್ರಮೆಯ ಮೋಡಿಯಿಂ
ಎಳ್ದು ಶಬರಿತಾಯಿಯ ಮುಖಭಾವಮಂ ಕಂಡು
ನಸು ನಾಣ್ಚಿದಂ. ಇನ್ನೆಬರಮಿಲ್ಲಿರುತಿರ್ದು
ಆತಿಥ್ಯಮಂ ಪಡೆದು ಒಡಲ್ದಂಬಿಯುಂ ತಮ್ಮ
ಪರಿಚಿತಿಯನರುಹದುಳಿದುದನುಚಿತಮೆಂಬುದರ
ನೆನೆವರಿಕೆಯಿಂ ಮನ ಮುದುಡಿತು ಹಿಂಡಿದ ತೆರದಿ.
ಒಳಗಿನಿಂದೆ ಮಾತುಕತೆಯಬ್ಬರಮಂ ಕೇಳ್ದು
ಬಳಿಗೈದಿದನ್ ಲಕ್ಷ್ಮಣ. ಪರಿಸ್ಥಿತಿಯ ಅರಿವು
ಛೋಂಕನೆ ಎದುರ್ಗೆತ್ತಿರೆ ಮುಗುಳ್ ನಗುತೆ

"ಅಜ್ಜಿ,
ಬರಿ ಕುಕೋದ್ಯಕಾವುಂ ತಿಳಿಸಲಿಲ್ಲಂ ನಿನಗೆ;
ಮತ್ತೇನಿಲ್ಲಮಿದರೊಳ್. ನೀಂ ನೊಂದು ನೋಯದಿರ್.
ಈಗಾಯಿತಲ್ತೆ ಅರಿವು? ಈತನೆನ್ನಣ್ಣ
ರಘುಕುಲತಿಲಕ ರಾಮಚಂದ್ರಂ. ದಶರಥನ
ತೃತೀಯ ಕುವರನಾಂ. ಲಕ್ಷ್ಮಣನೆಂದೆನ್ನನುಂ

→

ಕರೆವರೆಲ್ಲರ್ !"
ಆಗಳ್ ಪೋದುದು ಶಬರಿಯ ಮತಿ
ಚಿಂತಾಮಣಿಗೆ, ತರುಣ ಪ್ರಭೃತಿಗಳ ಅನನ್ಯ
ರಾಜಲಕ್ಷಣಗಳಿಂ. ಯೋಚನಾ ಕಾತರತೆ
ಘನಿಸಿ ಬೆಕ್ಕಸ ಬೆರಗುವಟ್ಟು ಹಣ್ಮುದುಕೆ ನೆಟ್ಟ
ನಿಟ್ಟಾಲಿಯಂ ಕೀಲಿಸದೆ ನಿಟ್ಟಿಸಿದಳಾಗ.

'ಏನಾಶ್ಚರ್ಯ ? ಅರ್ಥೈಸಲಾಗದ ಒಗಟು ಕಠಿಣಂ.
ಇವರೆ ರಾಮಲಕ್ಷ್ಮಣರಿರುತಿರೆ ಜನಕರಾಜ
ಸುತೆ ಜಾನಕಿಯೆಲ್ಲಿ ?'
ಎಂಬಾಸಂಕೆಯುಂ ಮನದಿ
ಜೆಬ್ಬಳಿಸೆ, ಒಡನೆ ಯೋಚನೆಯಲೆಗಳಂ ತಟ್ಟಿ
ಮಲಗಿಸಿದೊಲ್ ಸ್ತಬ್ಧಮಾದುವು ಗಳಿಗೆಕಾಲಂ !
ಧಿಗ್ಭ್ರಮೆಯ ಮಂಜು ಮುಸುಗಿದೊಲ್ ಕಣ್ಣೆಟ್ಟಿರೆ
ಮಾತು ಮೂಕವಾಯ್ತು ಉಸಿರ್ಗಟ್ಟಿ. ಮರುಚಣಂ
ಚೇತರಿಸಿ ಶ್ರೀರಾಮಚಂದ್ರನಂ ಬಿಗಿದಪ್ಪಿ
ಹಾಡಿಪಾಡಿ ಕೊಂಡಾಡಿ ಕಂಬನಿಯಂ ಸೂಸಿ,

"ಅಯ್ಯಾ, ರಘುಕುಲತಿಲಕ ! ನಿನ್ನಂ ಕಂಡೊಡನೆ
ಸಂಕೆಯೆಳ್ದುದು ಮನದಿ. ನೀಂ ಬಾಯಿ ಬಿಡಲಿಲ್ಲಂ.
ಮೇಣ್ ಸೀತೆಯುಂ ನಿಮ್ಮ ಬಳಿಯೊಳಿರದಿರೆ ಮತಿ
ದಿಕ್ಕೆಟ್ಟುದು ಸಹಜಂ. ನೀನಿನ್ನೆ ಬರಮೆನಗೆ
ನಿಮ್ಮ ಪರಿಚಿತಿಯ ತಿಳಿಪದೆಯೇ ಬೈತಿಟ್ಟು
ಅನ್ನೆಯಂಗೈದೆಯಲ್ತೆ ? ಆನೇಸೊಂದು ವರ್ಷ
ಮಾನಗಳಿಂದೆ ಕಾದಿರ್ದೆ ನಿನ್ನಂ ಕಣ್ತುಂಬ
ಕಾಂಬ ಹೇರಾಸೆಯಲಿ ? ನೀನೆನಗೆ ನಿಮ್ಮಗಳ →

ಪರಿಚಿತಿಯನೊರೆಯದೆಯೆ ಪೋಗಿರ್ದೊಡಿಲ್ಲಿಂದೆ
ಎನ್ನಗತಿ ಗಂಗೆಯೊಡಲಿನ ಪಾಲಾಗುತಲಿತ್ತು,
ಕಣ! ಎನ್ನ ಪಂಬಲಂ ಅರಿತರಿತು ತಿಳಿಪದುಳಿದೆ
ನಿಷ್ಕರುಣಿಯಾಗಿ .... !"

ಅಬ್ಬೆ ಗದ್ಗದಿಸುತ ನುಡಿಯೆ
ಶ್ರೀರಾಮಚಂದ್ರನುಂ ಮೈದಡವಿ ಬಲ್ಮೆಯಿಂ
ಸಂತೈಸಿದನ್ ನಲ್ಮೆಯ ನುಡಿಗಳಿಂ. ಲಕ್ಷ್ಮಣಂ
ಮುಂದೈಯುತೆ "ನಾಮುಂ ಬರೀ ತಮಾಷೆಗೈವೊಂದು
ಯೋಚನೆಯೊಳ್ ಮಿಣ್ಣನಿರ್ದುದಲ್ಲದೆ ಪೆರ್ಮೆ
ಬಲಿತುದುದರಿಂದಲ್ಲ. ನೀಂ ದಯೆದಿಂದೆಮ್ಮ
ಕ್ಷಮಿಸೌ ಅಬ್ಬೆ !"

ಶಬರಿಯುಂ ಪ್ರೇಮನಮುರ್ಬಿ
ಮಹಾನಂದೋದ್ವೇಗದಿಂ ಲಕ್ಷ್ಮಣನಂ ಬಿಗಿ
ಹಿಡಿದಪ್ಪಿ,

"ಎನ್ನ ಕಂದಮ್ಮಗಳಿರಾ! ನಿಮ್ಮ
ಪರಿಚಿತಿಯರಿದು ಎನ್ನೊಡಲ್ ತುಂಬಿ ತುಳುಕುತಿದೆ.
ಚಿರಾಯುಗಳೈದು ಬಾಳಿರೈ !"

ಶಬರಿ ಮೈದೃಡವಿ
ನೆತ್ತಿಯಂ ಮೂಸಿ ಮುಂಡಾಡಿದಳ್ ಬಲ್ಮೆಯಿಂ.
ಒಡಲ ಪ್ರೇಮಾನಂದ ಉಕ್ಕಿ ಹರಿದತ್ತು ಮುಖ
ಬಿಂಬದಲಿ. ಮತ್ತೆ ಮುಂಬರಿದಳ್ ಮುದುಕಿ ತೋಷ
ಗದ್ಗದದನಿಯುಲಿ "ಇಂದು, ಬಹುದಿನದಾಸೆಯುಮೆನ್ನ
ಪೂರೈಸಿ ಸಲೆ ಕೃತಾರ್ಥಮಾದುದು ಈ ಜನ್ಮ.
ಏಸು ದಿನಗಳಿಂ ಕಾದಿದ್ದೆನಯ್ಯ ನಿಮ್ಮಯ

→

ದಿವ್ಯದರುಶನಕಾಗಿ ರಘುಕುಲೋತ್ತಮರಿರಾ !
ಇಂದೆನ್ನ ಕೊನೆಯಾಸೆಯುಂ ತುಂಬಿ ತಹತಹಿಪ
ಒಡಲ್ ತನಿರಸಮುಂಡು ತಣ್ಣಗೆ ತಣಿಸಿದತ್ತು.
ಇನ್ನಿದೇಗಳಿಗೆಯೊಳ್ ಎನ್ನಂತ್ಯಮಾದೊಡಂ
ದುಃಖವಿಲ್ಲ ಕಣಾ ! ನಿಮ್ಮ ಕೈಯೊಳ್ ನೀರ್ಕುಡಿದು
ಸಾವೊದವಿದೊಡೆಂತಹ ಭಾಗ್ಯಮೊ ರಘುರಾಮ !"

ಕಣ್ಚಾಲಿಸಿ ಈರ್ವರಂ ಅತ್ತಲಿತ್ತ ನಿಟ್ಟಿಸಿ
ತನ್ನಯ ಕುದೃಷ್ಟಿತಾಗಿತೆಂದು ಮೊಗಂ ನಿಳುಪಿ
ಲಟಿಕೆ ಮುರಿದು ಮತ್ತೆಂದಳ್ ಶಬರಿ

"ಮಕ್ಕಳೇ,
ಆಂ ಬಡಮುದುಕೆ, ಎನ್ನುಪಚಾರಂ ನಿಮಗೆಂತು
ಸಲ್ವುದು ? ಅರಮನೆಯೊಳ್ ನಿಚ್ಚ ನಲ್ ಉಪಚಾರ
ಕಂಡುಂಡ ಸುಖಜೀವಿಗಳನೀ ಬಡವಿಯೆಂತು
ಉಪಚರಿಪಳ್ ಪೇಳ್ ? ಬಡವೆ, ಅತೀಬಡವೆ ಈ
ಶಬರಿ ಕಣ ! ನೀವದಂ ಲೆಕ್ಕಿಸದೆ ಎನ್ನೊಂದು
ಬಡತನದ ಆತಿಥ್ಯಮಂ ಕೈಕೊಂಡುದುದೆನ್ನ
ಅಹೋಭಾಗ್ಯಮೆಂಬೆನ್. ಬೇಸರಿಸದಿರಿ ಎನ್ನ
ಕಂದಮ್ಮಗಳೇ !"

"ಅಃ, ಏಂ ಮಾತೊ ನೀನಿತ್ತ
ಮೃಷ್ಟಾನ್ನ ಎಮ್ಮನುಂ ಸ್ವರ್ಗದ ಅಮೃತಮಂ
ಉಣಿಸಿ ತಣಿಸಿದತ್ತು ಎನೆ ಅತ್ಯುಕ್ತಿಯಲ್ಲಂ,
ನೀನೆಮ್ಮ ಪ್ರಿಯಮಾತೃಕೆ. ನಿನ್ನ ನಾವೆಂದು
ಮರೆವಂತಿಲ್ಲ ತಾಯೇ ! ನಿನ್ನನುಳಿದಿಲ್ಲವೀ
ರಾಮಾಯಣಂ ಎಂದೊಡದೇ ಸಾಲ್ಗುಂ ನಿನಗೆ."

→

ಒಕ್ಕೊರಲಿಂದೆ ನುಡಿದಣ್ಣ ತಮ್ಮಂದಿರ
ಸಾಂತ್ವನದ ನದಿಯುಕ್ಕಿ ಹರಿದಿರೆ ಎರ್ದೆಯಿಂ
ಆನಂದ ರಸಾಮೃತದಲಿ ಮುಳುಂಗಿ ತೇಲುತೆ
ಕೈಮುಗಿದಳ್ ದಶರಥ ರಾಜ ಕುಮಾರರಿಂಗೆ.
ಸುಖದುಃಖಗಳ ಗಣಿಯಾದುವು ಹೃನ್ಮನಂಗಳ್.

ಶಬರಿಯುಂ ದುಃಖ ಗದ್ಗದಿತ ದನಿಯಲಿ ಬಿಕ್ಕಿ
ಬಿಕ್ಕಳುತೆ ಕೇಳಿಸಿದಳ್ "ನೀಮಿರುತಿರಲಿಲ್ಲಿ,
ಸೀತೆಯೆಲ್ಲಿ ? ಎನ್ನ ಕುವರಿಯುಂ ತೊರೆದು ನೀವ್
ಬಂದುದೆಂತು ? ಎಲ್ಲಿಹಳ್ ? ಏಕಂತು ನಿರ್ದಯೆ
ಮಡದಿಯೆಡೆಗೆ ? ಆನಾಗ ನಿಮ್ಮಯ ಪಿಟಕದಲಿ
ಕಂಡೆನ್ನೈ ಸೀರೆಯುಂ. ಮತ್ತೇಕಿಲ್ಲ ಜಾನಕಿ
ನಿಮ್ಮೊಡಂ ? ಆನೊರ್ಮೆ ಊಹಿಸಿದೆ, ನೀಂ ರಾಮ
ಲಕ್ಷ್ಮಣರೆಂದು. ಅಲ್ಲದೆ, ಸೀತೆಯುಂ ಕಾಣದಿರೆ
ನೀವೀರ್ವರ್ ನಿಮ್ಮಯ ಪರಿಚಿತಿಯುಂ ಬೈತಿಟ್ಟು
ತಿಳಿಪದಿರೆ ಎನ್ನೂಹೆಯುಂ ಅಡಿಮೇಲಾಯ್ತು ಕಣ !
ಎಲ್ಲಿಹಳ್ ಜನಕಜೆ ? ಕರುಣೆಯಿಂದೆನಗೆ ತೋರ್ಪು
ಉಪಕರಿಸಿಮೆಂದು ಬೇಡಿಕೊಂಬೆನ್. ನೀಮೆನಗೆ
ಕರೆತಂದು ತೋರದೆಯೆ ಪೋಗದಿರಿ ಕಂದಗಳೆ !"

ಶಬರಿಯ ಎದೆಯ ಪಂಬಲಂ ಗದ್ಗದಿತ ಕೊರಳ್
ದನಿಯಲುಣ್ಮಿರೆ ರಾಮಚಂದ್ರನುಂ ಮನಮರುಗಿ
ದುಃಖದಿಂ

"ಹೇ, ತಾಯೇ, ನಿರ್ಭಾಗ್ಯನೆಂ ರಾಮ
ಚಂದ್ರ. ಈ ಎನ್ನ ದುಃಖಸಂಕಟಕೆಣೆಯಿಲ್ಲ.
ದಶರಥ ಕುಮರನೆನಿಸಿಯುಂ ಭಂಗ ಬನ್ನಗಳ →

ಜಾಡಿನಲಿ ನೆಲೆಬಿದ್ದಿಹೆನಜ್ಜೀ ! ಇದೆನ್ನಯ
ಹಣೆಯಲಿ ಬರೆದಿರೆ ಮಾಳ್ಪುದೇಂ ?"
"ಅಯ್ಯಾ, ನೀಂ
ದೇವರ್ಕಳ ಸಾಲಿನಲಿ ವಿಜೃಂಭಿಪ ವ್ಯಕ್ತಿಯಿರೆ
ನಿನಗೇಕೆ ಸಂಕಷ್ಟ ಪೇಳ್ ? ಸತಿ ಜಾನಕಿಯ
ವೃತ್ತಾಂತನೇಂ ತಿಳಿಪುದೆನಗೆ. ವಿಷಯಮರಿಯದೆ
ಒಡಲಸಂಕಟ ಸುಡುತಿಹುದೆನ್ನಂ. ತುಡಿಯುತಿವೆ
ಮನಮತಿಗಳ್. ಗೋಳುಗುಡಿಸದಿರೆನ್ನನುಂ .... !"

"ಏಂವೇಳ್ವೆನೊ ಎನ್ನಯ ಧರ್ಮ ಸಂಕಟದ ಪರಿ ?
ವನ ವಾರ್ಧಿಯಂ ಕಾಲ್ನಡೆಯಲಿ ಪೊಕ್ಕಿರಲಾನು
ಕರ್ನೇಡರ ಮಾಳ್ಕೆಯಲಲೆಯುತಿಹೆನೆನ್ನೊಲ್ಮೆಯ
ಅನುಜನೊಡನೆ ತೊಳಲಿ."
ಶಬರಜ್ಜಿಯ ತೋಳ್ತೆಕ್ಕೆಯ
ಬಂಧದೊಳ್ ಮೊಗವಿಳುಹಿ ಕಂಬನಿಗರೆದನತಿ
ದೈನ್ಯದಿಂ. ತಾಯ್ಮಡಿಲೊಳ್ ಆರಾದೊಡೇಂ ತಾಂ
ಶಿಶುವಲ್ತೆ ? ದುಃಖಮಂ ಶಿಶುವಿನೊಲ್ ತೋರ್ಪಡಿಸಿದ
ರಾಮಚಂದ್ರಂ ಮರುಚಣದೊಳ್ ತನ್ನನುಂ ತಾಂ
ಸೈಪಿ ಹೃದಯಾಬ್ಧಿಯ ಸಂಕಟ ಪರಿತಾಪದ
ಕುದಿವಗ್ನಿ ಕುಂಡಕೆ ಮಿಗೆ ಸಾಂತ್ವನದ ತನಿಜಲ
ಸುರಿದು ತಣಿಸಿದಂ. ಶಬರಿತಾಯಿಯುಂ ಪ್ರೇಮದಿಂ
ರಘುರಾಮನ ಮೊಗಮಂ ನಿಳುಪಿ ಲಟಿಕೆಯಂ ಮುರಿದು
ಮಂಡೆಯಂ ಮೂಸಿ ಮುದ್ದಾಡಿ ನಲ್ಮೆಯಿಂ ಬಲು
ಪ್ರೀತಿಯಿಂ ಸಾಂತ್ವನಗೊಳಿಸಿದಳ್. ಬೆಲ್ಲವೆರಸಿ
ತಾಂಗೈದ ಪಣ್ಗಳ ರಸಾಯನವ ಪೊಂಬಾಳೆ

→

ದೊನ್ನೆಗಳಿಗೆ ಸುರಿದೀರ್ವರಿಂಗೆ ಕುಡಿಯಲಿತ್ತು
ತಾನೊಂದಂ ಕೈಕೊಂಡು ಕುಳಿತಳ್ ಬಳಿಯೋ. ಸಿಹಿ
ಬೆರೆತು ಸವಿಯಾದ ಪಾನಕವಂ ಸಂಸೇವಿಸಿದರ್
ಎಕ್ಕಟಿಗೆ ಕುಳ್ತು. ಬಿಸಿಲ ಬೇಗೆಗೆ ತಣ್ಣನೆಯ
ಪಾನಕಂ ತನಿವೆರೆದುದು ತನುತಣಿವ ತೆರದಲಿ.

ಶ್ರೀರಾಮಚಂದ್ರನುಂ ನಿಡುಸುಯ್ದು ನುಡಿಸಿದಂ,
"ಕೇಳಜ್ಜಿ ! ಪಿತನೆನ್ನ ಕಿರಿವತ್ನಿಗೆ ವಚನಂ
ಇತ್ತೊಂದು ಅಚಾತುರ್ಯದಿಂದಾಂ ಪೊರಮಟ್ಟೆ
ಪಿತೃವಾಕ್ಯಪರಿಪಾಲನಾವ್ರತವಂ ಮನದಿ
ದೃಢೀಕರಿಸಿ ಕಠಿಣ ದೀಕ್ಷೆಯುಂ ಕೈಕೊಂಡು.
ರಾಜ್ಯಮಂ ಬಿಟ್ಟುಕುಡೆ ನೊಂದು ನವೆದೆನಿಲ್ಲಂ,
ರಾಜತ್ವಮೆಂತಂತು ಭಿಕಾರಿತನಮಂತಂತು
ಸಾವಧಾನದಿಂ ಸ್ವೀಕರಿಸಿರಲ್ ಜೊತೆಗೂಡಿ
ಬರಲೊಪ್ಪಿ ಪಟ್ಟುಹಿಡಿದ ಸತಿ ಮೇಣ್ ಭ್ರಾತೃವಂ
ಒಡಗೂಡಿ ರಾಜಧಾನಿಯುಂ ತೊರೆದು ವನಧಿಯ
ಪಥವಂವಿಡಿದೆ. ನಿಚ್ಚ ವನವಾಸದೊಳಿರುತಿರ್ದು
ಕಂದಮೂಲಗಳಂ ಸಂಸೇವಿಸುತೆ ಬದುಕಿಯುಂ
ಮನಶಾಂತಿಯುಂ ಕಳೆಕೊಂಡೆನಿಲ್ಲ. ಎನ್ನಯ
ಪಂಚಪ್ರಾಣವಾದ ಪ್ರಿಯ ಸಹೋದರನಿರಲೆನ್ನ
ಬೆಂಬಳಿಯೆ, ಸಂಕಷ್ಟಮಂ ಕಂಡೆನಿಲ್ಲ ತಾಯೆ !
ಎನ್ನ ಹೃದಯ ರಾಜ್ಞಿ ಪರಮ ಸತಿ ಸೀತೆಯುಂ
ಪಿಂಬಾಲಿಸಿರಲೆನ್ನ ಕಾಡೆ ನಾಡಾಗಿ ಮಿಗೆ
ತೋಷವೂಡಿರಲ್ ನಾಡೇವುದು ? ಕಾಡೇವುದು ?
ಎಂಬುದರ ಅರಿವಿರದಾನಿರ್ದೆ ವನವಾಸದಲಿ.

→

ಸತ್ ಶಾಂತಪ್ರಶಾಂತವಾಶಾಂತನಿಶಾಂತತೆ
ಹೆಪ್ಪಿಟ್ಟವೊಲ್ ಘನಿಸಿರುತಿರ್ದುದು ಎಡೆಎಡೆಯುಲಿ.
ಎಳೆಯರೊಲ್ ಶಿಷ್ಟಮೃಗಗಳೊಡಂ ನಲಿದಾಡಿ
ಮುಟ್ಟಿ ಮುದ್ದಿಸಿ ಮುಂಡಾಡಿ ಅನುಪಮ ತೋಷದಿಂ
ಸೊಗದ ಸುಧೆಯುಂಡು ಬೀಗಿ ಕಳೆದುದು ಕಾಲನಿಧಿ.
ಘನ ನಿಬಿಡ ಕಾಂತಾರ ಲಕ್ಷ್ಮಿಯುಂ ಪಚ್ಚನೆಯ
ಪಟ್ಟುಡೆಯನುಟ್ಟು ವರ್ಣಮಯ ಪುಷ್ಪಕೋಟಿಯ
ನಿಚ್ಚ ಪಮಾಲಂಕರಣದಿಂ ನೆರೆ ಮೆರೆದಿರೆ
ಏಂ ಸೊಗಮೊ ರಸದೃಷ್ಟಿಯ ಯೋಗಾಯೋಗಕ್ಕೆ !

"ಕೇಳ್, ಶಬರಿ ತಾಯೆ ! ಪ್ರಾತಃಸುಸಮಯದಲಿ
ರಾಗಾನುರಾಗದಿಂ ಪೊಣ್ಮುವ ಪಕ್ಷಿಗಳ ಮ
ರಮ್ಯ ಸುಪ್ರಭಾತಂ ಸ್ವಾಗತ ಸಮಾರಂಭ
ವೈಭವದಲಿ ರಂಜಿಸಿರೆ ಘನನಿಬಿಡ ಕಾಂತಾರ
ಲಕ್ಷ್ಮಿಯುಂ ಪಚ್ಚ ರೇಶಿಮೆಯುಡೆಯನುಟ್ಟವೊಲ್
ಮೆರೆದು ವರ್ಣವರ್ಣಾಂತ ಕುಸುಮಗಳ ಸಿಂಗರ
ಬಂಧುರತೆಯಲಿ ಗಂಧ ಮಾಧುರ್ಯಮಂ ಸೂಸೆ
ಸುರ ಸುಂದರ ಮನೋಹರತೆಯೆ ಎಲ್ಲೆಡೆಗಳಲಿ.
ಪಚ್ಚ ರನ್ನಗಂಬಳಿಯುಲೊಪ್ಪುವ ಪಚ್ಚನೆ
ಶಾದ್ವಲೋದ್ಯಾನ ಸಂಪದಮಂ ಬಗೆ ಬಗೆಯುಲಿ
ಅಲಂಕರಿಸುವಂತೆವೊಲ್ ವಿಗಲಿತ ಕುಸುಮದಳ-
ಕುಸುಮ ರೇಣುಗಳ್ ತುಂಬಿ ಹರಡಿರೆ ನೋನೋಳ್ಪ
ರಸದೃಷ್ಟಿಗೆ ಮಾನಸ ಮಂಥನಕೆ ಮನೋಜ್ಞಂ.
ಗಿಡಮರಗಳಲಿ ಚಿಲಿಪಿಲಿಸುವ ವನವಿಹಂಗಾದಿ
ಸಕಲತರ ಪಕ್ಷಿ ಸಮಾಜದಿಂ, ಸುಂದರ ರೂವಿನ

→

ಬಗೆಬಗೆಯ ಶಿಷ್ಟಮೃಗಗಳಿಂದೆಯುಂ ವನವಾಸ
ಕಣ್ಗೆಡ್ಡಮಾಯ್ತು ಅನುರಾಗ ಭಾವದಿಂ; ವರ
ವೈಭವೋಪೇತ ರಾಜಧಾನಿಯ ಮರೆಸುವ್ರೊಲ್.
ಅಲ್ಲಲ್ಲಿ, ಮನಮೆಚ್ಚಿದೆಡೆಗಳಲಿ ನಿವಾಸಕೆ
ಪರ್ಣಕುಟಿಗಳಂ ನಾಮೆ ನಿರ್ಮಿಸಿ ವಾಸಿಸುತೆ
ಲತಾ ಕುಂಜದೊಳ್ ವಿಹರಿಸಿ, ಪವಿತ್ರ ನದಿಗಳಲಿ
ಮಿಂದು ಮಡಿಯುಟ್ಟು, ಜಲಕ್ರೀಡೆಯಾಡಿ ತೋಷದ
ಹೊನಲಲಿ ಮುಳುಗೆದ್ದುವು ದಿನದಿನಂ, ದೇವರ್ಕಳ
ನಂದನೋದ್ಯಾನಮಂ ಧರೆಗಿಳಿಸಿ. ತರತರದ
ರಸಭರಿತ ಪಣ್ಣುಗಳ ಭುಂಜಿಸಿ ಗೆಣಸುಗೆಡ್ಡೆ
ಅಗೆದು ಶುದ್ಧೀಕರಿಸಿ ತಿಂದುಂಡು ಬಾಳ್ದುವೀ
ಜೀವಗಳ್ ...."

"ಹಾ, ಇದನೇಂ ಒರೆವೆನಗೆ ಪ್ರಭುವೇ ?
ಆಂ ಕೇಳ್ದುದು ಸೀತಾದೇವಿಯುಂ ಕಣ! ನೀನಿದಂ
ಏನೆಂದೊರೆವೆನಗೆ ?? ಮನದಿ ತಿಳಿದು ನೋಡೆನ್ನ
ಪರಮಾತ್ಮನೇ! ಬೇಗನೆನ್ನಯ ಮನಕೆ ಶಾಂತಿ-
ನೆಮ್ಮದಿಗಳನೂಡಿಸುವ್ರೊಲ್ ತಿಳಿಸೈ ಶೀತಲ
ಶಾಂತಿಯ:ಲಿ ನುಣ್ಣನುಣ್ಮಿಬಹ ನಲ್ ಸುದ್ದಿಯಂ
ಕೇಳಲಾತುರಮೆನಗೆನೆ ಸುತ್ತುಬರಿಪ ಮಾತು
ಕಥೆಗಳೇಕೆ ಪೇಳಿಲೆ ದಾಶರಥಿ? ಆಂ ಬಡವೆ,
ತಿರಸ್ಕರಿಸದಿರೆನ್ನನುಂ, ನಿನ್ನ ಎತ್ತರಕೆ
ಏರಲಾರೆನ್ ದಿಟ, ಮನಃಪ್ರಾಣಗಳೆನ್ನನಿಂ
ನಡೆಸುತಿರ್ಪುದು ನಿಮ್ಮ ದಿವ್ಯ ಸಂದರ್ಶನಂ
ಬಯಸಿ. ಎನ್ನಾಸೆಯಂ ಪೂರೈಸದಿರೆ ಬದುಕೇ

ಸುವ್ಯರ್ಥಂ."
ತೀವ್ರತರ ನಿರಾಸೆಯ ದನಿಯಿಂದೆ
ನುಡಿಯುಲಾ ಅಜ್ಜೆ, ಕಂಗಳಂಚಿನಲಿ ಜೆಳ್ಳಿಯ
ಗೆರೆಯುಂತೆವೊಲ್ ಥಳಥಳಿಸಿದುವು ಲವಣಾಶ್ರು ಹನಿ
ತುಂಬಿ. ಸೌಮಿತ್ರಿ ಅಗ್ರಜನ ವದನಾಂಬೋಜ
ಶ್ರೀಯುಂ ನಯನ ಕೋರಕಗಳಿಂದಲಿ ಅರ್ಥ
ವತ್ತಾಗಿ ನೋಡಿ ಕಿರು ಸೂಚನೆಯ ನೀಡಿದಂ,
ಅನುಜನ ಮನೋ ಇಂಗಿತವನರಿದು ತನ್ನನುಂ
ತಾಂ ಸೈಪಿ ಮುಂಬರಿಸಿದಂ ಮತ್ತೆ
"ಕೇಳಜ್ಜಿ,
ಚಿತ್ರಕೂಟದೊಳಿರ್ದ ಸಮಯೆ ಬೆಳಗುಂಬೊಳ್ತು
ಬಳಿಯಿರ್ದ ಯಮುನಾ ನದೀ ತೀರದೊಳೆಮ್ಮಯ
ಪ್ರಾತರ್ವಿಧಿಯಂ ತೀರ್ಚೆ ದೀರ್ಘ ವಿಸ್ತೃತ ಅತಿ
ದೀರ್ಘಿಕೆಯ ತಟನಿಯೊಳ್ ಅಡ್ಡಾಡಿ ಪಣ್ಗಳಂ
ಕಿತ್ತು ತರ್ಪುದು ನಿತ್ಯ ರೂಢಿ. ಕಠಿಣ ವ್ರತದ
ತಪಸ್ಯೆಯದು ಸಾಕ್ಷಾತ್ಕರಣವೆತ್ತಂತೆವೊಲ್
ಸಂದುವು ದಿನಮಾನಗಳ್ ಸುಖ ಭೋಗದಿಂದಲಿ."

ಅನಿತಗೊಳ್ ಬಾಯ್ಬಿಟ್ಟ ಶಬರಿಯುಂ ಕಿನಿಸಿಗೆಯ
ದನಿಯಿಂ ನುಡಿದಳಿಂತೆನೆ "ಅಯ್ಯಾ, ಪ್ರಭುವೇ !
ಆಂ ಕೇಳ್ವುದಂ ಬಿಟ್ಟು ನೀನೊರೆವುದೇಂ ಪೇಳ್ ?"

"ಇರ್ಕೆ, ನಸುವೊಳ್ತು ತಾಳ್ವುದು ನೀನೆಲೆ ತಾಯೇ !"
ಎಂದ ಬಳಿಕಂ ತನ್ನಯ ವದನಾಂಬೋಜದೊಳ್
ತುಂತುರು ತುಂತುರ್ಸೈಪಿ ಮೂಡಿದ ಸ್ವೇದ ಬಿಂದುಗಳಂ
ಉದ್ದಿ ಬಳಿದು ತನ್ನ ತಾಂ ಬಲವಂದು ಸೈಪಿ →

ನುಡಿಸಿದಂ,
"ತಾಯೆ, ನಾಮುಂ ಚಿತ್ರಕೂಟಮಂ
ಸೇರ್ದ್ದುದಿವಮಗೆ ಚೆಲುವಾಯ್ತು. ಅಲ್ಲಲ್ಲಿ ಪುಡುಕುತೆ
ಸುತ್ತಾಡಿ ತಿರುಗಾಡಿ ನಲ್ದಾಣವ ನಾರ್ಯೆದು
ಎಲೆಮನೆಯನು ಕಟ್ಟುವೊಡೆ ಸಜ್ಜುಗೊಳಲಾವುಂ
ಸೀತೆಯೆಲ್ಲಮಂ ನಿರ್ವಹಿಸಿದಳ್ ಎಮ್ಮೊಡನೆ
ಮುಂದಿರ್ದು. ಏಗಳುಂ ಲವಲವಿಕೆಯು ಬೀಡೆನೆ
ಸಲ್ವುದವಳಿಗೆ. ವನಾಂತರದೊಳೆಮ್ಮ ಸರಿಸಮು
ನಡಿಗೆ, ಕಂದಮೂಲಗಳ ಭಕ್ಷಣೆ, ಕೆಲಸ ಕಾರ್ಯದ
ನಿರ್ವಹಣೆ ಆವುದರೊಳ್ ಪಿಂಜರಿದಳಿಲ್ಲ.
ಸೋಲ್ದು ಸೊಗಡಪ್ಪಿದಳಿಲ್ಲ. ಎಮ್ಮೆಲ್ಲ ಭಂಗ
ಬನ್ನದೊಳ್ ಪಾಲ್ಗೊಂಡು ಎಲ್ಲವಗೆಯಲಿ ಮುಕ್ತ
ಮನದಿಂ ದಿಟ್ಟ ಹೃದಯದಿಂ ಸಹಕರಿಸಿದ ಅನು
ರಾಗಿಣಿ. ವನಾಂತರದೊಳ್ ಮಾಯಾಮಿಗಳಿಪ್ಪುದು
ನೀಂ ಬಲ್ಲೆಯಷ್ಟೆ ಅಜ್ಜಿ ? ಮಾಯಾ ಮಿಗವೊಂದು
ಸುಳಿದಾಡಿತು ಕಣ್ಮುಂತೆ. ಮಿಂಚು ಮೈ ಬಳುಕಿಸುತೆ
ಕಣ್ಮನಂಗಳಂ ಸೆಳೆದತ್ತು ಬಲು ಮಾಯೆಯಿಂ !
ಅತಿ ಚತುರೆ ಸೀತೆ ಮುಗ್ಧೆಯಾದಳ್ ಅದಂ ನೋಡಿ !
ನಯನ ಚೈತ್ಯಾಕ್ಷಿಗಳಲಿ ಆಸೆಯು ಬೆಳಕಂ ಚೆಲ್ಲಿ
ಬೇಡಿದಳ್ ಮತ್ತೆಮತ್ತೆಮೇಣ್ಮತ್ತೆ. ಅವಳಾಸೆಯು
ಆಲಾಪಮಂ ಕೇಳ್ದು ಮನಸೆನ್ನ ಕರಗಿದುದು.
ರಮಣೀ ಸಹಜ ಪ್ರೇಮದಿಂ ಬಯಸಿದಳ್ ತನ್ನ
ಏಕಾಂಗಿತನಕೊಂದು ಆರಗಿಳಿಯಾದಪುದೆಂದು
ಆಸೆಯಿಂ ಮನಸೋತು. ವನವಾಸಮಂ ಕಳೆಯೆ

→

ಸಂಗಾತಿಯೆನೆ ಹಾರೈಸಿ ಹಿಡಿದು ತರ್ಪಲೆನ್ನಂ
ಬೇಡಿದಳ್ ನಲ್ಮೆಯಿಂ.
"ನಿಜ ಮೃಗವಲ್ಲವದು
ಮಾಯಾವಿ" ಎಂದಾಂ ತಿಳಿಪಿಯುಂ ಮನಗೊಳ್ಳದೆ
ಬೇಡಿದಳ್ ಕಾಡಿದಳ್ ಗೋಗರೆದಳ್ ಎಳೆಯರ
ಮಾಳ್ಕೆಯಲಿ. ಹಿಡಿದು ತರುವೆನೆಂದಾಂ ಪೊರಮಟ್ಟೆ
ಲಕ್ಷ್ಮಣನಂ ಸತಿಯ ಕಾಪಿಗಿರ್ಸಿ. ಹಾ! ಹತದೃಷ್ಟ
ವ್ಯಕ್ತಿಯಾಂ! ನಿರ್ಭಾಗ್ಯ ನಾಂ! ಪುಣ್ಯಹೀನ ನಾಂ!
ಅರಿತರಿತು ಮಡದಿಯಂ ಕೈಬಿಟ್ಟು ಕೆಟ್ಟೆನಯ್ಯೊ!
ಹಾ, ಏಂ ಪೇಳ್ವೆನೊ ಮುಂದಿನ ಘೋರತರ ವ್ಯಥೆಯು!
ಕೇಳಜ್ಜಿ, ಆ ಮಾಯಾಮೃಗಂ ಕೈಗೆಟುಕಿದೊಲ್
ನಟಿಸಿ ನಟಿಸಿ ಎನ್ನಂ ದೂರ ದೂರ ಸೆಳೆದಿರೆ
ಬಿಟ್ಟೆನೊಂದು ಬಾಣಂ! ಆಗಳಾ ದುಷ್ಟ ಮಿಗ
ಎನ್ನಯ ದನಿಯನನುಕರಿಸಿ ಮಾಯೆಯಿಂ ಲಕ್ಷ್ಮಣಾ!
ಲಕ್ಷ್ಮಣಾ! ಎನುತೆ ಚೀರಿತು ಮನಂಗೆಡಿಸುವೊಲ್!
ಅದಂ ಕೇಳ್ದೆನ್ನ ಮಡದಿ ಬೆದರಿ ಬೆಂದು ಬೇವಾಗಿ
ಮತಿಗೆಟ್ಟು ಲಕ್ಷ್ಮಣನಂ ಕಳಿಪಿದಳೆನ್ನ ರಕ್ಷೆಗೆ,
ಅಜ್ಜೀ! ಅದು ಘೋರ ತಪ್ಪಾಯ್ತು! ಅಗಾಧ
ಅಪರಾಧವಾಯ್ತು. ಕಿರಿಯಾಸೆಯ ಹಿರಿ ಬೆಂಕೆಯಲಿ
ಸುಟ್ಟೀದ ಉಗ್ರ ಸಂಕಟಕೆ ಬಲಿಯಾಯ್ತು. ಎದೆ
ಬಿರಿವಂತೆ ದುಃಖದ ಮಹಾಪೂರಮಂ ಹರಿಸಿ
ಗೋಳಿಟ್ಟುದಾಯ್ತು. ಹಾ, ಸೈಸಲಾರೆನ್ ಅಜ್ಜಿ!
ನಾವಿಲ್ಲದ ಪೊಳ್ತಂ ಆವ ಧೂರ್ತಂ ಹೊಂಚಿ
ಕಾದಿರ್ದನೊ, ಆವೆಡೆಯಲಿ ಅಡಗಿರ್ದನೊ ಕೂಳ

→

ಅಪಹರಿಸಿದನೆನ್ನ ಮಡದಿಯಂ ಕಣ್ ತಪ್ಪಿಸೆಮ್ಮ
ಕುಟಿಯಿಂದೆ. ಹಾ, ಅಂದಿನಿಂದಾವು ಹುಡುಹುಡುಕಿ
ಕಾಡನಡಿಮೇಲುಗೊಳಿಸಿಯುಂ ಸಿಕ್ಕದೆ ಹೋಯ್ತು
ಸತಿಯ ಜಾಡು !"

"ಹಾ ! ಅಂತೇಂ ? ರಾಜಧಾನಿಯೊಳ್
ಇಹಳೆಂದಾಂ ಭಾವಿಸಿದೆ. ಅವಳಿಲ್ಲನೇಂ ನಿನ್ನ
ಬಳಿಯೊಳ್ ?"

ಚೀರಿದ ಶಬರಿ ದುಃಖ ಭಾರದಿಂ ಎದೆ
ಬಿರಿಯೆ ಉರುಳಿ ಬಿದ್ದಳ್ ನೆಲದ ಮೇಲೆ. ದುಃಖದ
ಘೋರ ವ್ಯಘಾತ ಬಿರಿಸಿದುದು ಎದೆಯಂ. ಮುಗ್ಧೆ
ಹಣ್ಮುದುಕಿಯ ಪ್ರಾಣ ತಹತಹಿಸಿತು ಎಳೆಹರಿದ
ಗಾಳಿಪಟದವೊಲ್. ಬಸುವಳಿದು ಮುಚ್ಚಿಗೆ ಸಂದು
ಮೆಲುಮೆಲ್ಲನೆ ಉಸಿರಾಡಿದಳ್ ಇತ್ತಣ ಪರಿವೆ
ಇಲ್ಲದೆಯೆ. ಒಡನೆ ರಾಮ ಲಕ್ಷ್ಮಣರ್ ಮನದೊಳ್
ನೊಂದು ನೀರಾಗಿ ಹಾಹಾಕರಿಸಿ ಅಜ್ಜಿಯಂ
ಪಿಡಿದೆತ್ತಿ ಪುಲ್ಹಾಸಿನಲಿ ಮಲಗಿಸಿ ಕರುಣೆಯ
ಮಳೆಗರೆದು ಶೈತ್ಯೋಪಚಾರವೆಸಗಿದರ್. ಅನು
ಕಂಪೆಯಿಂ, ತುಡಿದುವು ಎದೆಯಾಳದಿ ಜೀವಗಳ್.
ಪಸುರ್ಮದ್ದೂಡಿ ಎನಿತೆನಿತೊ ಪ್ರಯತ್ನಿಸುತೆ
ಉಪಚರಿಸಿದೊಡಂ ಅಜ್ಜಿ ಕಣ್ತೆರೆದಳಿಲ್ಲ.
ತೆರೆದ ಬಾಯ್ಗೆ ಹಾಲೂಡಿದರ್ ತಣ್ಣೀರ್ ಹನಿ
ಚಿಮುಕಿಸಿ–ಕಿವಿಯ ಬಳಿ ಕೂಗಿ ಕರೆದರ್.
ಏಂಗೈದೊಡಂ ಶಬರಿ ಜ್ಞಾನಂಬಡೆದಳಿಲ್ಲ.

ಪಡುವಣ ಸುನೀಲ ಸೀಮೆಯಲಿ ರವಿ ಮುಳುಗಿದಂ.

→

ಕೆಂಕಮಾಗೆಸೆದುವು ಬೆಳ್ಮುಗಿಲೋಳಿ. ತಣ್ಣಗೆ
ತೀಡಿದುದು ತಂಗಾಳಿ. ಸಂಧ್ಯಾ ಸಂಗೀತಮಂ
ಉಲಿದುವು ಬಾನಕ್ಕಿ. ಶಾಂತಿ ಸಮುದಾಯದಲಿ
ತವಿಸಿತ್ತು ಸಾಯಂ ಜಗತ್ತು. ಶಬರಿ ತಾಯಿಯ
ಅಂತರ್ಯದಿ ಸುಗಳಿಗೆಯುರುಸುತಿತ್ತು ಜೀವ ಕಣ.
ಕಂಡು ಕಾಣದವೊಲ್ ಹರಿವ ಉಸಿರ್ ಹೃದಯದ
ತಂತುಗಳಲಿ ಸೆರೆಸಿಲ್ಕಿ ಚಡಪಡಿಸುತಲಿತ್ತು
ದೇಹಾಂತ ಗಳಿಗೆಯುಂ ಬಳಿಸಾರಿ ಬರುತಿರಲ್.
ಅಂತಃಪ್ರಜ್ಞಪ್ತಿ ಪ್ರಜ್ಞೆಗೆ ರಾಮ ಲಕ್ಷ್ಮಣರ
ಗಂಧ ಮಾಧುರ್ಯವದು ಪಾದರಿಯುಲರ್ಗಂಪು
ಸುರ್ಗಿ ಬರ್ಪಂತೆ ತಾನೆ ತಾನ್ಯೈಸಿ ಸುರ್ಗುವುದು
ನಾಸಿಕೇಂದ್ರಿಯಂ, ಪರಮ ಮಾನವೀಯತೆಯಾ
ಮಹದೈಶ್ವರ್ಯಂ ಉಕ್ಕಿ ಹರಿದಂತೆವೊಲ್ ದಿವ್ಯ
ಪ್ರೇಮ ಸೌಹಾರ್ದದ ತನಿರಸಮಂ ಸುರಿವ ಸೇವಾ
ಸಂಪದಂ ಮುಟ್ಟುತಿರ್ದುದು ಪ್ರಾಣಚಂಪಕಂ.
ತಾನೆ ಶ್ರೀರಾಮ ಲಕ್ಷ್ಮಣರ ದಿವ್ಯ ಸೇವೆಯುಂ
ಗೈವುದೆನ್ನ ಆಶಯ ಮಿರುತಿರ್ದು ಆನವರ
ಕೈಸೇವೆಗೆ ಸಂದೆನೆ ? ಎಂದೊಂದು ಚಿಂತೆಯ
ಅಗ್ನಿಜ್ವಾಲೆಯಲಿ ಸಿಲ್ಕಿ ನರಳಿಸಿತು ಎರ್ದೆಯೊಳ್
ಪ್ರಾಣಪಕ್ಷಿ. ನರನಾಡಿಗಳಂ ಹರಿದು ಕೀಳ್ವ
ತೆರದಿ ಹರಿದುದು ದುಃಖದಾವೇಗ ಉಕ್ಕುಕ್ಕಿ.
ನುಡಿಯಲಾರದೆ ತಾಳಲಾರದೆ ಬಲು ಬಳಲಿರ್ದ
ಶಬರಿ ತಾಯಿಯ ಅಂತರಾತ್ಮ ಸುಯ್ದು ನರಳ್ದು
ಹೊರಳ್ದುಳ್ತುದು ತೀವ್ರ ಅಸಹಾಯಕ ಸ್ಥಿತಿಯಲಿ

→

ಸಿಲ್ಕಿ. ಕಂಗಳಂಚಿನಲಿ ಲವಣಾಶ್ರು ಬಿಂದುಗಳು
ಉದುರಿದುವು ಹನಿಹನಿಗೈಸಿ. ಬಿರುಗಣ್ ಬಿಡುತ್ತೆ
ನೋಡಿದಳ್. ದೃಷ್ಟಿಯುಳಿವಕ್ಷಿಗೆ ಕಾಣಿಸದೇನ್.
ಮತ್ತೆ ಬಿರಿಬಿರಿ ಬಿಟ್ಟು ನೋಡಿದಳ್ ಸುತ್ತಲುಂ.
ಇಕ್ಷ್ವಾಕು ವಂಶಜರನಿನ್ನಿತು ನೋಳ್ಪಾಸೆಯಿಂ
ನೋಡಿದಳ್ ಕಣ್ ಅರಳಿಸಿ ಹೊರಳಿಸಿ. ಕಾಣದೇಂ
ಬೆಳಕಳಿದ ನಯನದ್ವಯಂಗಳಿಗೆ. ಆಗಳಾ
ಶ್ರೀರಾಮಚಂದ್ರನುಂ ನೈಬಾಗಿ ಎದುರ್ನೆತ್ತು 'ಅಮ್ಮಾ !'
ಎನೆ ಬಾಯ್ದೆರೆದಳಾಕೆ ಗಂಟಲಾರಿರೆ. ತೆರೆದ
ಬಾಯ್ಗೆ ಹಾಲೊರೆದು ಇನಿದಿನಿದಾಗಿ ಕುಡಿಕುಡಿಸಿ
ಬೂಜಪತ್ರದ ಬಿಜ್ಜಣಿಗೆಯುಂ ಬೀಸಿ ವೀಸುತೆ
ತಣ್ಪಿನ ತನಿಯೂಡಿಸಿದಂ ಘನರಾಮನುಂ.
ಈರ್ವರುಂ ಪರಮೋಪಚಾರದಲಿ ಮುಳುಂಗಿರೆ
ನಸುಪೊಳ್ತು ಉರುಳಿದುದು ಮೆಲ್ಲಮೆಲ್ಲನೆ. ಬಳಿಕ
ತಾಯಿ ಶಬರಿ ಇಹಲೋಕಮಂ ತ್ಯಜಿಸಿದಳ್,
ಸುಯ್ಯನೆ ಹರಿದು ಹೋದುದು ದೀರ್ಘತಮ ಕೊನೆಯುಸಿರ್.
ಸೋದರರ್ ದಿವ್ಯ ಮಾತೃಪ್ರೇಮದಿಂ ಮರುಕದಿಂ
ಕೊನೆಯ ಅಶ್ರುತರ್ಪಣಮನಿತ್ತು ಮರ ಪಾರ್ಥಿವ
ಶರೀರದ ಮೇಲೆ ಪುಷ್ಪಗುಚ್ಛಮನಿರಿಸಿದರ್
ನಮಿಸಿ. ಅರೆದಿನದ ಸ್ನೇಹ ಸಂಬಂಧ ಎದೆಯುಲಿ
ಭಾವನಾತ್ಮಕಶ್ರದ್ಧೆಯುಂ ಮೂಡಿಸಿ ಕರುಣೆಯ
ಕಟ್ಟೆಯನೊಡೆಸಿದತ್ತು ನಿಜ ಮಾತೃಪ್ರೇಮದಿಂ.
ರಘುಕುಲ ಲಲಾಮರ್ ಮನನೊಂದು ಕಡು ಚಿಂತೆಯಂ
ಕೆಂಬೆಂಕೆಯುಲಿ ಮನನೊಂದೊಡಂ ವಿಧಿಯ ಸಂಕಲ್ಪಂ

→

ನೆನೆದು ತಲೆಮಣಿದರ್. ಮನಃಚಿತ್ತದುದ್ವೇಗ
ತೆಕ್ಕನೆ ತನಿಗೊಂಡುದುದು ಸಾಂತ್ವನದ ತನಿಯುಂ
ಜೀಕರ್ೊಳವಿಯುಲಿ ಜಪ್ರನೆರಚಿ ತಣಿಸಿದ ತೆರಂ.
ತಮ್ಮ್ರ ಮುಂದಿನ ಕರ್ತವ್ಯ ಭಾರದ ಯೋಚನೆಯ
ಆಳಕಿಳಿದು ನುಡಿದನ್ ರಘುರಾಮ
"ಸೌಮಿತ್ರೀ,
ಇಂದೆಮ್ಮ್ರಯ ದೌರ್ಭಾಗ್ಯ ಕಣ ! ನತದೃಷ್ಟರಾವು.
ನಮದೂರದೊಳ್ ಋಷ್ಯಾಶ್ರಮಂಗಳ್ ಇರ್ಪುದುಂ
ಸರಿಯಷ್ಟೆ? ಅಲ್ಲಿಗುಯ್ದು ವಿಷಯವನೊರೆದ ಬಳಿಕ
ನಮ್ಮ ಮುಂದಿನ ಭಾರ."
"ದುಃಖದಿಂ ಎದೆ ಬಿರಿದಳ್.
ಇದೊರ್ ಕಡು ಬೆಸನದ ಕಠಿಣ ಪ್ರಕರಣಮಾಯ್ತು."

"ವಿಧಿಯ ಪಾಶವದಾವ ಗಳಿಗೆಯುಲಿ ಬಂದಪುದೊ
ಆರರಿವರ್ ? ಎಲ್ಲಂ ದೈವಾಯತ್ತಂ ತಮ್ಮ್ರಾ !"

ಖಿನ್ನ ಭಾವದಿಂ ನಿಂದ ಲಕ್ಷ್ಮಣನುಂ ಶಿಲಾ
ಭಾರವಾದ ಹೃದಯು ಕಲಶಮಂ ಪೊತ್ತು ಪಡಿ
ಮೊಗದಲಿ ಕಣ್ ಪನಿಯುಂ ತೀಡಿದಂ. ನುಡಿವೆನೆನೆ
ಕೊರಳ್ ಕಟ್ಟಿದುದು ದುಃಖದ ಭಾರ ಜಗ್ಗಿದೊಲ್.

ದೂರ ಕೆನ್ನೀಲಿಯ ಪಶ್ಚಿಮ ದಿಗ್ಭಿತ್ತಿಯ ಮೇಲೆ
ಹರಡಿರ್ದ ಕನಕಕಾಂತಿಯುಲಿ ಮುಳುಗಿ ಮಿಂದವೊಲ್,
ಉಜ್ವಲಿಸಿದುದೊಂದೇ ಬೆಳ್ಳಿ ರಾರಾಜಿಸುತೆ.
ಎರೆಂಕೆಗಳ್ ಬಿದಿರ್ಚಿ ಅಗಲಗಲಿಸಿ ಬೀಸುತೆ .
ಹಾರುತಿವೆ ಕಪ್ರನೆಯು ಕಾಮುಳ್ಳಿಗಳ ಜೋಡಿ.
ವ್ಯಲ್ಲಿಂದೆದುವೊ ಎನಲ್ ಕಾಗೆಗಳ ಹಿರಿದಂಡು →

ಕಾಕಾಕರಿಸಿದುವು ಕಡು ಕರ್ಕರಿಯ ದನಿಯಲಿ.
ಆಗಳೀಂ ಶಬರಜ್ಜಿಯ ಪಕ್ಷಿವಳಗವೆಲ್ಲಂ
ಎಲ್ಲಿರ್ದುವೊ, ಎಲ್ಲಿಂದೈದುವೊ ಎನೆ ಧಾವಿಸಿ
ಬರಬರುತೆ ಕರಕರೆಯ ಕೊರಳ ಧ್ವನಿಯುಂ ಚೆಲ್ಲಿ
ಸೂಸಿದುವು ದುರ್ವಾರ್ತೆಯುಂ ಕೇಳ್ದ ಮಾಳ್ಕೆಯಲಿ.
ಅಂಗಣದ ತುಂಬೆಲ್ಲ ಸುತ್ತಾಡಿ ಚೀರಾಡಿ
ಕ್ರೇಂಕರಿಸಿ ಒಳಹೊರಗೆ ನಿಣುಕುತಿರೆ ಬಗೆಗೆಟ್ಟು
ವೀತರಾಗವೇ ಪರಿದತ್ತು ಕೊರಳ ದನಿಯಲಿ.
ಮೂಕ ಪಕ್ಷಿಗಳೊಡಲು ಬಲು ಸಂಕಟದ ಸುಯ್ಲಿನ
ಗೋಳಿನುರಿ ರಾಮ ಲಕ್ಷ್ಮಣರ ದುಃಖಿತ ದಿವ್ಯ
ಹೃನ್ಮನಗಳಂ ಇರಿಯಿತು ಸಲಾಕೆಗಳಂತೆ.
ರಾಮಲಕ್ಷ್ಮಣರ್ ಅವುಗಳ ತಲೆಯುಂ ನೇವರಿಸಿ
ಮೈಯುಂ ನವುರಾಗಿ ಮೆಲುಮೆಲ್ಲನೆ ನೀಳ್ದು ನೆರೆ
ಬೋಳೈಸಿದರ್ ಮಿಗೆ, ಕರುಣದಿಂ. ಪ್ರೇಮದಿಂ.

ಶಬರಿ ತಾಯಿಯ ಪಾರ್ಥಿವ ಶರೀರ ಆರ ದುಃಖ
ದುಗುಡಗಳನರಿಯದೆಯೆ ಮಲಗಿತ್ತು ಗುಡಿಸಲಿನ
ಪುಲ್ಹಾಸಿನೊಳ್ ಎಲ್ಲಮಂ ಕಾಲದೆಸೆಗೊತ್ತಿ.
ಕಲ್ಯಾಣ ಭಾರತಿಯ ಸಂಜೀವನಯಾನಂ
ರಘುಕುಲಲಲಾಮರ ಸಂದರ್ಶನ ಭಾಗ್ಯದಿಂ
ಪರಿಪೂರ್ಣತೆಯುಂಬಡೆದು ಪರಿಪಾವನವಾಯ್ತು.
ರಾಮರಸಪಾನ ಮತ್ತ ಜೀವ ಮಲರಿದತ್ತು
ಸ್ವರ್ಗಧಾಮದ ಬೊಕ್ಕ ನಂದನವನವ ಸೇರಿ.
ಪದ್ದಳಿಯ ಮಲ್ಲಿಕಾವೇದದಲಿ ಧವಳಿಮಾ
ಕೀರ್ತಿಯಾಗಿ ಶ್ರೀರಾಮನಡಿದಾವರೆಗಳಲಿ

→

ಸೇರಿದ ಶಬರಿಯ ಜೀವನ ಧನ್ಯ ! ದಿವ್ಯಾತ್ಮ
ಧನ್ಯ ! ರಾಮಾಯಣದ ಸಿಂಧುವಿನೊಳೊಂದು ವರ
ಬಿಂದುವಾಗಿ ಜೃಂಭಿಸಿದ ಶಬರಿಯೆ ನಿನಗೆ ನಮೊ !
ಮತ್ತೆ ಮತ್ತೆ ನಮೋನ್ನಮಃ !

— ೦ —

ಮಲ್ಲಿಕಾ ಕೃತಿಗಳು

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ

(ಕಥಾ ಸಂಕಲನ)

೬) ಶ್ರೀಮುಖಿ
೭) ಬಹುರತ್ನಾವಸುಂಧರಾ
೮) ರತ್ನಗರ್ಭಾವಸುಂಧರಾ

(ಕವಿತಾ ಸಂಕಲನ)

೯) ಪೂಜಾವಸಾನ ಸಮಯೇ....!
೧೦) ಧ್ಯಾನಾವಸಾನ ಸಮಯೇ....!

(ಪೌರಾಣಿಕ ನಾಟಕ)

೧೧) ಪುಣ್ಯಪಯೋನಿಧಿ
೧೨) ಪುಣ್ಯಾಭಿಸಾರ
೧೩) ತರಂಗಿಣಿ (ಸಾನೆಟ್‌ಗಳು)

(ಕಥಾ ಸಂಕಲನ)

೧೪) ಸುಧಾಮಣಿ
೧೫) ರಮಣೀಮಣಿ
೧೬) ಲಿಯೋನಾ
೧೭) ಶ್ರೀಹರ್ಷಲಾ
೧೮) ವೈಶಾಖೀ ಪರ್ವ
೧೯) ಫಾಲ್ಗುಣೀ ಪರ್ವ

(ಕಾದಂಬರಿ)

೨೦) ಮನೋನ್ಮಣಿ
೨೧) ಸಂತ್ರಾಸಿನಿ
೨೨) ಆಸೆಯ ಸುಳಿಯಲ್ಲಿ

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೨೩) ಗಗನ ಕುಸುಮ
೨೪) ಜೀವನ ಕುಸುಮ
೨೫) ಚಂಪಕ ರಾಜಿ
೨೬) ಕಾವ್ಯಾನಂದ ನಂದಿನಿ
೨೭) ಕಸ್ತೂರಿ ಮಾಲಿಕಾ
೨೮) ಮಂದಾರ ಮಾಲಿಕಾ
೨೯) ಬಕುಳ ರಾಜಿ
೩೦) ವಿಜಯ ಗಾಥಾ
೩೧) ಗಾನ ತೀರ್ಥ
೩೨) ನಾದ ಬಿಂದು
೩೩) ಭಾವಾನಂದ ನಂದಿನಿ

(ಸಂಜೀವನ ಕಾವ್ಯ)

೩೪) ಮಂಗಳ ಭಾರತಿ
೩೫) ಕಲ್ಯಾಣ ಭಾರತಿ
೩೬) ಉತ್ತರೋತ್ತರಣಿ
೩೭) ರಾಗಾನುರಾಗಿಣಿ
೩೮) ಪ್ರಫುಲ್ಲ ಭಾರತ (ಅಚ್ಚಿನಲ್ಲಿ)

(ಗದ್ಯ ಕಾವ್ಯ)

೩೯) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೦) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೧) ದೂರ ದೇಶದಲ್ಲಿ
೪೨) ಬೆಳದಿಂಗಳ ರಾತ್ರಿ
೪೩) ರಂಗನ ಸಾಹಸ
೪೪) ಓಹಿಯೋಜ ಸರೋವರ
೪೫) ಕೌಶಿಕನ ಗೊಂಬೆ
೪೬) ವಿಶೇಷ ಸುದ್ದಿ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು–560 025